ಕರ್ನಾಟಕ ವಿಧಾನ ಸಭೆ
ಸೋಮವಾರ 26ನೇ ಮಾರ್ಚ್ 2001ರಂದು
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಮಧ್ಯಾಹ್ನ 12-30 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರಾದ ಶ್ರೀ ಎಂ.ವಿ ವೆಂಕಟಪ್ಪ ರವರು
ಪೀಠವನ್ನು ಅಲಂಕರಿಸಿದ್ದರು.
26 3 10 (1) 12 30

ಅಧ್ಯಕ್ಷರು :- ಇವತ್ತಿನ ಕಾರ್ಯಕ್ರಮದ ಪ್ರಕಾರ ಹಣಕಾಸು ಸಚಿವರೂ ಆದ ಮಾನ್ಯ ಮುಖ್ಯಮಂತ್ರಿಗಳು 2001-200ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸಬೇಕೆಂದು ಕೋರುತ್ತೇನೆ.

2000-01ರ ಮುಂಗಡ ಪತ್ರವು ಹೊಸ ಹೆಜ್ಜೆಗಳ, ಹೊಸ ಯೋಜನೆಗಳ ಮತ್ತು ಹೊಸ ಕಾರ್ಯಕ್ರಮಗಳ ಮುಂಗಡಪತ್ರವಾಗಿತ್ತು. ಆದರೆ ಈ ಸಾಲಿನ ಮುಂಗಡ ಪತ್ರವು ಪ್ರಧಾನವಾಗಿ ಕಳೆದ ವರ್ಷ ನಾವು ಜಾರಿಗೊಳಿಸಿರುವ ಯೋಜನೆಗಳನ್ನು ಬೆಳೆಸಿ ಸದೃಢಗೊಳಿಸಲೆಂದೇ ಮಂಡಿಸಿರುವ ಮುಂಗಡಪತ್ರವಾಗಿದೆ.

2. ಹನ್ನೆರಡು ತಿಂಗಳ ಹಿಂದೆ, ನನ್ನ ಸರ್ಕಾರದ ಪ್ರಥಮ ಮುಂಗಡಪತ್ರವನ್ನು ಮಂಡಿಸುವಾಗ, ನಾನು ನಮ್ಮ ರಾಜ್ಯವು ಎದುರಿಸುತ್ತಿರುವ ಹತ್ತು ಪ್ರಮುಖ ಸವಾಲುಗಳನ್ನು ಗುರುತಿಸಿದ್ದೆ. ಅವುಗಳೆಂದರೆ ;

- ಮೊದಲನೆಯದಾಗಿ, ಬಡತನ ನಿವಾರಣೆ, ಮಹಿಳೆಯರ ಸಶಕ್ತಿಕರಣ ಮತ್ತು ಸಮಾಜದ ದುರ್ಬಲ ವರ್ಗದವರಿಗೆ ಆಹಾರ ಮತ್ತು ಪೌಷ್ಠಿಕತೆಯ ರಕ್ಷಣೆ ;
- ಎರಡನೆಯದಾಗಿ, ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಶೇ 7ರಿಂದ 8 ರಷ್ಟು ವಾರ್ಷಿಕ ಬೆಳವಣಿಗೆ ದರ ಸಾಧಿಸಲು ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳಿಗೆ ಚಾಲನೆ ;
- ಮೂರನೆಯದಾಗಿ, ಕರ್ನಾಟಕದ ಕೃಷಿ, ತೋಟಗಾರಿಕೆ, ಪುಷ್ಪೋದ್ಯಮ, ಮೀನುಗಾರಿಕೆ ಮತ್ತು ಪಶುಸಂಗೋಪನೆ ಕ್ಷೇತ್ರಗಳ ಬುನಾದಿಯ ಸುಭದ್ರತೆ ;
- ನಾಲ್ಕನೆಯದಾಗಿ, ನೀರಾವರಿ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗೆ ನಿರಂತರ ಹೂಡಿಕೆ ಮತ್ತು ಈಗಾಗಲೇ ಸೃಜಿಸಿರುವ ನೀರಾವರಿ ಸೌಲಭ್ಯದ ಸಂಪೂರ್ಣ ಸದ್ಬಳಕೆ ;
- ಐದನೆಯದಾಗಿ, ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಸಹಭಾಗಿತ್ವದ ಮೂಲಕ ಹೆಚ್ಚು ಬಂಡವಾಳ ಹೂಡಿ ವಿದ್ಯುತ್, ರಸ್ತೆ, ನೀರು ಪೂರೈಕೆ ಮತ್ತು ನೈರ್ಮಲ್ಯ ಇತ್ಯಾದಿ ಮೂಲಸೌಕರ್ಯಗಳಲ್ಲಿ ಗಣನೀಯ ಅಭಿವೃದ್ಧಿ ;

- ಆರನೆಯದಾಗಿ, ಸಾಮಾಜಿಕ ಹಿಂದುಳಿವಿಕೆಯ ವಿರುದ್ಧ ದಿಟ್ಟ ಹೋರಾಟ ; ಹಿಂದುಳಿದ ಜಿಲ್ಲೆಗಳಲ್ಲಿನ ಮಹಿಳಾ ಸಾಕ್ಷರತಾ ಪ್ರಮಾಣದ ಹೆಚ್ಚಳ ಮತ್ತು ವಿಶೇಷವಾಗಿ ಕಡುಬಡತನದ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೌಲಭ್ಯದ ವಿಸ್ತರಣೆ ;

- ಏಳನೆಯದಾಗಿ, ಹೆಚ್ಚು ಉದ್ಯೋಗ ಸೃಜಿಸುವ ಕೈಗಾರಿಕೆಗಳಾದ ಎಂಜಿನಿಯರಿಂಗ್, ಜವಳಿ, ಕೃಷಿ ಸಂಸ್ಕರಣೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಔಷಧಿ ಉತ್ಪಾದನೆ ಕ್ಷೇತ್ರಗಳಲ್ಲಿ ಬೆಳವಣಿಗೆ ಚುರುಕುಗೊಳಿಸುವ ಕೈಗಾರಿಕಾಪರ ನೀತಿಯ ಮುಂದುವರಿಕೆ ;

- ಎಂಟನೆಯದಾಗಿ, ಎಲ್ಲ ಹಂತಗಳಲ್ಲಿ ಪಾರದರ್ಶಕ, ಜವಾಬ್ದಾರಿಯುತ ಮತ್ತು ಪ್ರತಿಸ್ಪಂದಿ ಆಡಳಿತದ ನೀಡಿಕೆ ;

- ಒಂಭತ್ತನೆಯದಾಗಿ, ರಾಜ್ಯದ ಎಲ್ಲ ಪ್ರದೇಶಗಳಲ್ಲೂ ಬೆಳವಣಿಗೆ ಚಟುವಟಿಕೆಗಳಿಗೆ ಚಾಲನೆ ಮತ್ತು ಸಮಾನ ಪ್ರಾದೇಶಿಕ ಅಭಿವೃದ್ಧಿ ಸಾಧನೆ ;

- ಹತ್ತನೆಯದಾಗಿ, ನಮ್ಮ ಸಾಮಾಜಿಕ - ಆರ್ಥಿಕ ಕಾಳಜಿಯ ಸಾಕಾರಕ್ಕಾಗಿ ಸಾರ್ವಜನಿಕ ವೆಚ್ಚದ ಆದ್ಯತೆಗಳ ನಿರೂಪಣೆ, ತನ್ಮೂಲಕ ರಾಜ್ಯದ ಆರ್ಥಿಕ ವ್ಯವಸ್ಥೆಯ ಪುನರ್‌ರಚನೆ ;

3. ಈ ಸವಾಲುಗಳು ಈಗಲೂ ಇವೆ. ಆದಾಗ್ಯೂ ಕಳೆದ ವರ್ಷದತ್ತ ಹಿಂದಿರುಗಿ ನೋಡಿದರೆ ನನಗೆ ಸಮಾಧಾನದ ಭಾವನೆ ಮೂಡುತ್ತದೆ. ಈ ಸವಾಲುಗಳನ್ನು ಎದುರಿಸಲು ನನ್ನ ಸರ್ಕಾರವು ದಿಟ್ಟತನದಿಂದ ಮುನ್ನಡೆಯುತ್ತಿದೆ ಎಂದು ನಾನು ಆತ್ಮ ವಿಶ್ವಾಸದಿಂದ ಹೇಳಬಲ್ಲೆ. ಈ ನಿಟ್ಟಿನಲ್ಲಿ ನಾವು ಇನ್ನೂ ಹೆಚ್ಚಿನ ಸಾಧನೆ ಮಾಡಬೇಕಿದೆ. ನಾವದನ್ನು ಮಾಡುತ್ತೇವೆ. ಈ ದಿಕ್ಕಿನಲ್ಲಿ ನಾವು ದೃಢ ಆರಂಭ ಮಾಡಿದ್ದೇವೆ. ಆಡಳಿತದಲ್ಲಿ ಜವಾಬುದಾರಿಕೆ ಮತ್ತು ಪಾರದರ್ಶಕತೆ ಪ್ರದರ್ಶಿಸುವ ನಮ್ಮ ಬದ್ಧತೆಗೆ ಅನುಗುಣವಾಗಿ ಈ ಮುಂಗಡ ಪತ್ರದೊಡನೆ ಪ್ರಪ್ರಥಮ ಬಾರಿಗೆ ಪ್ರತ್ಯೇಕ ಅನುಷ್ಠಾನ ವರದಿಯನ್ನು ನೀಡುತ್ತಿದ್ದೇವೆ. ನನ್ನ ಮೊದಲ ಮುಂಗಡ ಪತ್ರದಲ್ಲಿ ನಾನು ಭರವಸೆ ನೀಡಿದ್ದ ಪ್ರತೀ ಕಾರ್ಯಕ್ರಮದ ಅನುಷ್ಠಾನ ಸ್ಥಿತಿ ಈ ವರದಿಯಲ್ಲಿದೆ. ಇನ್ನು ಮುಂದೆ ಈ ಅನುಷ್ಠಾನ ವರದಿ ಮುಂಗಡ ಪತ್ರ ಮಂಡನೆಯ ಒಂದು ಭಾಗವಾಗಿರುತ್ತದೆ.

ಆರ್ಥಿಕ ಚೇತರಿಕೆ

4. ಮಾನ್ಯರೆ, ನಾನು ಈ ವರ್ಷದ ಮುಂಗಡ ಪತ್ರವನ್ನು ವಿಶಿಷ್ಟ ರೀತಿಯಿಂದ ಆರಂಭಿಸುತ್ತಿದ್ದೇನೆ. ಸಾಮಾನ್ಯವಾಗಿ, ಆರ್ಥಿಕ ವಿಭಾಗವು ಮುಂಗಡಪತ್ರದ ಅಂತಿಮ ಭಾಗದಲ್ಲಿರುತ್ತದೆ. ಆದರೆ ನಾನು ಇದರಿಂದ ದೂರ ಸರಿದು ಈ ಸಾಲಿನ ಮುಂಗಡ

ಪತ್ರವನ್ನು ಮಂಡಿಸುತ್ತಿದ್ದೇನೆ. ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಯಾಗದ ಹೊರತು ನಮ್ಮ ರೈತರಿಗೆ, ಸಮಾಜದ ದುರ್ಬಲರಿಗೆ, ಯುವಕರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಹಾಗೂ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಯಾವುದೇ ರೀತಿಯ ಮೌಲಿಕ ಕೊಡುಗೆ ನೀಡಲು ಸಾಧ್ಯವಿಲ್ಲವೆಂದು ನಾನು ನಂಬಿರುವುದೇ ಇದಕ್ಕೆ ಕಾರಣ.

5. ಕರ್ನಾಟಕವು ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿಲ್ಲ ನಿಜ. ಹಾಗೆಂದು ರಾಜ್ಯದ ಆರ್ಥಿಕ ಸ್ಥಿತಿ ಆಶಾದಾಯಕವಾಗಿಯೂ ಇಲ್ಲ. ನಾವೀಗ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳದಿದ್ದರೆ ಆರ್ಥಿಕ ಸ್ಥಿತಿ ಹದಗೆಟ್ಟು ರಾಜ್ಯದ ಸಾಮಾಜಿಕ - ಆರ್ಥಿಕ ಅಭಿವೃದ್ಧಿಗೆ ಧಕ್ಕೆಯುಂಟಾಗುತ್ತದೆ. ನಾವೀಗ ಆರ್ಥಿಕ ಚೇತರಿಕೆಯ ಕಠಿಣ ಮತ್ತು ಸುದೀರ್ಘ ಪ್ರಕ್ರಿಯೆಯನ್ನು ಆರಂಭಿಸುತ್ತಿದ್ದೇವೆ. ಪಾವತಿಸಬೇಕಾದ ಬಡ್ಡಿ ವೇತನ ಮತ್ತು ಪಿಂಚಣಿಗಳು ನಮ್ಮ ಒಟ್ಟಾರೆ ರಾಜಸ್ವ ಆದಾಯದ ಶೇಕಡಾ 60 ರಷ್ಟನ್ನು ಕಬಳಿಸುವ ಸ್ಥಿತಿ ಅಪೇಕ್ಷಣೀಯವೂ ಅಲ್ಲ ಅಥವಾ ಭರಿಸಲೂ ಸಾಧ್ಯವಿಲ್ಲ.

6. 2000-01 ರ ಪರಿಷ್ಕೃತ ಅಂದಾಜಿನಂತೆ ವಿತ್ತೀಯ 4148 ಕೋಟಿ ರೂ.ಗಳಾಗಿದೆ. ನಾನು 2004-05 ರ ವೇಳೆಗೆ ರಾಜಸ್ವ ಕೊರತೆಯನ್ನು ಸೊನ್ನೆಗೆ ತರಲು ಹಾಗೂ ವಿತ್ತೀಯ ಕೊರತೆಯನ್ನು ಜಿಎಸ್‌ಡಿಪಿಯ ಶೇ 3 ಕ್ಕೆ ನಿಲ್ಲಿಸಲು ಬದ್ಧನಾಗಿದ್ದೇನೆ. ಇದನ್ನು ಸಾಧಿಸಲು ಮಧ್ಯಮಾವಧಿ ಆರ್ಥಿಕ ಯೋಜನೆಯೊಂದನ್ನು ಸಿದ್ಧಪಡಿಸಿದ್ದೇವೆ. ವರ್ಷದಿಂದ ವರ್ಷಕ್ಕೆ ಆರ್ಥಿಕ ಚೇತರಿಕೆ ಹೇಗೆ ಆಗುತ್ತದೆ ಎನ್ನುವುದರ ವಿವರಗಳು ಇದರಲ್ಲಿವೆ. ನಾವು ರೈತರ ಹಿತವನ್ನು ಸಂರಕ್ಷಿಸುತ್ತಲೇ ವಿದ್ಯುತ್ ವಲಯವನ್ನು ಎಷ್ಟು ಬೇಗ ವಾಣಿಜ್ಯ ಲಾಭದಾಯಕನಾಗಿ ಎನ್ನುವುದರ ಮೇಲೆ ನಮ್ಮ ರಾಜ್ಯದ ಆರ್ಥಿಕ ಚೇತರಿಕೆ ನಿಂತಿದೆ. ಮಧ್ಯಮಾವಧಿ ಆರ್ಥಿಕ ಯೋಜನೆಯ ಜೊತೆ ಹೊಂದಿಕೊಳ್ಳುವಂತೆ ವಿದ್ಯುತ್ ವಲಯದ ಆರ್ಥಿಕ ಪುನರ್‌ರಚನಾ ಯೋಜನೆಯನ್ನು ತಯಾರಿಸಲಾಗಿದೆ. ಮಧ್ಯಮಾವಧಿ ಆರ್ಥಿಕ ಯೋಜನೆ ಮತ್ತು ವಿದ್ಯುತ್ ವಲಯದ ಆರ್ಥಿಕ ಪುನರ್‌ರಚನಾ ಯೋಜನೆಗಳನ್ನು ಬಜೆಟ್ ಅಧಿವೇಶನದಲ್ಲಿಯೇ ಮಂಡಿಸಲಾಗುವುದು.

7. ಮುಂದಿನ ಅಧಿವೇಶನದಲ್ಲಿ ನಾನು ಆರ್ಥಿಕ ಜವಾಬ್ದಾರಿ ಮಸೂದೆಯನ್ನು ಮಂಡಿಸಲಿದ್ದೇನೆ. ನನ್ನ ಸರ್ಕಾರವು ಎಲ್ಲಾ ರೀತಿಯ ಬಾಹ್ಯ ಮತ್ತು ಆಂತರಿಕ ಸಹಾಯಧನಗಳ ಬಗ್ಗೆ ಸಮಗ್ರವಾದ ಅಧ್ಯಯನ ನಡೆಸುವಂತೆ ಬೆಂಗಳೂರಿನಲ್ಲಿರುವ ಸಾಮಾಜಿಕ-ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯನ್ನು ಕೋರಿದ್ದು ಸೂಕ್ತ ಕ್ರಮಗಳು ಜಾರಿಗೆ ಬರಲಿವೆ. ಸರ್ಕಾರಿ ವೆಚ್ಚದಲ್ಲಿ ಶಿಸ್ತು ಮೂಡಿಸಲು ಹಾಗೂ ಸಾರ್ವಜನಿಕ ವೆಚ್ಚ ನಿರ್ವಹಣೆಯಲ್ಲಿ ಸುಧಾರಣೆ ತರಲು ಸರ್ಕಾರವು ವೆಚ್ಚ ಪರಿಶೀಲನಾ ಸಮಿತಿಯನ್ನು ರಚಿಸಿದೆ. ಇದು ನನಗೆ ವೈಯಕ್ತಿಕವಾಗಿ ಅತಿ ಪ್ರಮುಖ್ಯವಾದ ಅಂಶವಾಗಿದೆ.

8. ರಾಜ್ಯದ ಆರ್ಥಿಕ ಸ್ಥಿತಿಯನ್ನು ಪುನರ್‌ರಚಿಸಲು ನಾನು ಮಾನ್ಯ ಸದಸ್ಯರ ಸಹಕಾರವನ್ನು ಬಯಸುತ್ತೇನೆ. ಇದರಿಂದ ನಾವು ಕೃಷಿ, ನೀರಾವರಿ, ಶಿಕ್ಷಣ, ಆರೋಗ್ಯ

ಮತ್ತು ಸಾಮಾಜಿಕ ಸುರಕ್ಷತೆಗೆ ಹೆಚ್ಚು ಹಣವನ್ನು ವೆಚ್ಚ ಮಾಡಬಹುದು ; ಸೂಕ್ತ ಆದಾಯ ತರುವ ಬಂಡವಾಳ ವೆಚ್ಚಗಳಿಗೆ ಮಾತ್ರ ಸಾಲವನ್ನು ಬಳಸಿಕೊಳ್ಳಬಹುದು ; ನಮ್ಮೆಲ್ಲ ಸಹಾಯಧನಗಳು ಮತ್ತು ಸಾಮಾಜಿಕ ಹೊಣೆಗಾರಿಕೆಗಳನ್ನು ಮುಂಗಡ ಪತ್ರದಲ್ಲಿ ಪಾರದರ್ಶಕವಾಗಿ ತೋರಿಸಬಹುದು. ವಿತ್ತೀಯ ಕೊರತೆಯನ್ನು ಸಹನೀಯ ಮಟ್ಟಕ್ಕೆ ತಂದು ನಿಲ್ಲಿಸಬಹುದು.

ವಿದ್ಯುತ್

9. ರಾಜ್ಯದ ಆರ್ಥಿಕ ಸ್ವಾಸ್ಥ್ಯ ಕಾಪಾಡಲು ವಿದ್ಯುತ್ ವಲಯದ ಸುಧಾರಣೆ ಎಷ್ಟು ಪ್ರಾಮುಖ್ಯ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸದ ಹೊರತು ನಾವು ಯಾವುದೇ ಸಾಮಾಜಿಕ ಮತ್ತು ಭೌತಿಕ ಮೂಲಸೌಕರ್ಯಗಳಿಗೆ ಹೆಚ್ಚು ಹಣ ಹೂಡಲಾಗದು ; ಬಡತನದ ವಿರುದ್ಧ ಹೋರಾಡಲಾಗದು. ವಿದ್ಯುತ್ ವಲಯದಲ್ಲಿ ಈಗಿರುವ ವ್ಯವಸ್ಥೆ ನಿರ್ವಹಣೆ ಮತ್ತು ಆರ್ಥಿಕ ಸ್ಥಿತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ತರದ ಹೊರತು ಆರ್ಥಿಕ ಸುಧಾರಣೆ ಸಾಧ್ಯವೇ ಇಲ್ಲ. ಮುಂದಿನ ಮೂರು ವರ್ಷಗಳಲ್ಲಿ ಎಲ್ಲ ಗ್ರಾಹಕರಿಗೆ ಮೀಟರುಗಳನ್ನು ಅಳವಡಿಸಲು ನನ್ನ ಸರ್ಕಾರವು ಬದ್ಧವಾಗಿದೆ. ರಾಜ್ಯ ಸರ್ಕಾರವು ವಿದ್ಯುತ್ ವಲಯಕ್ಕೆ ಸಂಬಂಧಿಸಿದ ತನ್ನ ಆರ್ಥಿಕ ಹೊಣೆಗಳನ್ನು ಪೂರ್ಣವಾಗಿ ಭರಿಸಲಿದೆ. ವಿದ್ಯುತ್ ವಿತರಣೆಯ ಖಾಸಗೀಕರಣವನ್ನು ಜೂನ್ 2002 ರೊಳಗೆ ಮಾಡಲಾಗುವುದು.

10. ನಾವು ಕರ್ನಾಟಕ ವಿದ್ಯುತ್ ನಿಗಮದ ಮೂಲಕ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತಿದ್ದೇವೆ. 210 ಮೆಗಾವಾಟ್ ಸಾಮರ್ಥ್ಯದ ರಾಯಚೂರು 7ನೇ ಘಟಕವು ಮಾರ್ಚ್ 31, 2003ರ ವೇಳೆಗೆ ಕಾರ್ಯಾರಂಭ ಮಾಡಲಿದೆ. 290 ಮೆಗಾವಾಟ್ ಸಾಮರ್ಥ್ಯದ ಆಲಮಟ್ಟಿ ವಿದ್ಯುತ್ ಕೇಂದ್ರವು ಫೆಬ್ರವರಿ 2004ಕ್ಕೆ ಆರಂಭವಾಗಲಿದೆ. 60 ಮೆಗಾವಾಟ್‌ನ ಗೇರುಸೊಪ್ಪ ಜಲವಿದ್ಯುತ್ ಕೇಂದ್ರದ ಎರಡನೆ ಘಟಕವು ಮೇ 31, 2001ಕ್ಕೆ, 60 ಮೆಗಾವಾಟ್‌ನ ಮೂರನೆ ಘಟಕವು ಅಕ್ಟೋಬರ್ 2001ಕ್ಕೆ ಮತ್ತು 60 ಮೆಗಾವಾಟ್‌ನ ನಾಲ್ಕನೆ ಘಟಕವು ಮಾರ್ಚ್ 31, 2002ರ ವೇಳೆಗೆ ಕಾರ್ಯಾರಂಭ ಮಾಡಲಿವೆ. 500 ಮೆಗಾವಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿಜಯನಗರ ವಿದ್ಯುತ್ ಯೋಜನೆಯನ್ನು ಜಂಟಿಸಹಯೋಗದಲ್ಲಿ ಕೈಗೆತ್ತಿಕೊಳ್ಳುತ್ತಿದ್ದು ಈ ವರ್ಷ ಇದರ ಕಾಮಗಾರಿ ಆರಂಭವಾಗಲಿದೆ. 270 ಮೆಗಾವಾಟ್ ಸಾಮರ್ಥ್ಯದ ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಲು ನಾವು ಪ್ರಯತ್ನ ನಡೆಸಿದ್ದೇವೆ. ಕರ್ನಾಟಕವು ಐ.ಡಿ.ಎಫ್.ಸಿ ಜೊತೆ ಸುಧಾರಣೆ ಆಧಾರಿತ ವಿದ್ಯುತ್ ಯೋಜನೆಗಳಿಗೆ ಧನ ಸಹಾಯ ಪಡೆಯಲು ಬಹುಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿದ ಮೊದಲ ರಾಜ್ಯವಾಗಿದೆ. ಇದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ನಾನು ಸಂತೋಷಪಡುತ್ತೇನೆ.

11. ನಾವು ವಿದ್ಯುತ್ ವ್ಯವಸ್ಥೆಯ ದಕ್ಷತೆಯನ್ನು ಸುಧಾರಿಸಿ ಮುಂದಿನ ನಾಲ್ಕು ವರ್ಷಗಳಲ್ಲಿ ವಿದ್ಯುತ್ ವಿತರಣೆ ಮತ್ತು ಪ್ರಸರಣಾ ನಷ್ಟವನ್ನು ಶೇ. 9 ರಷ್ಟು ಕಡಿಮೆಗೊಳಿಸುತ್ತೇವೆ. ನಷ್ಟ ಕಡಿಮೆ ಮಾಡದ ಹೊರತು ವಿದ್ಯುತ್ ವಲಯವು ಚೇತರಿಸಿಕೊಳ್ಳುವುದಿಲ್ಲ. ವಿದ್ಯುತ್ ಕಳ್ಳತನವನ್ನು ಹತ್ತಿಕ್ಕಲು ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ನಾವು ಹೊಸ ಮಸೂದೆಯೊಂದನ್ನು ತರಲಿದ್ದೇವೆ. ಇಂತಹ ಅಪರಾಧಗಳಿಗೆ ಉಗ್ರ ಶಿಕ್ಷೆ ಮತ್ತು ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಈ ಮಸೂದೆ ಅವಕಾಶ ಕಲ್ಪಿಸುತ್ತದೆ. ಕೆಪಿಟಿಸಿಎಲ್ 2001-02 ರಲ್ಲಿ 910 ಕೋಟಿ ರೂ.ಗಳನ್ನು ಬಂಡವಾಳ ವೆಚ್ಚದ ಮೇಲೆ ಹೂಡಲಿದೆ. ಇದರಲ್ಲಿ 400 ಕೋಟಿ ರೂ.ಗಳನ್ನು ಗ್ರಾಮೀಣ ಪ್ರದೇಶದ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಸದೃಢಗೊಳಿಸಲು ಬಳಸಲಾಗುತ್ತದೆ. ತ್ವರಿತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ (ಎಪಿಡಿಪಿ) ಕೇಂದ್ರ ಸರ್ಕಾರದಿಂದ ನೆರವು ಪಡೆದ ಮೊಟ್ಟ ಮೊದಲ ರಾಜ್ಯ-ಕರ್ನಾಟಕ. ಇದು ವಿದ್ಯುತ್ ವಲಯದ ಸುಧಾರಣೆಯ ಬಗ್ಗೆ ನಮಗಿರುವ ಬದ್ಧತೆಗೆ ಸಂದ ಪುರಸ್ಕಾರವಾಗಿದೆ. ಈ ಯೋಜನೆಯಡಿ 2000-01 ರಲ್ಲಿ 293 ಕೋಟಿ ರೂ.ಗಳನ್ನು ನಿಗದಿ ಮಾಡಲಾಗಿತ್ತು. 2001-02 ರಲ್ಲಿ 400 ಕೋಟಿ ರೂ.ಗಳನ್ನು ನಿಗದಿ ಪಡಿಸುವ ನಿರೀಕ್ಷೆ ಇದೆ. ಈ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿನ ವಿತರಣೆ ಮತ್ತು ಉಪ ಪ್ರಸರಣ ಜಾಲಗಳ ಸುಧಾರಣೆಗೆ ಹೆಚ್ಚು ಗಮನಹರಿಸುತ್ತದೆ.

12. ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಗ್ರಾಹಕರಿಂದ ನಮಗೆ 41.5 ಕೋಟಿ ರೂ.ಗಳ ವಿದ್ಯುತ್ ಬಾಕಿ ಬರಬೇಕಾಗಿದೆ. ಸಮಾಜದ ದುರ್ಬಲ ವರ್ಗದವರ ರಕ್ಷಣೆಯ ದ್ಯೋತಕವಾಗಿ ಈ ಬಾಕಿಯನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ. ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸೌಕರ್ಯ ಪಡೆಯಲು ಅನುಕೂಲವಾಗುವಂತೆ ನಮ್ಮ ಸರ್ಕಾರವು ಯೋಜನೆಯಲ್ಲಿ ಮಾರ್ಪಾಡು ಮಾಡಿದೆ. ಇದರಂತೆ ಐದು ಅಥವಾ ಅದಕ್ಕಿಂತ ಹೆಚ್ಚು ಫಲಾನುಭವಿಗಳು ಒಂದೆಡೆ ಇದ್ದರೆ ಅಲ್ಲಿಗೆ ಒಂದು ಅಥವಾ ಎರಡು ವಿದ್ಯುತ್ ಕಂಬಗಳನ್ನು ನೆಟ್ಟು ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಕುಟೀರ ಜ್ಯೋತಿ ಮತ್ತು ಭಾಗ್ಯಜ್ಯೋತಿ ಯೋಜನೆಯಡಿ 2001-02 ರಲ್ಲಿ ಎರಡು ಲಕ್ಷ ಫಲಾನುಭವಿಗಳಿಗೆ ನೆರವು ನೀಡಲಾಗುವುದು.

13. ನನ್ನ ಸರ್ಕಾರವು ರೈತರಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಸಲು ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ನಾವು ಸದಾ ರೈತರ ಅಭ್ಯುದಯವನ್ನೇ ಮನಸ್ಸಿನಲ್ಲಿಟ್ಟುಕೊಂಡಿರುತ್ತೇವೆ. ಆದ್ದರಿಂದಲೇ ನಾವು ಕಳೆದ ಕೆಲವು ತಿಂಗಳಿಂದ ಬಹುತೇಕ ಕೃಷಿ ಉತ್ಪನ್ನಗಳ ಬೆಲೆ ಕುಸಿದಿರುವುದನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ವಿದ್ಯುತ್ ಶುಲ್ಕ ಆದೇಶವನ್ನು ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಬಂಧಿಸಿದಂತೆ ಸಧ್ಯಕ್ಕೆ ಅನುಷ್ಠಾನಗೊಳಿಸದಿರಲು ನಿರ್ಧರಿಸಿದ್ದೇವೆ. ಈ ಸಂಬಂಧ 2000-01ರ ಆಯವ್ಯಯದಲ್ಲಿ 144 ಕೋಟಿ ರೂ.ಗಳ ಹೆಚ್ಚುವರಿ ಸಹಾಯಧನವನ್ನು ಒಳಪಡಿಸಿದ್ದೇವೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ರೈತ ಪ್ರತಿನಿಧಿಯೊಬ್ಬರನ್ನು ಸದಸ್ಯರನ್ನಾಗಿ ನೇಮಿಸುತ್ತೇನೆ ಎಂದು ಘೋಷಿಸುತ್ತೇನೆ.

14. ನೀರಾವರಿ ಪಂಪ್‌ಸೆಟ್‌ಗಳ ಗ್ರಾಹಕರಿಂದ 450 ಕೋಟಿ ರೂ.ಗಳ ವಿದ್ಯುತ್ ಬಾಕಿಯಿದೆ. ಇದರಲ್ಲಿ ಸುಮಾರು 148 ಕೋಟಿ ರೂ.ಗಳು ಬಡ್ಡಿಯ ಭಾಗವಿರಬಹುದೆಂದು ಭಾವಿಸಲಾಗಿದೆ. ಏಪ್ರಿಲ್ 15, 2001 ರಿಂದ ನಾಲ್ಕು ತಿಂಗಳ ಒಳಗಾಗಿ ವಿದ್ಯುತ್ ಬಾಕಿಯ ಅಸಲನ್ನು ಪಾವತಿ ಮಾಡುವ ನೀರಾವರಿ ಪಂಪ್‌ಸೆಟ್‌ನ ಗ್ರಾಹಕರ ಬಡ್ಡಿಯ ಭಾಗವನ್ನು ರಾಜ್ಯ ಸರ್ಕಾರವು ಭರಿಸುವಂತಹ ಯೋಜನೆಯನ್ನು ರೂಪಿಸುವಂತೆ ಕೆ.ಪಿ.ಟಿ.ಸಿ.ಎಲ್.ಗೆ ನಾನು ನಿರ್ದೇಶನ ನೀಡಿದ್ದೇನೆ. ಮುಂದಿನ ಏಳು ದಿನಗಳಲ್ಲಿ ಈ ಯೋಜನೆಯನ್ನು ಸೂಚಿತಗೊಳಿಸಲಾಗುವುದು.

15. ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದೀಕರಣವನ್ನು ತ್ವರಿತಗೊಳಿಸಲು 'ತತ್ಕಾಲ್' ಯೋಜನೆಯನ್ನು ರೂಪಿಸುವಂತೆ ಕೆಪಿಟಿಸಿಎಲ್‌ಗೆ ನಿರ್ದೇಶನ ನೀಡಿದ್ದೇನೆ. ವಿದ್ಯುದೀಕರಣದ ಪೂರ್ಣ ವೆಚ್ಚವನ್ನು ಅಥವಾ 25,000 ರೂ.ಗಳನ್ನು ಇದರಲ್ಲಿ ಯಾವ ಮೊತ್ತ ಹೆಚ್ಚಾಗಿರುತ್ತದೋ ಅದನ್ನು ಭರಿಸುವ ಗ್ರಾಹಕರಿಗೆ ಈ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ತತ್‌ಕ್ಷಣದಲ್ಲೇ ನೀಡಲಾಗುವುದು. ಈ ಗ್ರಾಹಕರಿಗೆ ಮೀಟರ್ ಅಳವಡಿಸಿ ಪ್ರತಿ ಯೂನಿಟ್‌ಗೆ 1.35 ರೂ.ಗಳಂತೆ ಶುಲ್ಕ ವಿಧಿಸಲಾಗುವುದು. ಇವರು ಪ್ರತೀ ನೀರಾವರಿ ಪಂಪ್‌ಸೆಟ್‌ನ ಪ್ರತಿ ಹೆಚ್‌ಪಿಗೆ ವಾರ್ಷಿಕ ಕನಿಷ್ಟ ಮೊತ್ತವಾದ 600 ರೂ.ಗಳನ್ನು ಕಟ್ಟಬೇಕಾಗುತ್ತದೆ. ಈ ಯೋಜನೆಯ ಹೆಚ್ಚಿನ ವಿವರಗಳನ್ನು ಮಾರ್ಚ್ 31, 2001ರ ಒಳಗೆ ನೀಡಲಾಗುವುದು.

16. ನಾನೀಗ ಮಾನ್ಯ ಸದಸ್ಯರುಗಳಿಗೆ ಸಂತೋಷದಾಯಕ ಸಂಗತಿಯನ್ನು ತಿಳಿಸಲು ಇಚ್ಛಿಸುತ್ತೇನೆ. ಮುಂದಿನ ಮೇ 1, 2001 ರಿಂದ ರಾಜ್ಯದ ಎಲ್ಲ ರೈತರಿಗೆ ಯಾವುದೇ ಅಡೆತಡೆಯಿಲ್ಲದೆ ಮೂರು ಫೇಸ್‌ನ ಮೂಲಕ ರಾತ್ರಿ 10 ಘಂಟೆಯಿಂದ ಬೆಳಿಗ್ಗೆ 6 ಘಂಟೆಯವರೆಗೆ ಎಂಟು ಘಂಟೆಗಳ ಕಾಲ ನಿರಂತರವಾಗಿ ವಿದ್ಯುತ್‌ನ್ನು ಪೂರೈಸಲಾಗುತ್ತದೆ. ಹಾಲಿ ಒದಗಿಸುತ್ತಿರುವ ವಿದ್ಯುತ್‌ಗೆ ಇದು ಪೂರಕವಾಗಿರುತ್ತದೆ. ನಾನು ಇದನ್ನು ಮತ್ತೆ ಪುನರುಚ್ಚರಿಸುತ್ತೇನೆ. ಮೇ 1 ರಿಂದ, ಅಡೆತಡೆಯಿಲ್ಲದ, ಮೂರು ಫೇಸ್‌ನ ವಿದ್ಯುತ್‌ನ್ನು ರೈತರಿಗೆ ಒದಗಿಸಲಾಗುವುದು. ಇದು ರಾಜ್ಯದ ರೈತರಿಗೆ ನಾವು ನೀಡುತ್ತಿರುವ ಪವಿತ್ರ ಭರವಸೆಯಾಗಿದೆ.

ಕೃಷಿ

17. ಮಾನ್ಯ ಸದಸ್ಯರುಗಳು ಸದನದಲ್ಲಿ ನಮ್ಮ ರೈತರ ರಕ್ಷಣೆ ಬಗ್ಗೆ ಹಲವಾರು ಬಾರಿ ವ್ಯಕ್ತಪಡಿಸಿರುವ ಕಾಳಜಿಯ ಬಗ್ಗೆ ನನಗೆ ಸಹಮತವಿದೆ. ಕಳೆದ ವರ್ಷ ನಮ್ಮ ಪಾಲಿಗೆ ಸಂಕಷ್ಟದ ವರ್ಷವಾಗಿತ್ತು. ಹಲವಾರು ಕೃಷಿ ಉತ್ಪನ್ನಗಳ ಬೆಲೆಗಳು ಕುಸಿತ ಕಂಡವು. ನಾವು ಈಗ ಎದುರಿಸುತ್ತಿರುವ ಬಿಕ್ಕಟ್ಟು ಅಧಿಕ ಕೃಷಿ ಉತ್ಪಾದನೆಯಿಂದ ಉದ್ಭವಿಸಿದೆ. ಈ ಹಿಂದೆ ನಾವು ಕೊರತೆಯಿಂದಾಗಿ ಉದ್ಭವಿಸಿದ ಬಿಕ್ಕಟ್ಟುಗಳನ್ನೇ ಎದುರಿಸಿದ್ದೇವೆ. ಆದರೆ ರೈತರಿಗೆ ಸಂಬಂಧಿಸಿದಂತೆ ಯಾವುದೇ ಬಿಕ್ಕಟ್ಟು ; ಬಿಕ್ಕಟ್ಟೇ. ನಾವು ಇದಕ್ಕೆ ಕ್ರಿಯಾತ್ಮಕವಾಗಿ ಪ್ರತಿಸ್ಪಂದಿಸಬೇಕಾಗಿದೆ.

18. ಕಳೆದ ಹನ್ನೆರಡು ತಿಂಗಳಲ್ಲಿ ನನ್ನ ಸರ್ಕಾರವು ಮಾರುಕಟ್ಟೆ ಪ್ರವೇಶಿಸಿ ಕೃಷಿ ಉತ್ಪನ್ನ ಖರೀದಿ ಕಾರ್ಯಾಚರಣೆಯನ್ನು ಬೃಹತ್ ಪ್ರಮಾಣದಲ್ಲಿ ಹಮ್ಮಿಕೊಂಡಿತು. ನಾವು 100 ಕೋಟಿ ರೂ.ಗಳ ಮಾರುಕಟ್ಟೆ ಪ್ರವೇಶ ಆವೃತ್ತ ನಿಧಿಯನ್ನು ಸ್ಥಾಪಿಸಿದ್ದೆವು. ಈ ನಿಧಿಯಲ್ಲಿ ಎ.ಪಿ.ಎಂ.ಸಿ. ಮತ್ತು ರಾಜ್ಯ ಸರ್ಕಾರಗಳೆರಡೂ ಕೊಡುಗೆ ನೀಡಿವೆ. ನನ್ನ ಸರ್ಕಾರವು ರೈತರಿಗಾಗಿಯೇ ಇದೆ. ಆದ್ದರಿಂದ, ನಾನು ಈ ಹಂಚಿಕೆಯನ್ನು 200 ಕೋಟಿ ರೂ.ಗಳಿಗೆ ಹೆಚ್ಚಿಸಿ 'ರೈತ ಕಲ್ಯಾಣ ನಿಧಿ' ಗೆ ನೀಡುತ್ತಿದ್ದೇನೆ. ಮಾರುಕಟ್ಟೆ ಪ್ರವೇಶ ಯೋಜನೆಯನ್ನು ಅರ್ಥಪೂರ್ಣವಾಗಿಸಲು ಏನು ಅಗತ್ಯವಿದೆಯೋ ಅವೆಲ್ಲವನ್ನು ಅದನ್ನು ನಾವು ಮಾಡುತ್ತೇವೆ. ಈ ಯೋಜನೆಗೆ ಮ್ಯಾಚಿಂಗ್ ಗ್ರಾಂಟ್ ಕೊಡುವಂತೆ ಭಾರತ ಸರ್ಕಾರಕ್ಕೆ ನಾನು ಪ್ರಸ್ತಾವಿಸುತ್ತೇನೆ. ರೈತ ಕಲ್ಯಾಣ ನಿಧಿಯನ್ನು 200 ಕೋಟಿ ರೂ.ಗಳೊಂದಿಗೆ ತಕ್ಷಣದಿಂದ ಆರಂಭಿಸುತ್ತಿದ್ದೇವೆ. ಮುಂದೆ ಇದನ್ನು 400 ಕೋಟಿ ರೂ.ಗಳವರೆಗೆ ಬೆಳೆಸುತ್ತೇನೆ. ನಮ್ಮ ರೈತರ ಅನುಕೂಲಕ್ಕಾಗಿಯೇ ಈ ನಿಧಿ ನಿರ್ವಹಣೆಯಾಗುತ್ತಿದೆ ಎನ್ನುವುದನ್ನು ಖಾತರಿಪಡಿಸಿಕೊಳ್ಳಲು ನಾನೇ ಖುದ್ದಾಗಿ ಈ ನಿಧಿಯ ಉಸ್ತುವಾರಿ ಮಾಡುತ್ತೇನೆ.

19. ಈಗ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಆಹಾರ ಧಾನ್ಯಗಳ ಖರೀದಿ ಕಾರ್ಯವನ್ನು ನಿರ್ವಹಿಸುತ್ತಿದೆ. ನಾನು ಈ ಖರೀದಿ ಪ್ರಕ್ರಿಯೆಯನ್ನು ವಿಕೇಂದ್ರೀಕರಿಸಿ ಖರೀದಿ ಮತ್ತು ವಿತರಣೆಯ ಜವಾಬ್ದಾರಿಯನ್ನು ಇನ್ನು ಮುಂದೆ ಕೃಷಿ ಉತ್ಪನ್ನ ಮಾರುಕಟ್ಟೆ ಮಂಡಳಿಗಳಿಗೆ ನೀಡಲಿದ್ದೇನೆ. ಅಗತ್ಯ ನೆರವನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ನೀಡುತ್ತದೆ.

20. ವಾಣಿಜ್ಯ ಉದಾರೀಕರಣದ ನಂತರ ನಮ್ಮ ಕೃಷಿ ಬದುಕಿನ ಮೇಲೆ ಆಗಿರುವ ಪರಿಣಾಮಗಳನ್ನು ಅಧ್ಯಯನ ಮಾಡಲು ಡಬ್ಲ್ಯು.ಟಿ.ಓ. ಕೋಶವನ್ನು ಸ್ಥಾಪಿಸಿದ ಮೊಟ್ಟಮೊದಲ ರಾಜ್ಯ ಕರ್ನಾಟಕವಾಗಿದೆ. ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಹಲವಾರು ಶಿಫಾರಸ್ಸುಗಳನ್ನು ಮಾಡಿದ್ದೇವೆ. ಉದಾಹರಣೆಗೆ ಸ್ವಯಂಚಾಲಿತ ಆಮದು ಶುಲ್ಕ ವಿಧಾನವನ್ನು ಜಾರಿಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ನಾವು ಸಲಹೆ ನೀಡಿದ್ದೇವೆ. ವಿಶ್ವಮಟ್ಟದಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದಾಗ ದೇಶದಲ್ಲಿ ಆಮದು ಶುಲ್ಕ ತನ್ನಷ್ಟಕ್ಕೆ ತಾನೇ ಏರುವಂತಹ ವ್ಯವಸ್ಥೆ ಇರಬೇಕು. ಈ ವ್ಯವಸ್ಥೆ ನಮ್ಮ ದೃಷ್ಟಿಯಲ್ಲಿ ಬಹಳ ಪ್ರಾಮುಖ್ಯವಾಗಿದೆ. ಅಗ್ಗದ ಬೆಲೆಯ ಮತ್ತು ಮುಕ್ತ ಆಮದುಗಳ ಹೊಡೆತದಿಂದ ನಮ್ಮ ರೈತರನ್ನು ರಕ್ಷಿಸುವ ಯಾವುದೇ ಕ್ರಮವನ್ನು ಕೇಂದ್ರ ಸರ್ಕಾರವು ಸೂಕ್ತ ಕಾಲದಲ್ಲಿ ತೆಗೆದುಕೊಂಡಿಲ್ಲದೇ ಇರುವುದು ನಮ್ಮ ಅನುಭವವಾಗಿದೆ. ವಿಶ್ವ ವಾಣಿಜ್ಯ ಸಂಸ್ಥೆಯ ಕೃಷಿ ಒಪ್ಪಂದದ ಅನುಕೂಲಗಳ ಉಪಯುಕ್ತತೆಯನ್ನು ಪಡೆಯಲು ಮತ್ತು ಪ್ರತಿಕೂಲಗಳನ್ನು ಸೂಕ್ತವಾಗಿ ನಿರ್ವಹಿಸುವ ಬಗ್ಗೆ ಚರ್ಚಿಸಲು ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕೆಂದು ನಾನು ಈಗಾಗಲೇ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದೇನೆ.

21. ನಮ್ಮ ರೈತರಿಗೆ ಸಂಬಂಧಿಸಿದಂತೆ ನಾವು ಅನೇಕ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ರೈತರ ಸಾಲದ ವೆಚ್ಚವನ್ನು ಕಡಿತಗೊಳಿಸುವ ನಿರ್ಧಾರವು ಪ್ರಮುಖವಾಗಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಅಲ್ಪಾವಧಿ ಬೆಳೆ ಸಾಲದ ಮೇಲಿನ ಬಡ್ಡಿ ದರವನ್ನು 2001-02ನೇ ಸಾಲಿನಲ್ಲಿ ಶೇಕಡ 2ರಷ್ಟು ಕಡಿತಗೊಳಿಸಬೇಕೆಂದು ನಾನು ಸಹಕಾರಿ ಸಾಲ ಸಂಸ್ಥೆಗಳಿಗೆ ಸಲಹೆ

ನೀಡುತ್ತೇನೆ. ಈ ಬಡ್ಡಿದರ ವ್ಯತ್ಯಾಸದ ಮೊತ್ತವನ್ನು ಸಹಕಾರ ಸಂಸ್ಥೆಗಳು ತಮ್ಮ ಲಾಭಾಂಶದಲ್ಲಿ ಅಳವಡಿಸಿಕೊಳ್ಳಬೇಕು. ಕರ್ನಾಟಕ ರಾಜ್ಯ ಅಪೆಕ್ಸ್ ಸಹಕಾರ ಬ್ಯಾಂಕ್ ಈ ಸಂದರ್ಭದಲ್ಲಿ ರೈತರ ನೆರವಿಗೆ ಬರುತ್ತದೆಂಬ ವಿಶ್ವಾಸ ನನಗಿದೆ. ಬೆಳೆಸಾಲ ಮತ್ತು ಅವಧಿ ಸಾಲದ ಬಡ್ಡಿ ದರಗಳನ್ನು ಕಡಿಮೆ ಮಾಡಬೇಕೆಂದು ನಬಾರ್ಡ್ ಮತ್ತು ವಾಣಿಜ್ಯ ಬ್ಯಾಂಕ್‌ಗಳಿಗೆ ನಾನು ಮನವಿ ಮಾಡಿಕೊಳ್ಳುತ್ತಲೇ ಬಂದಿದ್ದೇನೆ.

22. ಕರ್ನಾಟಕವು ರಾಷ್ಟ್ರದಲ್ಲಿಯೇ ಅತೀ ದೊಡ್ಡ ಒಣಭೂಮಿಯನ್ನು ಹೊಂದಿರುವ ಎರಡನೆಯ ರಾಜ್ಯವಾಗಿದೆ. ರಾಜ್ಯದ ಒಟ್ಟಾರೆ ಬೇಸಾಯ ಭೂಮಿಯಲ್ಲಿ ಕೇವಲ ನಾಲ್ಕನೇ ಒಂದರಷ್ಟು ಪ್ರದೇಶ ಮಾತ್ರ ನೀರಾವರಿಗೊಳಪಟ್ಟಿದೆ. ಆದ್ದರಿಂದ ಜಲಾನಯನ ಅಭಿವೃದ್ಧಿಗೆ ನಾವು ವಿಶೇಷ ಮಹತ್ವ ನೀಡಬೇಕಾಗಿದೆ. ಕೋಲಾರ ಜಿಲ್ಲೆಯಲ್ಲಿ 80,000 ಹೆಕ್ಟೇರು ಜಮೀನನ್ನು ಅಭಿವೃದ್ಧಿಗೊಳಿಸುವ ಪಾಪಗ್ನಿ ಯೋಜನೆಯನ್ನು ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯ ನೆರವಿನಡಿಯಲ್ಲಿ ಈ ವರ್ಷ ಕೈಗೆತ್ತಿಕೊಳ್ಳಲಾಗುವುದು. 10 ಸಾವಿರ ಹೆಕ್ಟೇರ್ ಭೂಮಿಯನ್ನು ಅಭಿವೃದ್ಧಿಗೊಳಿಸುವ ನಬಾರ್ಡ್ ಯೋಜನೆಯ ಪ್ರಥಮ ಹಂತ ಸಹ ಆರಂಭವಾಗುತ್ತಿದೆ. ಬೀದರ್, ಗುಲ್ಬರ್ಗಾ, ಬಿಜಾಪುರ ಮತ್ತು ಕೊಪ್ಪಳ ಜಿಲ್ಲೆಗಳ 5 ಸಾವಿರ ಹೆಕ್ಟೇರು ಪ್ರದೇಶದ ಅಭಿವೃದ್ಧಿಗಾಗಿ ನೆರವು ನೀಡಲು ಸ್ವಿಸ್ ಅಭಿವೃದ್ಧಿ ನಿಗಮ ಮುಂದೆ ಬಂದಿದೆ. ಮುಂದಿನ 3 ತಿಂಗಳಲ್ಲಿ ನಾವು 600 ಕೋಟಿ ರೂ. ವೆಚ್ಚದ ವಿಶ್ವ ಬ್ಯಾಂಕ್ ನೆರವಿನ ಬೃಹತ್ ಜಲಾನಯನ ಅಭಿವೃದ್ಧಿ ಯೋಜನೆಯನ್ನು ಆರಂಭಿಸುತ್ತಿದ್ದೇವೆ. ಕೋಲಾರ, ತುಮಕೂರು, ಚಿತ್ರದುರ್ಗ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳ ನಾಲ್ಕು ಲಕ್ಷ ಹೆಕ್ಟೇರ್ ಪ್ರದೇಶವನ್ನು ಈ ಯೋಜನೆಯಡಿ ಅಭಿವೃದ್ಧಿಪಡಿಸಲಾಗುವುದು.

23. ನಮಗೆ 25 ಲಕ್ಷ ಟನ್‌ಗಳ ಸಂಗ್ರಹ ಸಾಮರ್ಥ್ಯದ ಗೋದಾಮಿನ ಅವಶ್ಯಕತೆಯಿದೆ. ಆದರೆ ನಮ್ಮಲ್ಲಿ ಕೇವಲ 15 ಲಕ್ಷ ಟನ್ ಸಾಮರ್ಥ್ಯದ ಗೋದಾಮುಗಳಿವೆ. 2001-02 ನೇ ಸಾಲಿನಲ್ಲಿ ವಿವಿಧ ಹಣಕಾಸು ಸಂಸ್ಥೆಗಳ ನೆರವಿನಲ್ಲಿ 3.5 ಲಕ್ಷ ಟನ್ ಹೆಚ್ಚುವರಿ ಸಾಮರ್ಥ್ಯದ ಗೋದಾಮುಗಳನ್ನು ನಿರ್ಮಿಸಲಾಗುವುದು. ಇದಕ್ಕೆ ಅಗತ್ಯವಾಗಿರುವ ಮಾರ್ಜಿನ್ ಹಣವನ್ನು ರಾಜ್ಯ ಸರ್ಕಾರ ಒದಗಿಸಲಿದೆ. ಧಾರವಾಡ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಖಾಸಗಿ ವಲಯದವರ ಪಾಲುದಾರಿಕೆಯೊಂದಿಗೆ ತಲಾ 1 ಲಕ್ಷ ಟನ್ ಸಾಮರ್ಥ್ಯದ ಎರಡು ಬಹುಧಾನ್ಯ ಸಂಗ್ರಹಣಾ ಕಣಜಗಳನ್ನು ಸ್ಥಾಪಿಸಲಾಗುವುದು.

24. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯಿದೆಯ ಪ್ರಕಾರ ಪ್ರತಿ ಮಾರುಕಟ್ಟೆಯಲ್ಲಿಯೂ ಮಾರುಕಟ್ಟೆ ಶುಲ್ಕವನ್ನು ಪಾವತಿಸಬೇಕಾಗಿದ್ದು ಇದರಿಂದ ರೈತರಿಗೆ ತೊಂದರೆಯಾಗುತ್ತಿದೆಯೆಂದು ನನಗೆ ಹಲವಾರು ಮನವಿಗಳು ಬಂದಿವೆ. ಇನ್ನು ಮುಂದೆ ನಿಗದಿಪಡಿಸಿದ ಸರಕಿಗೆ ಸಂಬಂಧಿಸಿದಂತೆ ಒಂದು ಅವಧಿಗೆ ಇಡೀ ರಾಜ್ಯವನ್ನು ಒಂದೇ ಮಾರುಕಟ್ಟೆಯೆಂದು ಸೂಚಿಸಲಾಗುವುದು. ಇದರಿಂದ ರಾಜ್ಯದಲ್ಲಿ ಒಮ್ಮೆ ಮಾರುಕಟ್ಟೆ ಶುಲ್ಕವನ್ನು ಪಾವತಿ ಮಾಡಿದರೆ ಸಾಕಾಗುತ್ತದೆ. ಈ ಸಂಬಂಧ ಕೆ.ಎ.ಪಿ.ಎಂ. ಕಾಯಿದೆಗೆ ಸೂಕ್ತ ತಿದ್ದುಪಡಿಯನ್ನು ಪ್ರಸಕ್ತ ಅಧಿವೇಶನದಲ್ಲೇ ತರಲಾಗುವುದು.

25. ಖ್ಯಾತ ಕೃಷಿ ವಿಜ್ಞಾನಿಗಳನ್ನು ಒಳಗೊಂಡಿರುವ ಕೃಷಿ ಆಯೋಗವನ್ನು ರಾಜ್ಯದಲ್ಲಿ ಪ್ರಥಮ ಬಾರಿಗೆ ಸ್ಥಾಪಿಸಿರುವ ಸಂಗತಿ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಆಯೋಗವು ಮೂರು ಮಹತ್ವದ ವರದಿಗಳನ್ನು ನಮಗೆ ನೀಡಿದ್ದು ಈಗಾಗಲೇ ಅನುಷ್ಠಾನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಯೋಗದ ಸಲಹೆ ಮತ್ತು ಮಾರ್ಗದರ್ಶನವನ್ನು ನಾವು ಮತ್ತಷ್ಟು ನಿರೀಕ್ಷಿಸುತ್ತೇವೆ. ರಾಜ್ಯದ ಹತ್ತು ಕೃಷಿ ಹವಾಮಾನ ವಲಯಗಳಲ್ಲಿನ ಉತ್ಪಾದನಾ ಕೊರತೆಯನ್ನು ನಿವಾರಿಸುವುದರ ಬಗ್ಗೆ ನಾವು ವಿಶೇಷವಾಗಿ ಆಯೋಗದ ಸಲಹೆಯನ್ನು ಕೋರುತ್ತೇವೆ.ರಾಜ್ಯದಲ್ಲಿನ ಎರಡು ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನೆ ಮತ್ತು ತಂತ್ರಜ್ಞಾನವನ್ನು ವರ್ಗಾಯಿಸುವ ಚಟುವಟಿಕೆಗಳಿಗೆ ಹೊಸ ಚೈತನ್ಯವನ್ನು ತುಂಬಲು ನಮ್ಮ ಸರ್ಕಾರ ಬದ್ಧವಾಗಿದೆ.

26. ನಮ್ಮ ಹಿಂದಿನ ವರ್ಷದ ಅನುಭವಗಳನ್ನು ಆಧರಿಸಿ ಹೇಳುವುದಾದರೆ ನಮಗೆ ಸ್ವಾಯತ್ತವಾದ, ವೃತ್ತಿಪರ ಮತ್ತು ಉತ್ತಮ ತಾಂತ್ರಿಕ ಗುಣಮಟ್ಟ ಹೊಂದಿರುವ ಕೃಷಿ ಉತ್ಪನ್ನಗಳ ಬೆಲೆ ಆಯೋಗದ ಅವಶ್ಯಕತೆಯಿದೆ ಎಂದೆನ್ನಿಸುತ್ತದೆ. ಈ ಆಯೋಗವು ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಯೋಗ್ಯ ಬೆಲೆಯನ್ನು ಸೂಚಿಸುತ್ತದೆ ಹಾಗೂ ಸರ್ಕಾರವು ಮಾರುಕಟ್ಟೆ ಪ್ರವೇಶಿಸಿ ಖರೀದಿಸಬಹುದಾದ ಬೆಂಬಲ ಬೆಲೆಯನ್ನು ಸಹ ಶಿಫಾರಸ್ಸು ಮಾಡಲಿದೆ. ಮುಂದಿನ 60 ದಿನಗಳಲ್ಲಿ ಈ ಆಯೋಗವು ಕಾರ್ಯಾರಂಭ ಮಾಡಲಿದೆ.

27. ನಮ್ಮ ರೈತರಿಗೆ ಉದ್ಯೋಗ ಮತ್ತು ಆದಾಯ ವೃದ್ಧಿಸುವಲ್ಲಿ ಕೃಷಿ-ಸಂಸ್ಕರಣ ಉದ್ಯಮವು ಅಪಾರ ಅವಕಾಶಗಳನ್ನು ತೆರೆದಿಟ್ಟಿದೆ. ಆದ್ದರಿಂದ ನಾನು ಚಿತ್ರದುರ್ಗ, ಮಾಲೂರು, ಮದ್ದೂರು, ಬಾಗಲಕೋಟೆ ಮತ್ತು ಬಿಜಾಪುರಗಳಲ್ಲಿ ಐದು ಕೃಷಿ-ಸಂಸ್ಕರಣ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲಿ ದ್ವಿದಳ ಧಾನ್ಯಗಳನ್ನು ಅತಿ ಹೆಚ್ಚಾಗಿ ಬೆಳೆಯುತ್ತಿದ್ದು ಮಾರುಕಟ್ಟೆಯಲ್ಲಿ ಇದರ ಬೆಲೆಗಳ ಏರಿಳಿತದಿಂದಾಗಿ ರೈತರು ಸಾಕಾದಷ್ಟು ತೊಂದರೆ ಅನುಭವಿಸುತ್ತಿದ್ದಾರೆ ಈ ನಿಟ್ಟಿನಲ್ಲಿ ಅವರುಗಳ ಕಷ್ಟವನ್ನು ಪರಿಹರಿಸಲು ಹಾಗೂ ದ್ವಿದಳ ಧಾನ್ಯ ಮಾರುಕಟ್ಟೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ದ್ವಿದಳ ಧಾನ್ಯ ಮಂಡಳಿ (ಪ್ಲೈಸಸ್ ಬೋರ್ಡ್) ಸ್ಥಾಪಿಸುವ ಬಗ್ಗೆ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ತೋಟಗಾರಿಕೆ

28. ಕರ್ನಾಟಕವು ರಾಷ್ಟ್ರದಲ್ಲಿಯೇ ಅತಿ ದೊಡ್ಡ ಹಣ್ಣು ಮತ್ತು ತರಕಾರಿ ಉತ್ಪಾದನೆಗಳ ರಾಜ್ಯವಾಗಿದೆ. ಈ ನಿಟ್ಟಿನಲ್ಲಿ ಮುನ್ನಡೆಯಲು ನಾನು ಸಮಗ್ರ ತೋಟಗಾರಿಕೆ ನೀತಿಯೊಂದನ್ನು ಮುಂದಿನ 90 ದಿನಗಳಲ್ಲಿ ಜಾರಿಗೊಳಿಸಲು ಉದ್ದೇಶಿಸಿದ್ದೇನೆ.

29. ಬೆಂಗಳೂರಿನ ಕನ್ನಮಂಗಲದಲ್ಲಿ ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯ ನೆರವಿನಿಂದ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ನಿರ್ಮಾಣ ಕಾರ್ಯ ಆರಂಭವಾಗಿದ್ದು ಇದು ಮುಂದಿನ 18 ತಿಂಗಳಲ್ಲಿ ಕಾರ್ಯಾರಂಭ ಮಾಡಲಿದೆ. ಇದೇ ಮಾದರಿಯ ಮೂರು ಯೋಜನೆಗಳನ್ನು 2001-02 ರಲ್ಲಿ ಮೈಸೂರು, ಹುಬ್ಬಳ್ಳಿ-ಧಾರವಾಡ ಮತ್ತು ಬಿಜಾಪುರಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು.

30. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಾಗೂ ದುರ್ಬಲ ವರ್ಗಕ್ಕೆ ಸೇರಿದ ರೈತರಿಗೆ ಹನಿ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ವಿಶೇಷ ಯೋಜನೆಯನ್ನು ಶೀಘ್ರದಲ್ಲಿಯೇ ಜಾರಿಗೊಳಿಸಲಾಗುವುದು. ತೋಟಗಾರಿಕೆ ಬೆಳೆಗಳ ಜೊತೆ ಮಧ್ಯಂತರ ಬೇಸಾಯುವನ್ನು ಪ್ರೋತ್ಸಾಹಿಸಲಾಗುವುದು.

ಸಹಕಾರ

31. ರಾಜಕೀಯ ಪ್ರಜಾಪ್ರಭುತ್ವಕ್ಕೆ ಪಂಚಾಯತ್ ಸಂಸ್ಥೆಗಳು ಹೇಗಿವೆಯೋ ಹಾಗೆ ಆರ್ಥಿಕ ಪ್ರಜಾಪ್ರಭುತ್ವಕ್ಕೆ ಸಹಕಾರಿ ಸಂಸ್ಥೆಗಳಿವೆ. ನನ್ನ ಸರ್ಕಾರವು ಸಹಕಾರ ಸಂಸ್ಥೆಗಳ; ಜನತಾಂತ್ರಿಕವಾದ ಸ್ವಾಯತ್ತ ಹಾಗೂ ವೃತ್ತಿಪರ ಕಾರ್ಯನಿರ್ವಹಣೆಗೆ ಬದ್ಧವಾಗಿದೆ. ಈ ಪದ್ಧತಿಯನ್ನು ಬಿಂಬಿಸಲು ಅನುವಾಗುವಂತೆ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆಗೆ ಶೀಘ್ರದಲ್ಲೇ ತಿದ್ದುಪಡಿ ತರಲಾಗುವುದು.

32. ನಬಾರ್ಡ್‌ನ ನೆರವಿನೊಂದಿಗೆ ನಾವು ರಾಜ್ಯ, ಜಿಲ್ಲೆ ಮತ್ತು ಗ್ರಾಮಾಂತರ ಮಟ್ಟಗಳಲ್ಲಿನ ಎಲ್ಲಾ ಹಂತದ ಸಹಕಾರಿ ಸಾಲ ಸಂಸ್ಥೆಗಳನ್ನು ಸುಧಾರಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದನ್ನು ಮಾಡದ ಹೊರತು ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ಹೆಚ್ಚು ಸಾಲ ಸೌಲಭ್ಯವನ್ನು ನೀಡಲಾರವು. ಕಳೆದ ವರ್ಷ ನಾನು, ಸಹಕಾರಿ ಸಂಸ್ಥೆಗಳು ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಕೃಷಿ ಸಾಲ ವಿತರಣೆಯನ್ನು ಮುಂದಿನ ಮೂರು ವರ್ಷಗಳಲ್ಲಿ ದುಪ್ಪಟ್ಟು ಮಾಡುತ್ತವೆ ಎಂದು ಹೇಳಿದ್ದೆ. 2001-02ರಲ್ಲಿಯೇ ಸಹಕಾರಿ ಸಾಲ ಸಂಸ್ಥೆಗಳು ಕೃಷಿ ಸಾಲ ವಿತರಣೆಯಲ್ಲಿ ಶೇಕಡ 85ರಷ್ಟು ಗಣನೀಯ ಹೆಚ್ಚಳವನ್ನು ಸಾಧಿಸಲಿದ್ದು, 1880 ಕೋಟಿ ರೂ.ಗಳನ್ನು ರೈತರಿಗೆ ವಿತರಿಸಲಿವೆ.

33. ನೂತನವಾಗಿ ರಚಿತವಾಗಿರುವ ಜಿಲ್ಲೆಗಳಲ್ಲಿ ಡಿ.ಸಿ.ಸಿ. ಬ್ಯಾಂಕ್‌ಗಳು 2001-02ರಲ್ಲಿ ಕಾರ್ಯಾರಂಭ ಮಾಡಲಿವೆ.

34. ಕರ್ನಾಟಕ ರಾಜ್ಯ ಗ್ರಾಹಕರ ಸಹಕಾರಿ ಮಂಡಳಿಯನ್ನು ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಂಡಳಿಯ ಜೊತೆ ವಿಲೀನಗೊಳಿಸಲಾಗುವುದು. ಇದರಿಂದಾಗಿ ಇವೆರಡೂ ಸಂಸ್ಥೆಗಳ ನಡುವೆ ಪರಸ್ಪರ ಹೊಂದಾಣಿಕೆ ಮೂಡಿ ಪರಿಣಾಮಕಾರಿ ಸಂಸ್ಥೆಯೊಂದು ಹೊರಹೊಮ್ಮಲಿದೆ.

ಪಶುಸಂಗೋಪನೆ

35. ಕರ್ನಾಟಕವು ರಾಷ್ಟ್ರದಲ್ಲಿಯೇ ಅತೀ ದೊಡ್ಡ ಎರಡನೇ ಉಣ್ಣೆ ಉತ್ಪಾದನಾ ರಾಜ್ಯವಾಗಿದೆ. ಈ ಸ್ಥಾನವನ್ನು ಮತ್ತಷ್ಟು ಸದೃಢಗೊಳಿಸಲು ನಾನು ಕರ್ನಾಟಕ ಕುರಿ ಅಭಿವೃದ್ಧಿ ಮಂಡಳಿಯನ್ನು ನಿಗಮವನ್ನಾಗಿ ಪರಿವರ್ತಿಸಲಿದ್ದೇನೆ.

36. ಪಶುವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಉತ್ತೇಜನ ನೀಡಲು ಹಾಲಿ ಇರುವ ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮತ್ತು ಚಿಕಿತ್ಸಾಲಯಗಳನ್ನು ಆಸ್ಪತ್ರೆಗಳನ್ನಾಗಿ ಹಂತಹಂತವಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಿದ್ದೇನೆ. ರಾಜ್ಯದ 20 ಜಿಲ್ಲೆಗಳಲ್ಲಿ ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಾಣಿರೋಗ ತಪಾಸಣೆ ಪ್ರಯೋಗಾಲಯಗಳನ್ನು 2001-02ನೇ ಸಾಲಿನಲ್ಲಿ ಸ್ಥಾಪಿಸುವ ಮೂಲಕ ಇಡೀ ರಾಜ್ಯಕ್ಕೆ ಈ ಸೌಲಭ್ಯ ವಿಸ್ತರಿಸಲಾಗುವುದು.

37. ಹೆಚ್ಚು ಪ್ರಾಣಿಸಂಖ್ಯೆ ಇರುವ ಜಿಲ್ಲೆಗಳಲ್ಲಿ ಪ್ರಾಣಿಗಳಿಗೆ ಚುಚ್ಚುಮದ್ದು ಹಾಕುವ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಂಡು ರೋಗರಹಿತ ವಲಯವನ್ನು ನಿರ್ಮಿಸಲಾಗುವುದು. ಎನ್.ಡಿ.ಡಿ.ಬಿ. ಮತ್ತು ಇತರೆ ಸಂಸ್ಥೆಗಳು ಈ ಯೋಜನೆಯಲ್ಲಿ ಪಾಲುದಾರರಾಗಲು ಒಪ್ಪಿವೆ.

38. ಅತ್ಯಾಧುನಿಕ ಕಸಾಯಿ ಖಾನೆಯೊಂದನ್ನು ಬೆಂಗಳೂರು ನಗರದಲ್ಲಿ 2001-02ನೇ ಸಾಲಿನಲ್ಲಿ ಸ್ಥಾಪಿಸಲಾಗುವುದು. ಜಿಲ್ಲಾ ಕೇಂದ್ರಗಳಲ್ಲಿ ಇಂತಹುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಕೇಂದ್ರದ ನೆರವಿನ ಸಾಧ್ಯತೆಯನ್ನು ಹುಡುಕಲಾಗುತ್ತಿದೆ.

ಮೀನುಗಾರಿಕೆ

39. ಕಾರವಾರದ ಬಳಿ ಕೇಂದ್ರ ಸರ್ಕಾರದ ಸೀಬರ್ಡ್ ಯೋಜನೆಯಿಂದ ನಿರಾಶ್ರಿತರಾದವರಿಗಾಗಿ ಉತ್ತರ ಕನ್ನಡ ಜಿಲ್ಲೆಯ ಅಮದಹಳ್ಳಿಯಲ್ಲಿ ಮೀನುಗಾರಿಕೆ ಬಂದರನ್ನು ನಿರ್ಮಿಸಲಾಗುವುದು.

40. ಮೀನುಗಾರಿಕೆ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಮಂಗಳೂರಿಗೆ ಸ್ಥಳಾಂತರಿಸಲಾಗುವುದು.

ವಸತಿ

41. ಈ ವಲಯದಲ್ಲಿ ನನ್ನ ಸರ್ಕಾರವು ಪ್ರಥಮವಾಗಿ ಕೈಗೆತ್ತಿಕೊಂಡ ಕಾರ್ಯಕ್ರಮವೆಂದರೆ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಸ್ಥಾಪನೆ. ಹಿಂದಿನ ಸರ್ಕಾರವು ಐದು ವರ್ಷಗಳಲ್ಲಿ ಸಮಾಜದ ದುರ್ಬಲ ವರ್ಗದವರಿಗಾಗಿ ವಿವಿಧ ಯೋಜನೆಗಳಡಿ ವಾರ್ಷಿಕ ಸರಾಸರಿಯಾಗಿ 62,700 ಮನೆಗಳನ್ನು ನಿರ್ಮಿಸಿತ್ತು. 2000-2001ರಲ್ಲಿ ನಾವು ಸುಮಾರು 1,50,000 ಮನೆಗಳನ್ನು ನಿರ್ಮಿಸಲಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ನಾನು ಸಂತಸಪಡುತ್ತೇನೆ. 2001-02ನೇ ಸಾಲಿನಲ್ಲಿ ನಾವು ಎರಡು ಲಕ್ಷ ಮನೆಗಳನ್ನು ಕಟ್ಟಲಿದ್ದೇವೆ. ನಮ್ಮ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಒಟ್ಟು 10 ಲಕ್ಷ ಮನೆಗಳನ್ನು ಕಟ್ಟುವ ಉದ್ದೇಶ ನನಗಿದೆ. ಈ ಗುರಿಯ ಸಾಧನೆಯತ್ತ ನಾವು ನಡೆಯುತ್ತಿದ್ದೇವೆ.

42. ರಾಜ್ಯಾದ್ಯಂತ ಸುಮಾರು 24 ಲಕ್ಷ ಕೊಳಗೇರಿ ವಾಸಿಗಳಿದ್ದಾರೆ. 15 ಲಕ್ಷ ಕೊಳೆಗೇರಿ ನಿವಾಸಿಗಳಿಗೆ ಅನುಕೂಲ ಕಲ್ಪಿಸುವ 'ನಿರ್ಮಲ ಜ್ಯೋತಿ ಯೋಜನೆ' ಎನ್ನುವ ನೂತನ

ಕಾರ್ಯಕ್ರಮವನ್ನು ಆರಂಭಿಸಲಾಗುತ್ತಿದೆ. ರಾಜ್ಯದ 21 ನಗರಗಳಲ್ಲಿರುವ ಕೊಳಗೇರಿಗಳ ವಸತಿ ಮತ್ತು ಮೂಲಭೂತ ಸೌಕರ್ಯದಲ್ಲಿ ವ್ಯಾಪಕ ಸುಧಾರಣೆಯನ್ನು ಈ ಯೋಜನೆ ತರಲಿದೆ.

43. ಕರ್ನಾಟಕ ಗೃಹ ಮಂಡಳಿಯು ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ 275 ಎಕರೆ ಪ್ರದೇಶದಲ್ಲಿ ನಗರ ಸಂಕೀರ್ಣ ರಚಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದೇ ಮಾದರಿಯಲ್ಲಿ ಖಾಸಗಿ ಸಂಸ್ಥೆಗಳ ಜಂಟಿ ಸಹಯೋಗದೊಂದಿಗೆ ರಾಜ್ಯದ ಇತರೆ ನಗರ ಮತ್ತು ಪಟ್ಟಣಗಳಲ್ಲಿ ಕೂಡ ಇಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ಇದು ಕೆಳ ಮತ್ತು ಮಧ್ಯಮವರ್ಗ ಆದಾಯದ ಜನರಿಗಾಗಿ ಉತ್ತಮ ಗುಣಮಟ್ಟದ ಮನೆಗಳನ್ನು ಯೋಗ್ಯ ಬೆಲೆಯಲ್ಲಿ ಒದಗಿಸಲಿದೆ. ಕರ್ನಾಟಕ ಗೃಹ ಮಂಡಳಿಯು 850 ಕೋಟಿ ರೂ.ಗಳ ವೆಚ್ಚದಲ್ಲಿ 100 ಯೋಜನೆಗಳ ಮೂಲಕ ಎರಡು ವರ್ಷಗಳಲ್ಲಿ 13,500 ಮನೆ ಮತ್ತು 15,000 ನಿವೇಶನಗಳನ್ನು ವಿತರಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಪಂಚಾಯತ್ ರಾಜ್

44. ಕರ್ನಾಟಕವು ಪಂಚಾಯತ್‌ರಾಜ್‌ಗೆ ಸಂಬಂಧಿಸಿದಂತೆ ಮಾರ್ಗದರ್ಶಿ ರಾಜ್ಯವೆಂದು ಮನ್ನಣೆ ಪಡೆದಿದೆ. ಈ ನಿಟ್ಟಿನಲ್ಲಿ ಅಪಾರ ಕೊಡುಗೆ ಸಲ್ಲಿಸಿದ ಹಿಂದಿನ ಸರ್ಕಾರಗಳನ್ನು ನಾನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ.

45. ನಾವು ಈಗಾಗಲೇ ಎರಡನೆ ರಾಜ್ಯ ಹಣಕಾಸು ಆಯೋಗವನ್ನು ರಚಿಸಿದ್ದೇವೆ. 2001ರ ಡಿಸೆಂಬರ್ 31 ರೊಳಗಾಗಿ ತನ್ನ ವರದಿಯನ್ನು ಸಲ್ಲಿಸುವಂತೆ ನಾನು ಆಯೋಗಕ್ಕೆ ಮನವಿ ಮಾಡುತ್ತೇನೆ.

46. ನಮ್ಮ ಉದ್ದೇಶ ವಿಕೇಂದ್ರೀಕರಣ ; ಕೇವಲ ಅಧಿಕಾರ ವರ್ಗಾವಣೆಯಲ್ಲ. ನಾನು ಈ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಗ್ರಾಮ ಪಂಚಾಯಿತಿಗಳನ್ನು ಮತ್ತಷ್ಟು ಶಕ್ತಗೊಳಿಸಲು ಹಲವಾರು ಕ್ರಮಗಳನ್ನು ಪ್ರಸ್ತಾಪಿಸುತ್ತಿದ್ದೇನೆ.

- ಮೊದಲನೆಯದಾಗಿ ; ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವ ಮುಕ್ತ ವಾರ್ಷಿಕ ಅನುದಾನದ ಮೊತ್ತವನ್ನು 2 ಲಕ್ಷ ರೂ.ಗಳಿಂದ 3.5 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು.

- ಎರಡನೆಯದಾಗಿ ; ಪ್ರಾಥಮಿಕ ಶಾಲೆಗಳು, ಅಂಗನವಾಡಿ ಕೇಂದ್ರಗಳು, ಗ್ರಾಮೀಣ ನೀರಾವರಿ ಕೆರೆಗಳ ನಿರ್ವಹಣೆ, ಪಿಂಚಣಿಗಳ ವಿತರಣೆಯಂತಹ ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಜವಾಬ್ದಾರಿಯನ್ನು ಗ್ರಾಮಪಂಚಾಯಿತಿಗಳಿಗೆ ವಹಿಸಲಾಗುವುದು.

- ಮೂರನೆಯದಾಗಿ ; ಭೂಕಂದಾಯ ದರಗಳನ್ನು ದುಪ್ಪಟ್ಟುಗೊಳಿಸಲಾಗುವುದು ಮತ್ತು ಒಟ್ಟು ಸಂಗ್ರಹಣೆಯಲ್ಲಿ ಶೇ. 50 ರಷ್ಟನ್ನು ಗ್ರಾಮಪಂಚಾಯಿತಿಗಳಿಗೆ ವರ್ಗಾಯಿಸಲಾಗುವುದು.

- ನಾಲ್ಕನೆಯದಾಗಿ ; ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆಯಲ್ಲಿರುವ ಮೌಲ್ಯ ನಿಷ್ಕರ್ಷೆ ಮಿತಿಯನ್ನು ತೆಗೆದುಹಾಕಲು ಈ ಕಾಯಿದೆಗೆ ಸೂಕ್ತ ತಿದ್ದುಪಡಿ ತರಲಾಗುವುದು. ಇದರಿಂದ ಗ್ರಾಮ ಪಂಚಾಯಿತಿಗಳಿಗೆ ಆಸ್ತಿ ತೆರಿಗೆ ಮೂಲಕ ಆದಾಯ ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ.

47. ಗ್ರಾಮಪಂಚಾಯತಿಗಳು ಹೊಸ ಬಡಾವಣೆಗಳನ್ನು ರಚಿಸಿಕೊಳ್ಳಲು ಅನುಕೂಲವಾಗುವಂತೆ 'ನವಗ್ರಾಮ ಯೋಜನೆ' ಎನ್ನುವ ನೂತನ ಯೋಜನೆಯನ್ನು ನಾನು ಆರಂಭಿಸಲು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ ಗ್ರಾಮ ಪಂಚಾಯತಿಗಳು ಹಣಕಾಸು ಸಂಸ್ಥೆಗಳಿಂದ ನೇರವಾಗಿ ಹಣವನ್ನು ತರಲು ಅವಕಾಶ ಕಲ್ಪಿಸಲಾಗುವುದು.

48. ಕಳೆದ ವರ್ಷದ ಮುಂಗಡ ಪತ್ರ ಭಾಷಣದಲ್ಲಿ ನಾನು ಹೇಳಿದ್ದ ಸ್ವಚ್ಛಗ್ರಾಮ ಯೋಜನೆಯನ್ನು ಈಗಾಗಲೆ 800 ಗ್ರಾಮಗಳು ಅಳವಡಿಸಿಕೊಂಡಿವೆ. ಈ ಯೋಜನೆಯು ರಾಷ್ಟ್ರದಲ್ಲಿಯೇ ಅತಿದೊಡ್ಡ ನೈರ್ಮಲ್ಯ ಕಾರ್ಯಕ್ರಮವಾಗಿದ್ದು ನಮ್ಮ ರಾಷ್ಟ್ರಪಿತನ ಕನಸನ್ನು ನನಸು ಮಾಡುವ ಯೋಜನೆಯಾಗಿದೆ. 2001-02ರಲ್ಲಿ ಒಟ್ಟು 1000 ಹಳ್ಳಿಗಳು ಈ ಯೋಜನೆಯನ್ನು ಪೂರ್ಣವಾಗಿ ಅಳವಡಿಸಿಕೊಂಡು ತಮ್ಮ ಜೀವನ ಸ್ಥಿತಿ ಹಾಗೂ ಜೀವನದ ಭೌತಿಕ ಗುಣಮಟ್ಟವನ್ನು ಸುಧಾರಿಸಿಕೊಳ್ಳಲಿವೆ.

49. ಯಾವುದೇ ಮುಂಗಡಪತ್ರದ ಪರೀಕ್ಷೆಯೆಂದರೆ, ಅದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗೆ ಎಷ್ಟು ಅನುದಾನವನ್ನು ಹೆಚ್ಚಿಸಿದೆ ಎನ್ನುವುದಾಗಿದೆ. ನಾನು ಹೆಮ್ಮೆಯಿಂದ ಈ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. 2001-02ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗೆ ಗಣನೀಯ ಪ್ರಮಾಣವಾದ ಶೇ. 38 ರಷ್ಟು ಹೆಚ್ಚು ಅನುದಾನ ನೀಡಿದ್ದು ಇದು 790 ಕೋಟಿ ರೂ.ಗಳಾಗಿದೆ. ಹಳ್ಳಿಗಳಿಗೆ ಮತ್ತು ಗ್ರಾಮೀಣ ಕರ್ನಾಟಕದ ಬಗ್ಗೆ ನನ್ನ ಸರ್ಕಾರಕ್ಕಿರುವ ಬದ್ಧತೆಯನ್ನು ಇದು ಬಿಂಬಿಸುತ್ತದೆ.

ನೀರು ಪೂರೈಕೆ

50. ನನ್ನ ಸರ್ಕಾರವು ಪ್ರಪ್ರಥಮ ಬಾರಿಗೆ ಗ್ರಾಮೀಣ ನೀರು ಪೂರೈಕೆಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ಪತ್ರವನ್ನು ಸಿದ್ಧಪಡಿಸಿದೆ. ಮಾನ್ಯ ಸದಸ್ಯರೆಲ್ಲರಿಗೂ ಈ ಯೋಜನಾ ಪತ್ರವನ್ನು ನೀಡಲಾಗುವುದು. ರಾಜ್ಯದಲ್ಲಿನ ಎಲ್ಲ ಹಳ್ಳಿಗಳಿಗೆ ಪ್ರತಿ ವ್ಯಕ್ತಿಗೆ, ಪ್ರತಿನಿತ್ಯ 55 ಲೀಟರ್ ನೀರನ್ನು ಪೂರೈಸುವುದು ನಮ್ಮ ಉದ್ದೇಶವಾಗಿದೆ. ರಾಜ್ಯದಲ್ಲಿನ 56,682 ಜನವಸತಿಗಳ ಪೈಕಿ ಶೇ. 61 ರಷ್ಟು ಮಂದಿ ಈಗಾಗಲೇ ನಿಗದಿತ ಮಾನದಂಡದಂತೆ 55 ಲೀಟರ್ ನೀರನ್ನು ಪಡೆಯುತ್ತಿದ್ದಾರೆ. ಉಳಿದ ಹಳ್ಳಿಗಳಿಗೆ ಮುಂದಿನ ಎರಡು ವರ್ಷಗಳಲ್ಲಿ ಈ ಸೌಕರ್ಯವನ್ನು ಕಲ್ಪಿಸಲಾಗುವುದು.

51. ನೀರಿನ ಗುಣಮಟ್ಟದ ಬಗ್ಗೆ ಸಮಗ್ರವಾದ ಸಮೀಕ್ಷೆಯನ್ನು ಪೂರ್ಣಗೊಳಿಸಿರುವ ರಾಷ್ಟ್ರದ ಏಕೈಕ ರಾಜ್ಯ ಕರ್ನಾಟಕ. ಸುಮಾರು ಎರಡು ಲಕ್ಷ ನೀರಿನ ಮೂಲಗಳನ್ನು ಪರೀಕ್ಷಿಸಿ ಅಧಿಕ ಫ್ಲೋರೈಡ್ ಮತ್ತು ಲವಣಯುಕ್ತ ನೀರನ್ನು ಪತ್ತೆ ಹಚ್ಚಲಾಗಿದೆ. ಈ ಎರಡು ಸಮಸ್ಯೆಗಳನ್ನು ನಿವಾರಿಸಲು 15 ಕೋಟಿ ರೂ.ಗಳ ವೆಚ್ಚದಲ್ಲಿ ವಿಶೇಷ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

52. ನೀರಿನ ಅತಿ ಬಳಕೆ ಮತ್ತು ಹೆಚ್ಚು ಆಳಕ್ಕೆ ಕೊಳವೆಬಾವಿಗಳನ್ನು ಕೊರೆದಿರುವುದರಿಂದಾಗಿ ರಾಜ್ಯದಲ್ಲಿನ 72 ತಾಲ್ಲೂಕುಗಳಲ್ಲಿ ನೀರಿನ ಅಂತರ್ಜಲ ಮಟ್ಟ ಕ್ಷೀಣಿಸುತ್ತಿದೆ. ಕೃತಕ ರೀತಿಯಿಂದ ರಾಜ್ಯದಲ್ಲಿ ಅಂತರ್ಜಲವನ್ನು ಪುನಶ್ಚೇತನಗೊಳಿಸಲು ಯೋಜನೆಯೊಂದನ್ನು ರೂಪಿಸಲಾಗುತ್ತಿದ್ದು ಇದಕ್ಕಾಗಿ ನಾನು 2001-02ನೇ ಸಾಲಿನಲ್ಲಿ 18 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

53. ಕರ್ನಾಟಕದ ಉತ್ತರ ಭಾಗಗಳಲ್ಲಿನ ಹತ್ತು ಜಿಲ್ಲೆಗಳಲ್ಲಿ 920 ಕೋಟಿ ರೂ.ಗಳ ವೆಚ್ಚದ ವಿಶ್ವಬ್ಯಾಂಕ್ ನೆರವಿನ ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ಮುಂದಿನ ಕೆಲವೇ ತಿಂಗಳುಗಳಲ್ಲಿ ಆರಂಭಿಸಲಾಗುವುದು. ಪ್ರತಿನಿತ್ಯ ಪ್ರತಿವ್ಯಕ್ತಿಗೆ 55 ಲೀಟರ್ ನೀರು ಪೂರೈಸುವ ಮಾನದಂಡವನ್ನು ಪೂರ್ಣಗೊಳಿಸುವ ಜೊತೆಗೆ ಈ ಯೋಜನೆಯು ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಸಂಸ್ಥೆಗಳನ್ನು ಬಲಪಡಿಸುತ್ತದೆ.

54. ನಗರ ಪ್ರದೇಶಗಳ ಶೀಘ್ರಗತಿಯ ಬೆಳವಣಿಗೆಯಿಂದಾಗಿ ನಗರ ನೀರು ಪೂರೈಕೆಯ ಸಮಸ್ಯೆಯನ್ನು ಸಹ ನಾವು ಎದುರಿಸಬೇಕಾಗಿದೆ. ಕೆ.ಯು.ಡಬ್ಲ್ಯು.ಎಸ್. ಡಿ.ಬಿ ಸಂಸ್ಥೆಯು 2000-01ರಲ್ಲಿ 27 ನೀರು ಪೂರೈಕೆ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಇವುಗಳಲ್ಲಿ 19 ಯೋಜನೆಗಳು ಕಾರ್ಯಾರಂಭ ಮಾಡಿವೆ. ಸುಮಾರು 18.5 ಲಕ್ಷ ಜನರು ಇದರಿಂದ ಅನುಕೂಲ ಪಡೆದಿದ್ದಾರೆ. 2001-02ರಲ್ಲಿ ಇನ್ನೂ 16 ಪಟ್ಟಣಗಳನ್ನು ಈ ಯೋಜನೆಯಡಿ ಸೇರಿಸಿಕೊಳ್ಳಲಾಗುವುದು. ಕರ್ನಾಟಕ ನಗರ ಪ್ರದೇಶಗಳ ಮೂಲ ಸೌಕರ್ಯಗಳ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ; ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ನೆರವಿನೊಂದಿಗೆ ರಾಜ್ಯದ ಕರಾವಳಿ ಭಾಗದ 10 ಪಟ್ಟಣಗಳು ಹಾಗೂ ನಗರಗಳ ನೀರು ಪೂರೈಕೆಯನ್ನೂ ಒಳಗೊಂಡಿರುವ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡಿದೆ. ಕರ್ನಾಟಕದ ಉತ್ತರ ಭಾಗದ 13 ಪಟ್ಟಣಗಳ ನೀರು ಪೂರೈಕೆಗೆ ಸಂಬಂಧಿಸಿದ 500 ಕೋಟಿ ರೂ.ಗಳ ಯೋಜನೆಗೆ ವಿಶ್ವಬ್ಯಾಂಕ್‌ನ ನೆರವು ಪಡೆಯಲು ಮಾತುಕತೆ ನಡೆಯುತ್ತಿದೆ.

55. ಬರಪೀಡಿತ ಪ್ರದೇಶಗಳನ್ನೊಳಗೊಂಡಿರುವ ಹತ್ತು ಜಿಲ್ಲೆಗಳಾದ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ಬಳ್ಳಾರಿ, ಹಾಸನ, ಮಂಡ್ಯ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಜನರ ನೀರಿನ ಬವಣೆಯನ್ನು ನಿವಾರಿಸುವ ಸಲುವಾಗಿ ಪಶ್ಚಿಮಕ್ಕೆ ಹರಿಯುತ್ತಿರುವ ನೇತ್ರಾವತಿ ನದಿಯಿಂದ ನೀರನ್ನು ಗುರುತ್ವಾಕರ್ಷಣೆ ಶಕ್ತಿಯ ಮೂಲಕ ಪೂರ್ವ ದಿಕ್ಕಿಗೆ ಹರಿಸಿ 142 ಟಿಎಂಸಿ ನೀರನ್ನು ಪಡೆದುಕೊಳ್ಳುವ ಯೋಜನೆಯನ್ನು ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ. ಇದು ಕುಡಿಯುವ ನೀರಿನ ಸರಬರಾಜನ್ನು ಈಡೇರಿಸುವುದಲ್ಲದೆ ಈ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟವನ್ನು ಸಹ ಸುಧಾರಿಸುವ ಭರವಸೆ ನಮಗಿದೆ. ಇದರ ಸಮಗ್ರ ಯೋಜನಾ ವರದಿಯನ್ನು ತಯಾರಿಸಲು 2001-02ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

56. ವಾಸ್ತವ ನೀರು ದರಗಳನ್ನು ನಿಗದಿಪಡಿಸಿ, ಬಿಲ್ಲಿಂಗ್ ಪದ್ಧತಿಯನ್ನು ಸುಧಾರಿಸಿ, ಕಟ್ಟುನಿಟ್ಟಾಗಿ ಶುಲ್ಕ ವಸೂಲಿ ಮಾಡದ ಹೊರತು ನಗರ ನೀರು ಪೂರೈಕೆಯನ್ನು ವಿಸ್ತರಿಸುವುದು

ಕಷ್ಟ. ಆದ್ದರಿಂದ ನೀರು ಸರಬರಾಜು ಯೋಜನೆಗಳ ಮಾಲೀಕತ್ವವನ್ನು ಪುರಸಭೆಗಳಲ್ಲಿಯೇ ಉಳಿಸಿ ಯೋಜನೆಯ ನಿರ್ವಹಣೆಯನ್ನು ಮಾತ್ರ ಕೆ.ಯು.ಡಬ್ಲ್ಯು.ಎಸ್. ಡಿ.ಬಿ.ಗೆ ವಹಿಸಲು ನಾನು ಉದ್ದೇಶಿಸಿದ್ದೇನೆ. ಈ ಸಂಸ್ಥೆಯು ನೀರು ದರವನ್ನು ನಿಗದಿಪಡಿಸಿ ವಸೂಲಾತಿ ಮಾಡುತ್ತದೆ.

ಆರೋಗ್ಯ ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ

57. ನಾವು ಈಗಾಗಲೇ 'ಸುರಕ್ಷ ಹೆರಿಗೆ' ಎನ್ನುವ ಯೋಜನೆಯನ್ನು ಜಾರಿಗೊಳಿಸಿದ್ದೇವೆ. ಸೀಲ್ ಮಾಡಿದ ಸುರಕ್ಷ ಹೆರಿಗೆ ಕಿಟ್‌ಗಳನ್ನು ಈ ಯೋಜನೆಯಡಿ ವಿತರಿಸಲಾಗುತ್ತಿದೆ. ಈ ಯೋಜನೆಯನ್ನು 2001-02ನೇ ಸಾಲಿಗೂ ವಿಸ್ತರಿಸಲಾಗುವುದು. ವೈಯಕ್ತಿಕ ಆರೋಗ್ಯ ಕಿಟ್‌ಗಳನ್ನು ಪೂರೈಸುವ ಯೋಜನೆಯನ್ನು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಪ್ರಾಯೋಗಿಕವಾಗಿ ರಾಯಚೂರಿನಲ್ಲಿ ಆರಂಭಿಸಲಾಯಿತು. ಈ ಯೋಜನೆಯನ್ನು ಈಗ ರಾಜ್ಯದ ಇತರೆ ಜಿಲ್ಲೆಗಳಿಗೆ ಹಾಗೂ ನಗರದ ಕೊಳಗೇರಿ ಪ್ರದೇಶಗಳಿಗೂ ಸಹ ವಿಸ್ತರಿಸಲಾಗುವುದು.

58. ರಾಜ್ಯದ ಕೆಲವು ಭಾಗಗಳಲ್ಲಿ ಎ.ಎನ್.ಎಮ್.ಗಳ ಕೊರತೆಯಿದೆ. ಈ ಭಾಗಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ಆರೋಗ್ಯಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ನೇರವಾಗಿ ತೊಡಗಿಸಿಕೊಳ್ಳುವ ಯೋಜನೆಯನ್ನು ಜಾರಿಗೊಳಿಸಲು ನಾನು ಉದ್ದೇಶಿಸಿದ್ದೇನೆ. ಇದಕ್ಕಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿ ಗೌರವಧನವನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ 2 ಕೋಟಿ ರೂ.ಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಇದು ಮಹತ್ತರ ಹೆಜ್ಜೆಯಾಗಿದೆ.

59. ಹೆಪಟೈಟಿಸ್ 'ಬಿ' ರೋಗವು ನಮ್ಮ ಎಲ್ಲ ಆರೋಗ್ಯ ಕಾರ್ಯಕರ್ತರನ್ನು ಅಪಾಯದ ಅಂಚಿನಲ್ಲಿಟ್ಟಿದೆ. ಆದ್ದರಿಂದ ನಾನು 30,000 ಮಂದಿ ಸರ್ಕಾರಿ ಆರೋಗ್ಯ ಕಾರ್ಯಕರ್ತರಿಗೆ ಹೆಪಟೈಟಿಸ್ 'ಬಿ' ನಿರೋಧಕ ಚುಚ್ಚುಮದ್ದನ್ನು ಹಾಕಲು ಅನುವಾಗುವಂತೆ 1 ಕೋಟಿ ರೂ.ಗಳನ್ನು ನಿಗದಿಮಾಡಿದ್ದೇನೆ.

60. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರುಗಳ ಕೊರತೆ ಇದೆ. ಆದ್ದರಿಂದ ಸ್ನಾತಕೋತ್ತರ ವೈದ್ಯಕೀಯ ಪದವಿಗೆ ಆಯ್ಕೆಯಾಗುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಯನ್ನು ನಾವು ಜಾರಿಗೊಳಿಸುತ್ತಿದ್ದೇವೆ. ಇವರಿಗೆ ಮಾಸಿಕ 6000 ರೂ.ಗಳ ಗೌರವ ಭತ್ಯೆಯನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ 500 ಮಂದಿ ವೈದ್ಯರುಗಳ ಸೇವೆಯನ್ನು ಪಡೆದುಕೊಳ್ಳಲು ಯೋಜಿಸಲಾಗಿದೆ. ಈ ಯೋಜನೆಯ ವಿವರಗಳನ್ನು ಮುಂದಿನ ಮೂರು ತಿಂಗಳೊಳಗಾಗಿ ಸೂಚಿಸಲಾಗುವುದು.

61. ವಿಶ್ವಬ್ಯಾಂಕ್ ನೆರವಿನ 562.41 ಕೋಟಿ ರೂ.ಗಳ ವೆಚ್ಚದ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯು 200 ಆಸ್ಪತ್ರೆಗಳಲ್ಲಿ ಜಾರಿಯಲ್ಲಿದ್ದು ಮಾರ್ಚ್ 2002ರ ವೇಳೆಗೆ ಪೂರ್ಣಗೊಳ್ಳಲಿದೆ. ಸಮಗ್ರ ಆರೋಗ್ಯ, ಪೌಷ್ಠಿಕತೆ ಮತ್ತು ಕುಟುಂಬ ಕಲ್ಯಾಣ ಸೇವೆಗಳನ್ನು ಒಳಗೊಂಡಿರುವ 800 ಕೋಟಿ ರೂ.ಗಳ ವೆಚ್ಚದ ನೂತನ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ.

ಇದು ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆ ಮತ್ತು ದಕ್ಷ ಚಿಕಿತ್ಸಾ ವ್ಯವಸ್ಥೆಯನ್ನು ಸ್ಥಾಪಿಸಲಿದೆ. ಈ ಯೋಜನೆಯು ಆರೋಗ್ಯ ರಕ್ಷಣೆಯಲ್ಲಿ ಗುಣಮಟ್ಟ ಮತ್ತು ಸಮಭಾಗಿತ್ವ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ, ಪೌಷ್ಟಿಕತೆಯ ವಿಷಯಗಳು, ಸಮುದಾಯ ಪಾಲ್ಗೊಳ್ಳುವಿಕೆ ಮತ್ತು ಸ್ವಯಂಸೇವಾ ಸಂಸ್ಥೆಗಳ ಪಾಲುದಾರಿಕೆಯತ್ತ ಗಮನಹರಿಸಲಿದೆ.

62. ಪದ್ಮಶ್ರೀ ಡಾ॥ ಹೆಚ್. ಸುದರ್ಶನ್‌ರವರ ಅಧ್ಯಕ್ಷತೆಯ ಆರೋಗ್ಯ ಪಡೆಯು ತನ್ನ ಮಧ್ಯಂತರ ವರದಿಯನ್ನು ಸಲ್ಲಿಸಿದೆ. ಆರೋಗ್ಯ ರಕ್ಷಣೆ ಸೇವೆಯಲ್ಲಿ ಸಮಭಾಗಿತ್ವ ಬಲಪಡಿಸುವುದು ಮತ್ತು ಗುಣಮಟ್ಟ ಸುಧಾರಿಸುವ ಬಗ್ಗೆ ಇದು ಹೆಚ್ಚು ಒತ್ತು ನೀಡಿದೆ. ಕಾರ್ಯಪಡೆಯ ಬಹುತೇಕ ಶಿಫಾರಸ್ಸುಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ ಎನ್ನುವ ವಿಷಯವನ್ನು ನಾನು ಮಾನ್ಯ ಸದಸ್ಯರುಗಳಿಗೆ ತಿಳಿಸಬಯಸುತ್ತೇನೆ. ಖಾಲಿಯಿದ್ದ ವೈದ್ಯರುಗಳು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳ ಭರ್ತಿ, 1000 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅಗತ್ಯ ಉಪಕರಣಗಳ ಪೂರೈಕೆ ಮತ್ತು ಅನುದಾನದಲ್ಲಿ ಹೆಚ್ಚಳ, 105 ಆಸ್ಪತ್ರೆಗಳನ್ನು ಸಂಪೂರ್ಣವಾಗಿ ಸಜ್ಜುಗೊಳಿಸಿರುವುದು ಅನುಷ್ಠಾನದಲ್ಲಿ ಸೇರಿವೆ. ಇದರ ಜೊತೆಗೆ ನೇಮಕಾತಿಯಲ್ಲಿ ಪಾರದರ್ಶಕತೆಯನ್ನು ಜಾರಿಗೆ ತರಲಾಗಿದೆ. ಸೇವೆಯಲ್ಲಿ ಅಶಿಸ್ತನ್ನು ಹತ್ತಿಕ್ಕಲು ವಿಶೇಷ ಜಾಗೃತ ದಳವನ್ನು ರಚಿಸಲಾಗಿದೆ.

63. ನಾವು 2001-02ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ವಹಿಸಲು ಸ್ವಯಂಸೇವಾ ಸಂಸ್ಥೆಗಳು ಮತ್ತು ಖಾಸಗಿ ವಲಯದವರನ್ನು ಆಹ್ವಾನಿಸುವ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದ್ದೇವೆ. ಖಾಸಗಿ ವೈದ್ಯಕೀಯ ಕಾಲೇಜುಗಳು ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ದತ್ತು ತೆಗೆದುಕೊಳ್ಳುವಂತೆ ಆರಂಭಿಕವಾಗಿ ಪ್ರೋತ್ಸಾಹಿಸುತ್ತಿದ್ದೇವೆ.

64. ನಮ್ಮ ಕಾಲೇಜುಗಳಿಗೆ 100 ಕೋಟಿ ರೂ.ಗಳ ಮೌಲ್ಯದ ಉಪಕರಣಗಳನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಸರಬರಾಜು ಮಾಡಲು 2001-02ನೇ ಸಾಲಿನಲ್ಲಿ ವಿದೇಶಿ ನೆರವನ್ನು ತೆಗೆದುಕೊಳ್ಳುತ್ತಿದ್ದೇವೆ. ಈ ಯೋಜನೆಯನ್ನು ಫಿನ್‌ಲ್ಯಾಂಡ್ ಸರ್ಕಾರದ ನೆರವಿನಲ್ಲಿ ಅನುಷ್ಠಾನಗೊಳಿಸಲಾಗುವುದು.

ಶಿಕ್ಷಣ

65. ಖ್ಯಾತ ಅಣು ವಿಜ್ಞಾನಿ ಡಾ॥ ರಾಜರಾಮಣ್ಣನವರ ಅಧ್ಯಕ್ಷತೆಯಲ್ಲಿ ನನ್ನ ಸರ್ಕಾರವು ಶಿಕ್ಷಣ ಕಾರ್ಯಪಡೆಯನ್ನು ರಚಿಸಿರುವ ಸಂಗತಿ ತಮಗೆ ತಿಳಿದೇ ಇದೆ. ನಾನೀಗ ಪ್ರಸ್ತಾಪಿಸಲಿರುವ ಹಲವು ವಿಷಯಗಳು ಈ ಕಾರ್ಯಪಡೆಯ ಶಿಫಾರಸ್ಸುಗಳನ್ನೇ ಪ್ರತಿಬಿಂಬಿಸುತ್ತವೆ.

66. ಮುಂದಿನ ಶೈಕ್ಷಣಿಕ ವರ್ಷದಿಂದ ಹಾಲಿ ಇರುವ ಪ್ರಾಥಮಿಕ ಶಾಲೆಗಳಿಗೆ ಐದನೇ ತರಗತಿಯನ್ನು ಸಹ ಸೇರಿಸಲಾಗುವುದು. ಶಾಲೆಯಿಂದ ಹೊರಬಿದ್ದಿರುವ ಸುಮಾರು ಒಂದು ಲಕ್ಷ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ "ಚಿಣ್ಣರ ಅಂಗಳ" ಎನ್ನುವ ಸಮಗ್ರ ಯೋಜನೆಯನ್ನು ಜಾರಿಗೊಳಿಸಲಾಗುವುದು 2001-02 ನೇ ಸಾಲಿನಲ್ಲಿ 15 ಸಾವಿರ ನೂತನ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಉತ್ತಮ ಹಾಗೂ ಅರ್ಪಣಾ ಮನೋಭಾವದ ಶಿಕ್ಷಕರನ್ನು ಗುರುತಿಸಿ ಗೌರವಿಸುವ ದೃಷ್ಟಿಯಿಂದ 'ಜನ ಮೆಚ್ಚಿದ ಶಿಕ್ಷಕ' ಎನ್ನುವ ಪ್ರಶಸ್ತಿಯನ್ನು ಆರಂಭಿಸಲಾಗಿದೆ.

67. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಧನಸಹಾಯ ನೀಡಲು ಅದರಲ್ಲೂ ವಿಶೇಷವಾಗಿ ನಮ್ಮ ಆತ್ಮಸಾಕ್ಷಿಗೆ ನೋವುಂಟು ಮಾಡುವಷ್ಟು ಮಹಿಳಾ ಸಾಕ್ಷರತಾ ಪ್ರಮಾಣ ಕಡಿಮೆಯಿರುವ ಏಳು ಜಿಲ್ಲೆಗಳಿಗೆ ಹೆಚ್ಚಿನ ನೆರವು ನೀಡಲು ಅನುದಾನ ಸಂಹಿತೆಯನ್ನು ಪುನರ್‌ಪರಿಶೀಲಿಸಲಾಗುವುದು. ಭಾರತದ ಉನ್ನತ ಶಿಕ್ಷಣದ ರಾಜಧಾನಿ ಎಂದು ಖ್ಯಾತಿಗಳಿಸಿರುವ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಜಗತ್ತಿನಾದ್ಯಂತ ಹೆಸರುವಾಸಿಯಾಗಿರುವ ಕರ್ನಾಟಕ ರಾಜ್ಯದಲ್ಲಿಯೇ ಏಳೆಂಟು ಜಿಲ್ಲೆಗಳು ಶಿಕ್ಷಣ ಸೂಚಕದಲ್ಲಿ ಕೆಳಗಿನ ಸ್ಥಾನ ಪಡೆದಿರುವುದು ವಿಷಾದದ ಸಂಗತಿಯಲ್ಲವೆ ? ಕಳೆದ ವರ್ಷದ ಬಜೆಟ್‌ನಲ್ಲಿ ಸಹಾಯಧನಯುಕ್ತ ಉನ್ನತ ಶಿಕ್ಷಣದಿಂದ ಹಣವನ್ನು ಪ್ರಾಥಮಿಕ ಶಿಕ್ಷಣ ವಲಯಕ್ಕೆ ವರ್ಗಾಯಿಸಲು ನಾವು ಆರಂಭದ ಹೆಜ್ಜೆಗಳನ್ನು ಇಟ್ಟೆವು. ಈಗ ಒಂದು ಹೊಸ ವಿಧಾನವನ್ನು ರೂಪಿಸಲಿದ್ದೇವೆ. ನಾನು ನಮ್ಮ ಸಮಾಜದ ಅನುಕೂಲಸ್ಥ ಜನಸಮುದಾಯಕ್ಕೆ ಕೊಂಚ ತ್ಯಾಗ ಮಾಡುವಂತೆ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಇದರಿಂದ ಸವಲತ್ತುಗಳಿಂದ ವಂಚಿತರಾಗಿರುವ, ನಮಗಿಂತಲೂ ಹೆಚ್ಚು ತೊಂದರೆಯಲ್ಲಿರುವ ನೊಂದ ಜನರ ಬದುಕಿಗೆ ಬೆಳಕು ತರಲು ಸಾಧ್ಯವಾಗುತ್ತದೆ.

68. 'ದತ್ತು ಯೋಜನೆ' ಎನ್ನುವ ಹೊಸ ಕಾರ್ಯಕ್ರಮವನ್ನು ನಾವು ಆರಂಭಿಸಿದ್ದೇವೆ. ಕಾರ್ಪೊರೇಟ್ ಸಂಸ್ಥೆಗಳು ಮತ್ತು ಇತರೆ ದಾನಿಗಳು ಶಿಕ್ಷಣ ಇಲಾಖೆ ಜೊತೆ ಒಡಂಬಡಿಕೆ ಮಾಡಿಕೊಂಡು ಶಾಲೆಗಳನ್ನು ದತ್ತು ತೆಗೆದುಕೊಳ್ಳಬಹುದು. ಈಗಾಗಲೇ 1400 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳಲಾಗಿದೆ.

69. ನಮ್ಮೆಲ್ಲ ಆರ್ಥಿಕ ಬಿಕ್ಕಟ್ಟುಗಳ ನಡುವೆ ನಾವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ 2000-01 ರಲ್ಲಿದ್ದ 355 ಕೋಟಿ ರೂ.ಗಳ ಯೋಜನಾ ಅನುದಾನವನ್ನು 2001-02 ರಲ್ಲಿ 448 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇವೆ. ಇದು ಶೇ 26 ರಷ್ಟು ಏರಿಕೆಯಾಗಿದ್ದು ಮಾನ್ಯ ಸದಸ್ಯರಿಗೆ ಹರ್ಷ ತರುತ್ತದೆ ಎಂದು ಭಾವಿಸಿದ್ದೇನೆ.

70. ನಾವು 15,838 ಶಾಲಾ ಕೊಠಡಿಗಳನ್ನು ನಿರ್ಮಿಸುವ ಮತ್ತು 34,428 ಶಾಲೆಗಳಿಗೆ ಶೌಚಾಲಯ ಒದಗಿಸುವ ಹಾಗೂ 25,810 ಪ್ರಾಥಮಿಕ ಶಾಲೆಗಳಿಗೆ ಕುಡಿಯುವ ನೀರು ಪೂರೈಸುವ ಸಮಗ್ರ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ.

71. ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ವಿನೂತನ ಮೂಲಗಳಿಂದ ಹೆಚ್ಚುವರಿ ನಿಧಿಯನ್ನು ಸಂಗ್ರಹಿಸುವ ದಿಕ್ಕಿನಲ್ಲಿ ಪ್ರಥಮ ಹೆಜ್ಜೆಯಾಗಿ 'ಸರ್ವಶಿಕ್ಷ ಅಭಿಯಾನಾ' ಎನ್ನುವ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯು ನಿರ್ದಿಷ್ಟ ಯೋಜನೆಗಳಿಗಾಗಿ ವಿಶೇಷವಾಗಿ ವಿದೇಶಿ ಕನ್ನಡಿಗರಿಂದ ಸಂಪನ್ಮೂಲ ಸಂಗ್ರಹಿಸಲು ದೃಢ ಪ್ರಯತ್ನಗಳನ್ನು ಮಾಡಲಿದೆ.

ಸಮಾಜ ಕಲ್ಯಾಣ

72. ನನ್ನ ಸರ್ಕಾರವು ಸಮಾಜದ ದುರ್ಬಲ ವರ್ಗಗಳ ಕಲ್ಯಾಣಕ್ಕಾಗಿ ನಾಲ್ಕು ನೀತಿಗಳಿಗೆ ಬದ್ಧವಾಗಿದೆ. ಅವುಗಳೆಂದರೆ ಶಿಕ್ಷಣ, ಉದ್ಯೋಗ, ಬಲಸಂವರ್ಧನೆ ಮತ್ತು ಉದ್ಯಮಶೀಲತೆ. ಎಲ್ಲಾ ಯೋಜನೆಗಳನ್ನು ಈ ನಾಲ್ಕು ವಿಶಾಲ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸಮಗ್ರಗೊಳಿಸಲಾಗುವುದು.

ನಾನು ಈಗಾಗಲೇ ಸಮಾಜದ ದುರ್ಬಲ ವರ್ಗಗಳ ವಸತಿಗೆ ಸಂಬಂಧಿಸಿದಂತೆ ನಮ್ಮ ಕಾರ್ಯಕ್ರಮಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇದರ ಜೊತೆಗೆ ಗಂಗಾ ಕಲ್ಯಾಣ ಯೋಜನೆಗೆ ಹೆಚ್ಚು ಒತ್ತು ನೀಡಲಿದ್ದೇನೆ.

73. 2000-01ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರ ವಿಶೇಷ ಘಟಕ ಯೋಜನೆಗೆ ನೀಡಿದ ಹಣ 445.26 ಕೋಟಿ ರೂ.ಗಳು ಇದನ್ನು ಈ ಬಾರಿ ಶೇ. 36 ರಷ್ಟು ಹೆಚ್ಚುವರಿ ಅಂದರೆ 607 ಕೋಟಿ ರೂ.ಗಳಿಗೆ ಹೆಚ್ಚಿಸಲಿದ್ದೇನೆ ಎಂಬುದು ಗೌರವಾನ್ವಿತ ಸದಸ್ಯರಿಗೆ ಹರ್ಷ ತರುತ್ತದೆ ಎಂದು ಭಾವಿಸುತ್ತೇನೆ. 2000-01ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಗೆ ಮೀಸಲಿರಿಸಿದ್ದ 90 ಕೋಟಿ ರೂ.ಗಳನ್ನು 2001-02 ನೇ ಸಾಲಿಗೆ 134 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಅಂದರೆ ಶೇ. 50 ರಷ್ಟು ಹೆಚ್ಚಳವಾಗಿದೆ. ಈ ಹೆಚ್ಚಳವು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಬಗ್ಗೆ ನನಗಿರುವ ಕಾಳಜಿ ಮತ್ತು ಅವರ ಆರ್ಥಿಕ ಅಭಿವೃದ್ಧಿಗೆ ನನ್ನ ಸರ್ಕಾರಕ್ಕಿರುವ ಬದ್ಧತೆಯ ದ್ಯೋತಕವಾಗಿದೆ.

74. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರ ಕಲ್ಯಾಣಕ್ಕಾಗಿ ಇನ್ನೂ ಅನೇಕ ಕ್ರಮಗಳನ್ನು ಈ ಕೆಳಗಿನಂತೆ ಕೈಗೊಳ್ಳಲಾಗುವುದು.

- ರಾಷ್ಟ್ರೀಯ ಪ.ಜಾ / ಪ.ಪಂ. ಆಯೋಗದ ಮಾದರಿಯಲ್ಲೇ ಒಂದು ಕರ್ನಾಟಕ ಪ.ಜಾ / ಪ.ಪಂ. ಆಯೋಗವನ್ನು ರಚಿಸಲಾಗುವುದು. ಈ ಆಯೋಗವು ಸಮಾಜ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಪ್ರತಿ ವರ್ಷವೂ ಶಾಸಕಾಂಗಕ್ಕೆ ವರದಿ ಸಲ್ಲಿಸುತ್ತದೆ.
- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳ ಸಂಪೂರ್ಣ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ನೀಡಲಾಗುವುದು. ಮುಂದಿನ ವಿಧಿ ವಿಧಾನಗಳನ್ನು ಆರ್ಥಿಕ ಇಲಾಖೆಯು ಮೂರು ತಿಂಗಳಿನೊಳಗೆ ರೂಪಿಸಲಿದೆ.
- ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಬಳಸುವವರ ವಿರುದ್ಧ ಶಿಕ್ಷಾರ್ಹ ಕ್ರಮ ಕೈಗೊಳ್ಳಲಾಗುವುದು.
- ಪ.ಜಾ / ಪ.ಪಂ.ಗಳ ಮೀಸಲಾತಿಯನ್ನು ಕಾನೂನಿಗನುಗುಣವಾಗಿ ಸಂಪೂರ್ಣ ಭರ್ತಿ ಮಾಡುವ ಕಾರ್ಯಕ್ಕೆ ಸಮಾಜ ಕಲ್ಯಾಣ ಇಲಾಖೆಯು ಸಮನ್ವಯ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತದೆ.
- ಅತ್ಯಂತ ಸೂಕ್ಷ್ಮ ಜಿಲ್ಲೆಗಳಲ್ಲಿ ಪ.ಜಾ / ಪ.ಪಂ. ಮೇಲಿನ ದೌರ್ಜನ್ಯ ಪ್ರಕರಣಗಳನ್ನು ವಿಚಾರಣೆ ನಡೆಸಲು ಸಂಚಾರಿ ಹಾಗೂ ವಿಶೇಷ ನ್ಯಾಯಾಲಯಗಳ ಸಂಪೂರ್ಣ ವೆಚ್ಚವನ್ನು ಭರಿಸಲು ಉಚ್ಚನ್ಯಾಯಾಲಯದ ಜೊತೆ ರಾಜ್ಯವು ಸಮಾಲೋಚನೆ ನಡೆಸಲಿದೆ. ಅಲ್ಲದೇ, ಶಿಕ್ಷೆಯ ಪ್ರಮಾಣವನ್ನು ಸುಧಾರಿಸಲು ಕಾಲಮಿತಿ ಕಾರ್ಯಕ್ರಮ ರೂಪಿಸಲಿದೆ. ದೌರ್ಜನ್ಯ ಪ್ರಕರಣಗಳನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗುವುದು.

75. 2000-01ನೇ ಸಾಲಿನಲ್ಲಿ ಪ.ಜಾ / ಪ.ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಅನುಕ್ರಮವಾಗಿ 15,604 ಪ.ಜಾ / ಪ.ಪಂ.ಗಳ ಫಲಾನುಭವಿಗಳಿಗೆ ಮತ್ತು 6,633 ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ ನೇರವಾಗಿ ಸಹಾಯ ನೀಡಿರುವುದು ಮಾನ್ಯ ಸದಸ್ಯರಿಗೆ ಸಂತೋಷ ತರುವುದೆಂದು ಭಾವಿಸುತ್ತೇನೆ.

76. ಪ.ಜಾ / ಪ.ಪಂ., ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಮಕ್ಕಳಿಗೆ ನಡೆಸುತ್ತಿರುವ ಆಶ್ರಮ ಮತ್ತು ವಸತಿ ಶಾಲೆಗಳಿಗೆ ತಿಂಗಳೊಂದಕ್ಕೆ ಪ್ರತಿ ಮಗುವಿಗೆ ನೀಡುವ ಆಹಾರ ಭತ್ಯೆಯನ್ನು 250 ರಿಂದ 350 ರೂ.ಗಳಿಗೆ ಏರಿಸಲಾಗುವುದು. ಇದರ ಜೊತೆಗೆ ಈ ಶಾಲೆಯ ಮಕ್ಕಳಿಗೆ ಸಮವಸ್ತ್ರ ಭತ್ಯೆಯನ್ನು 100 ರೂ.ಗಳಿಂದ 200 ರೂ.ಗಳಿಗೆ ಏರಿಸಲಾಗುವುದು.

77. ಪ.ಜಾ / ಪ.ಪಂ.ಗಳ ಅಭಿವೃದ್ಧಿ ನಿಗಮದ ಮೂಲಕ 3000 ಪ.ಜಾ. ಮತ್ತು 2000 ಪ.ಪಂ.ದ ಅಭ್ಯರ್ಥಿಗಳಿಗೆ ಮಾಹಿತಿ ತಂತ್ರಜ್ಞಾನವೂ ಒಳಗೊಂಡಂತೆ ವಿವಿಧ ಕೌಶಲ್ಯಗಳಲ್ಲಿ ತರಬೇತಿಯನ್ನು ನೀಡಲಾಗುವುದು. ಕರ್ನಾಟಕ ಪ.ಜಾ / ಪ.ಪಂ. ಅಭಿವೃದ್ಧಿ ನಿಗಮದ ಮೂಲಕ 100 ಲಂಬಾಣಿ ತಾಂಡಗಳಲ್ಲಿ 2000 ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಲಂಬಾಣಿ ಉಡುಪು ತಯಾರಿಕೆ ಕಲೆಯಲ್ಲಿ ತರಬೇತಿ ನೀಡಲಾಗುವುದು. ಇದು ಅವರ ಸ್ವಯಂ ಉದ್ಯೋಗಕ್ಕೆ ದಾರಿಯಾಗಲಿದೆ.

78. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 38 ವಸತಿ ಶಾಲಾ ಕಟ್ಟಡಗಳ ನಿರ್ಮಾಣವನ್ನು ಕೈಗೆತ್ತಿಕೊಂಡಿದ್ದು ಎಲ್ಲಾ ಕಟ್ಟಡಗಳನ್ನು 2001-02ನೇ ಸಾಲಿನಲ್ಲಿ ಪೂರ್ಣಗೊಳಿಸಲಿದೆ. ಎರಡನೇ ಹಂತದಲ್ಲಿ ಉಳಿದ ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

79. ಪ್ರಸಕ್ತ ವರ್ಷದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 7432 ಫಲಾನುಭವಿಗಳಿಗೆ ನೆರವು ನೀಡಿದೆ. 2001-02ನೇ ಸಾಲಿನಲ್ಲಿ 2000 ಅಭ್ಯರ್ಥಿಗಳಿಗೆ ಮಾಹಿತಿ ತಂತ್ರಜ್ಞಾನವೂ ಒಳಗೊಂಡಂತೆ ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡಲಾಗುವುದು. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡಲಾಗುವ ಅನುದಾನವನ್ನು 10 ಕೋಟಿ ರೂ.ಗಳಿಂದ 14 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ.

80. 2001-02ನೇ ಸಾಲಿನಲ್ಲಿ 50 ಲಕ್ಷ ರೂ.ಗಳ ವೆಚ್ಚದಲ್ಲಿ ಅಲ್ಪಸಂಖ್ಯಾತರ ಬಾಲಕಿಯರಿಗಾಗಿ ಐದು ಪೋಸ್ಟ್‌ಮೆಟ್ರಿಕ್ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು. ಐದು ಪ್ರೀಮೆಟ್ರಿಕ್ ಬಾಲಕಿಯರ ವಸತಿ ನಿಲಯಗಳನ್ನು ಆರಂಭಿಸಲಾಗುವುದು ಇವುಗಳಿಗೆ 25 ಲಕ್ಷ ರೂ.ಗಳನ್ನು ಹಂಚಿಕೆ ಮಾಡಲಾಗುವುದು. 2001-02ನೇ ಸಾಲಿನಲ್ಲಿ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ 500 ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ ನೀಡಲಾಗುವುದು.

81. 2000-01ನೇ ಸಾಲಿನಲ್ಲಿ ಅಲ್ಪಸಂಖ್ಯಾತರಿಗೆ ನೀಡಲಾಗಿದ್ದ 12 ಕೋಟಿ ರೂ.ಗಳ ಯೋಜನಾ ಅನುದಾನವನ್ನು 2001-02ನೇ ಸಾಲಿಗೆ 18 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇವೆ. 2001-02ನೇ ಸಾಲಿನಲ್ಲಿ ವಕ್ಫ್ ಮಂಡಳಿಗೆ 10 ಕೋಟಿ ರೂ.ಗಳ ಅನುದಾನ ನೀಡಲಾಗುವುದು.

82. ನಾವು ಮದರಸ ಮಂಡಳಿಯನ್ನು ಸ್ಥಾಪಿಸುತ್ತಿರುವ ವಿಷಯವು ಮಾನ್ಯ ಸದಸ್ಯರುಗಳಿಗೆ ಸಂತಸ ತರುತ್ತದೆಂದು ನಾನು ಭಾವಿಸಿದ್ದೇನೆ. ಇದು ರಾಜ್ಯದ ಎಲ್ಲ ಮದರಸಗಳಲ್ಲಿನ ಪಠ್ಯಕ್ರಮವನ್ನು ಆಧುನೀಕರಣಗೊಳಿಸಲು, ಆಧುನಿಕ ಕೌಶಲ್ಯದಲ್ಲಿ ಮಕ್ಕಳನ್ನು ಸಜ್ಜುಗೊಳಿಸಲು ಹಾಗೂ ಮುಂದುವರಿದ ಶಿಕ್ಷಣದ ಲಾಭ ಪಡೆಯಲು ಅವರಿಗೆ ನೆರವಾಗುತ್ತದೆ.

ಮಹಿಳೆ ಮತ್ತು ಮಕ್ಕಳು

83. ಮಾನ್ಯ ಸದಸ್ಯರುಗಳಿಗೆ ನಾನು ತಿಳಿಸಲಿರುವ ಸಂತಸದ ಸಂಗತಿಯೆಂದರೆ ನಾವು ಸ್ತ್ರೀಶಕ್ತಿ ಯೋಜನೆಯ ಮೂಲಕ ಈಗಾಗಲೇ 46,983 ಸ್ವಸಹಾಯ ತಂಡಗಳನ್ನು ರಚಿಸಿ 5 ಕೋಟಿ ರೂ.ಗಳ ಠೇವಣಿಯನ್ನು ಕ್ರೋಢೀಕರಿಸುವುದು. 2001-02ನೇ ಸಾಲಿನಲ್ಲಿ 50,000 ತಂಡಗಳನ್ನು ರಚಿಸಲಾಗುವುದು. ಈ ಯೋಜನೆಯು ಮಹಿಳೆಯರ ಬಲಸಂವರ್ಧನೆಯಲ್ಲಿ ಯಶಸ್ವಿಯಾಗುತ್ತದೆಂದು ನನಗೆ ಮನವರಿಕೆಯಾಗಿದೆ.

84. ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ "ಸಾಂತ್ವನ" ಯೋಜನೆಯ ಜಾರಿಗೆ ನನ್ನ ಸರ್ಕಾರ ಮಂಜೂರಾತಿ ನೀಡಿದೆ. ಈ ಯೋಜನೆಯನ್ನು ಮೊದಲ ಹಂತದಲ್ಲಿ ಬೆಂಗಳೂರು ಗ್ರಾಮೀಣ, ಚಿಕ್ಕಮಗಳೂರು, ಬಳ್ಳಾರಿ, ಗುಲ್ಬರ್ಗಾ, ಧಾರವಾಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವುದು.

85. ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ನೀಡುವ ಪೂರಕ ಪೌಷ್ಟಿಕ ಆಹಾರ ಗುಣಮಟ್ಟವನ್ನು ಹೆಚ್ಚಿಸಲು ನಿರ್ಧರಿಸಿದ್ದೇವೆ. ಇದಕ್ಕಾಗಿ ಈಗ ಪ್ರತಿ ದಿನಕ್ಕೆ ನೀಡುತ್ತಿರುವ ವೆಚ್ಚವನ್ನು ರೂ. 1.25 ಗಳಿಂದ ರೂ. 1.50ಕ್ಕೆ ಹೆಚ್ಚಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 12 ಕೋಟಿ ರೂ. ಹೆಚ್ಚುವರಿ ಅನುದಾನವನ್ನು ಒದಗಿಸುತ್ತಿದ್ದೇನೆ.

ಅಂಗವಿಕಲರ ಕಲ್ಯಾಣ

86. ದೃಷ್ಟಿದೋಷವಿರುವ ಮಕ್ಕಳಿಗೆ ಪಾಠ ಹೇಳುವ ಶಿಕ್ಷಕರನ್ನು ತರಬೇತುಗೊಳಿಸಲು ಡೆಹರಾಡೂನ್‌ನ ದೃಷ್ಟಿದೋಷ ರಾಷ್ಟ್ರೀಯ ಸಂಸ್ಥೆಯ ಸಹಯೋಗದೊಡನೆ ನಾವು ಈಗಾಗಲೇ ಮೈಸೂರಿನಲ್ಲಿ ಹೆಲೆನ್‌ಕೆಲರ್ ಶಿಕ್ಷಕರ ತರಬೇತಿ ಕೇಂದ್ರವನ್ನು ಆರಂಭಿಸಿದ್ದೇವೆ. ಇದೇ ರೀತಿ ಶ್ರವಣ ದೋಷವಿರುವ ಮಕ್ಕಳಿಗಾಗಿ ಶಿಕ್ಷಕರನ್ನು ತರಬೇತುಗೊಳಿಸಲು ಅಲಿಯವರ್‌ಜಂಗ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಹಿಯರಿಂಗ್ ಇಂಪೇರ್ಡ್ ಸಂಸ್ಥೆಯ ಸಹಯೋಗದಲ್ಲಿ ತರಬೇತಿ ಸಂಸ್ಥೆಯನ್ನು ಮೈಸೂರಿನಲ್ಲಿ 2001-02ನೇ ಸಾಲಿನಲ್ಲಿ ಆರಂಭಿಸಲಾಗುವುದು.

87. ವಿಕಲಾಂಗ ಮಕ್ಕಳ ನೆರವಿಗಾಗಿ, ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ ಈಗ ಆರು ಜಿಲ್ಲೆಗಳ 10 ತಾಲ್ಲೂಕುಗಳಲ್ಲಿ ಆರಂಭವಾಗಿದೆ. ಹಾಗೆಯೆ ನಮ್ಮ ಸರ್ಕಾರವು ಐದು ಜಿಲ್ಲೆಗಳಲ್ಲಿ ವಿಕಲಾಂಗ ವ್ಯಕ್ತಿಗಳ ರಾಷ್ಟ್ರೀಯ ಪುನರ್ವಸತಿ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ.

88. ಪೂರ್ಣ ಅಂಗವಿಕಲ ವ್ಯಕ್ತಿಗಳಿಗೆ ಕ.ರಾ.ರ.ಸಾ.ಸಂ. ಬಸ್ಸುಗಳಲ್ಲಿ ಸಂಚರಿಸಲು ಉಚಿತ ಪಾಸ್‌ಗಳನ್ನು ಜುಲೈ 1, 2001ರಿಂದ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗುವುದು. ಇದರಿಂದ ಸುಮಾರು 20,000 ಅಂಗವಿಕಲರಿಗೆ ಸೌಲಭ್ಯ ದೊರೆಯಲಿದೆ.

ಕೈಗಾರಿಕೆ

89. ಮುಂದಿನ ಎರಡು ತಿಂಗಳೊಳಗೆ ಹೊಸ ಕೈಗಾರಿಕಾ ನೀತಿಯೊಂದನ್ನು ಘೋಷಿಸಲಾಗುವುದು. ಮೂಲಭೂತ ಸೌಕರ್ಯ ಒದಗಿಸುವ ಮತ್ತು ವ್ಯಾಪಾರೋದ್ಯಮ ನಿಬಂಧನೆಗಳನ್ನು ಸರಳೀಕರಣಗೊಳಿಸುವ ಮೂಲಕ ಖಾಸಗೀ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಈ ನೀತಿಯಲ್ಲಿ ಹೆಚ್ಚು ಒತ್ತು ನೀಡಲಾಗಿದೆ. ಹಾಲಿ ಇರುವ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಉನ್ನತ ದರ್ಜೆಗೇರಿಸುವುದು ಹಾಗೂ ವಲಯ ನಿರ್ದಿಷ್ಟ ಹಾಗೂ ಸ್ಥಳ ನಿರ್ದಿಷ್ಟ ಕೈಗಾರಿಕಾ ಪಾರ್ಕುಗಳ ಸ್ಥಾಪನೆಗೆ ಆದ್ಯತೆ ನೀಡಲಾಗುವುದು. ಇದನ್ನು ಖಾಸಗೀ ವಲಯಗಳ ಸಕ್ರಿಯ ಪಾಲುಗಾರಿಕೆಯಿಂದ ಸಾಧಿಸಲಾಗುವುದು.

90. ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಧಿಯೊಂದನ್ನು ಆರು ಕೋಟಿ ರೂ.ಗಳ ಆರಂಭಿಕ ಮೂಲ ನಿಧಿಯೊಡನೆ ಸ್ಥಾಪಿಸಲಾಗುವುದು. ಇನ್ನು ಮುಂದೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಬೃಹತ್ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಂಸ್ಥೆಯಾಗಲಿದ್ದು, ಅದಕ್ಕೆ ಕಾರ್ಯಾಚರಣೆಯ ಸ್ವಾತಂತ್ರ್ಯ ನೀಡಲು ನಿಗಮವನ್ನಾಗಿ ಪರಿವರ್ತಿಸಲಾಗುವುದು.

91. ಹಾಲಿ ಇರುವ ಕೈಗಾರಿಕೆಗಳಿಗೆ ಉತ್ತೇಜನ ನೀಡಲು 10 ಕೋಟಿ ರೂ.ಗಳ ಆರಂಭಿಕ ನಿಧಿಯೊಂದಿಗೆ ತಂತ್ರಜ್ಞಾನ ಉನ್ನತೀಕರಣ ಮತ್ತು ಆಧುನೀಕರಣ ನಿಧಿಯೊಂದನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

92. ಸಾರ್ವಜನಿಕ ಉದ್ದಿಮೆಗಳ ಪುನರ್‌ರಚನೆಗೆ ರಾಜ್ಯವು ಒಂದು ನೀತಿ ಪತ್ರವನ್ನು ಹೊರತಂದಿದೆ. ಸಾರ್ವಜನಿಕ ರಂಗದ ಉದ್ದಿಮೆಗಳ ಪುನರ್‌ರಚನೆಗೆ ಆಯೋಗವೊಂದನ್ನು ರಚಿಸಲಾಗಿದೆ. ಇದು ಸಾರ್ವಜನಿಕ ರಂಗದ ಉದ್ದಿಮೆಗಳ ಪುನರ್‌ರಚನೆಗೆ ಅಗತ್ಯವಾದ ಶಿಫಾರಸ್ಸುಗಳನ್ನು ನೀಡಲಿದೆ. ಸ್ವಯಂ ನಿವೃತ್ತಿ ಯೋಜನೆಗೆ ನಾನು 100 ಕೋಟಿ ರೂ.ಗಳನ್ನು ನೀಡಿದ್ದೇನೆ. 2002 ನೇ ಮಾರ್ಚ್ ವೇಳೆಗೆ ನಷ್ಟಪೀಡಿತ 10 ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲಾಗುವುದು ಇಲ್ಲವೇ ಖಾಸಗೀಕರಣ ಮಾಡಲಾಗುವುದು. ಆಯೋಗವು ಸಲ್ಲಿಸಿರುವ ವರದಿಯನ್ನು ಮಾನ್ಯ ಸದಸ್ಯರೊಂದಿಗೆ ನಾನು ಹಂಚಿಕೊಳ್ಳುತ್ತೇನೆ

93. ಸಣ್ಣ ಪ್ರಮಾಣದ ಕೈಗಾರಿಕಾ ರಂಗದಲ್ಲಿರುವ ಅಸ್ವಸ್ಥತೆಯ ಪ್ರಮಾಣವನ್ನು ಪತ್ತೆಹಚ್ಚಲು ಆ ಕ್ಷೇತ್ರವನ್ನು ವ್ಯಾಪಕವಾಗಿ ಸಮೀಕ್ಷೆ ಮಾಡಲಾಗುವುದು. ಎಲ್ಲಾ ಅರ್ಹ ಕೈಗಾರಿಕೆಗಳಿಗೆ ಐಡಿಬಿಐ ಮಾರ್ಗಸೂಚಿಗನುಸಾರವಾಗಿ ಜಾರಿಯಲ್ಲಿರುವ ಪುನರ್ವಸತಿ ಕ್ರಮಗಳನ್ನು ವಿಸ್ತರಿಸಲಾಗುವುದು.

94. ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಕರ್ನಾಟಕದ ಪ್ರಧಾನ ಸ್ಥಾನ ಮುಂದುವರಿಯಲಿದೆ. ಈ ಸ್ಥಾನವನ್ನು ಉಳಿಸಿಕೊಳ್ಳಲು ನಾವು 2000-01ರಲ್ಲಿ ಹಲವಾರು ಕ್ರಮಗಳನ್ನು

ತೆಗೆದುಕೊಂಡಿದ್ದೇವೆ. ಇದನ್ನು ಮತ್ತಷ್ಟು ಸದೃಢಗೊಳಿಸಿಕೊಂಡು ನಾವೀಗ ಎಲೆಕ್ಟ್ರಾನಿಕ್ ಆಡಳಿತ ಮತ್ತು ಜೈವಿಕ ಮಾಹಿತಿ ತಂತ್ರಜ್ಞಾನದತ್ತ ಮುನ್ನಡೆಯುತ್ತೇವೆ. ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ) ಹುಬ್ಬಳ್ಳಿಯಲ್ಲಿ ತನ್ನ ಶಾಖೆಯನ್ನು 2001-02ರಲ್ಲಿ ಆರಂಭಿಸಲಿದೆ. ಇದರ ಜೊತೆಗೆ ಬೆಳಗಾಂ, ಶಿವಮೊಗ್ಗ, ಗುಲ್ಬರ್ಗ, ಬಳ್ಳಾರಿ ಮತ್ತು ಗದಗ ಜಿಲ್ಲೆಗಳಲ್ಲಿ ಪೋಷಣಾ ಕೇಂದ್ರಗಳು ಕಾರ್ಯಾರಂಭ ಮಾಡಲಿವೆ. ಮಾಹಿತಿ ತಂತ್ರಜ್ಞಾನ ಕಂಪನಿಗಳಿಗೆ ಅಗತ್ಯವಾದ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗಳನ್ನು ನಾವು ಈಗಾಗಲೇ ಐ.ಟಿ. ಕಾರಿಡಾರ್ ಯೋಜನೆಯಡಿ ಕೈಗೆತ್ತಿಕೊಂಡಿದ್ದೇವೆ. ನಾವು ಇತ್ತೀಚೆಗೆ ಬಿಡುಗಡೆ ಮಾಡಿದ ಸಹಸ್ರಮಾನದ ಜೈವಿಕ ತಂತ್ರಜ್ಞಾನ ನೀತಿ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಕರ್ನಾಟಕ ಕೃಷಿ ಕ್ಷೇತ್ರದಲ್ಲಿ ನಿತ್ಯಹರಿದ್ವರ್ಣ ಕ್ರಾಂತಿಯನ್ನು ತರಲು ಜೈವಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು ಈ ನೀತಿಯ ಮೂಲ ಉದ್ದೇಶವಾಗಿದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯದಲ್ಲಿ ನಮ್ಮ ತತ್ವವು 'ಜಾಗತಿಕವಾಗಿ ಚಿಂತಿಸಿ, ಸ್ಥಳೀಯವಾಗಿ ಕಾರ್ಯಶೀಲರಾಗಿ' ಎನ್ನುವುದಾಗಿದೆ.

ಜವಳಿ

95. ನೇಕಾರರ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ದೀನ ದಯಾಳು ಹ್ಯಾಂಡ್‌ಲೂಂ ಪ್ರಮೋಷನ್ ಯೋಜನೆಯನ್ನು ಪ್ರಕಟಿಸಿದೆ. ಈ ಯೋಜನೆಗೆ ನಾವು ರಾಜ್ಯದ ಪಾಲನ್ನು ಮ್ಯಾಚಿಂಗ್‌ಗ್ರಾಂಟ್ ಆಗಿ ನೀಡುತ್ತೇವೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಸಹಕಾರ ಸಂಘಗಳಿಂದ ಬಟ್ಟೆಗಳನ್ನು ಖರೀದಿಸುತ್ತಾ; ಸಹಾಯಧನಯುಕ್ತ ಸೀರೆ, ಧೋತಿ ಹಾಗೂ ಶಾಲಾ ಸಮವಸ್ತ್ರ ಸರಬರಾಜಿನಲ್ಲಿ ತನ್ನ ಪ್ರಧಾನ ಪಾತ್ರವನ್ನು ಮುಂದುವರೆಸುತ್ತಿದೆ. ಕೇಂದ್ರದ ನೆರವಿನೊಡನೆ ದೊಡ್ಡಬಳ್ಳಾಪುರ ಹಾಗೂ ಬಳ್ಳಾರಿಯಲ್ಲಿ ಸಿದ್ಧ ಉಡುಪುಗಳ ಪಾರ್ಕ್‌ಗಳನ್ನು ತೆರೆಯುವ ಕಾರ್ಯವನ್ನು ಚುರುಕುಗೊಳಿಸುತ್ತದೆ.

ರೇಷ್ಮೆ

96. ಕರ್ನಾಟಕವು ಭಾರತದ ರೇಷ್ಮೆ ರಾಜ್ಯ. ಕಳೆದ ವರ್ಷ 8121 ಮೆಟ್ರಿಕ್‌ಟನ್ ರೇಷ್ಮೆಯನ್ನು ಉತ್ಪಾದಿಸಿದ್ದು ಇದು ದೇಶದ ಒಟ್ಟು ಉತ್ಪನ್ನದಲ್ಲಿ ಶೇ. 58 ರಷ್ಟಾಗಿದೆ. ಹಾಲಿ 1.20 ಲಕ್ಷ ಹೆಕ್ಟೇರುಗಳಲ್ಲಿ ಹಿಪ್ಪುನೇರಳೆ ವ್ಯವಸಾಯವಿದೆ. ರೇಷ್ಮೆ ಕೃಷಿಯು 15.60 ಲಕ್ಷ ರೈತರು, ರೀಲರು ಮತ್ತು ಇತರರಿಗೆ ಉದ್ಯೋಗ ಒದಗಿಸುತ್ತಿದೆ. 'ರೇಷ್ಮೆ ಸಂಪತ್ತು' ಯೋಜನೆಗೆ ವಿದೇಶೀ ನೆರವನ್ನು ಕೋರಲಾಗುತ್ತದೆ. ಕೇಂದ್ರ ರೇಷ್ಮೆ ಮಂಡಳಿಯೊಡನೆ ಕ್ಯಾಟಲಿಟಿಕ್ ಡೆವೆಲಪ್‌ಮೆಂಟ್ ಪ್ರೋಗ್ರಾಂ ಹಾಗೂ ಇತರೆ ಜಂಟಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬೈವೋಲ್ಟಿನ್ ತಳಿಗಳನ್ನು ಹೆಚ್ಚಿಸುವ ತಂತ್ರಜ್ಞಾನಗಳಿಗೆ ನಾವು ಉತ್ತೇಜನ ನೀಡುತ್ತಿದ್ದೇವೆ.

ಸಕ್ಕರೆ

97. ರಾಜ್ಯದ ಸಕ್ಕರೆ ಕಾರ್ಖಾನೆಗಳ ಗೋದಾಮುಗಳಲ್ಲಿ ಅಪಾರ ಪ್ರಮಾಣದ ಸಕ್ಕರೆ ಸಂಗ್ರಹಣೆ ಉಳಿದಿದೆ. ಈ ಸಕ್ಕರೆಯ ಶೀಘ್ರ ಮಾರಾಟಕ್ಕೆ ಅನುಮತಿ ನೀಡಬೇಕೆಂದು ನಾನು ಭಾರತ

ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದರಿಂದ ಸಕ್ಕರೆ ಕಾರ್ಖಾನೆಗಳು ತಮ್ಮ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಿಕೊಂಡು ಕಬ್ಬು ಬೆಳೆಗಾರರ ಬಾಕಿಯನ್ನು ತೀರಿಸಲು ನೆರವಾಗುತ್ತದೆ. ಸಕ್ಕರೆ ಉದ್ಯಮವನ್ನು ಸಮಂಜಸವಲ್ಲದ ಸ್ಪರ್ಧೆಯಿಂದ ಉಳಿಸಲು ಸಕ್ಕರೆ ಮೇಲಿನ ಆಮದು ಶುಲ್ಕವನ್ನು ಹೆಚ್ಚಿಸಬೇಕಾಗಿದೆ. ಸಕ್ಕರೆ ಉದ್ಯಮವನ್ನು ಸಮಗ್ರವಾಗಿ ವೀಕ್ಷಿಸಿ ಉದ್ಯಮವನ್ನು ಉಳಿಸುವತ್ತ ಗಮನಹರಿಸಬೇಕೆಂದು ನಾನು ಭಾರತ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

98. ಕರ್ನಾಟಕ ಸಕ್ಕರೆ ಸಂಸ್ಥೆಯನ್ನು ಬೆಳಗಾವಿಯಲ್ಲಿ ಸ್ಥಾಪಿಸಲಾಗಿದೆ ಮತ್ತು ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರಿಸಲಾಗಿದೆ.

99. ರಾಜ್ಯದ ಸಕ್ಕರೆ ಉದ್ಯಮವು ಬಿಕ್ಕಟ್ಟಿನ ದಿನಗಳಲ್ಲಿ ಸಾಗುತ್ತಿದ್ದು ಕಬ್ಬು ಬೆಳೆಗಾರರಿಗೆ ಸಕಾಲದಲ್ಲಿ ಹಣಪಾವತಿ ಮಾಡಲು ಅಡ್ಡಿಯುಂಟಾಗಿದೆ. ಸಕ್ಕರೆ ಉದ್ಯಮಕ್ಕೆ ಪರಿಹಾರವನ್ನು ಒದಗಿಸಲು ನಾನು ಕಬ್ಬು ಖರೀದಿ ಮೇಲಿನ ತೆರಿಗೆಯನ್ನು ಪ್ರತಿ ಟನ್‌ಗೆ 10 ರೂ.ಗಳಷ್ಟು ಕಡಿತ ಮಾಡುತ್ತಿದ್ದೇನೆ. ಸಕ್ಕರೆ ಮೇಲಿನ ಪ್ರವೇಶ ತೆರಿಗೆಯನ್ನು ಶೇ. 2 ರಿಂದ ಶೇ. 1ಕ್ಕೆ ಇಳಿಸುತ್ತಿದ್ದೇನೆ. ಕಬ್ಬಿನ ಮೇಲೆ ವಿಧಿಸುತ್ತಿದ್ದ ರಸ್ತೆ ತೆರಿಗೆಯನ್ನು ಸಹ ಪ್ರತಿ ಟನ್‌ಗೆ 10 ರೂ.ಗಳಿಂದ 5 ರೂ.ಗಳಿಗೆ ಇಳಿಸಲಾಗುತ್ತಿದೆ. ಇದರಿಂದ ರೈತರಿಗೆ ಅಪಾರ ಅನುಕೂಲವಾಗಲಿದೆ.

ಕಾರ್ಮಿಕ

100. ಮುಕ್ತ ಆರ್ಥಿಕ ನೀತಿಯು ಕೈಗಾರಿಕಾ ಕ್ಷೇತ್ರದಲ್ಲಿ ಮಾರ್ಪಾಡು ತಂದಿದ್ದು ಆ ಮೂಲಕ ಕಾರ್ಮಿಕ ವಲಯದಲ್ಲೂ ಪರಿವರ್ತನೆಗಳಾಗಿವೆ. ಆದುದರಿಂದ ಬದಲಾಗುತ್ತಿರುವ ನೀತಿಗಳ ಬಗ್ಗೆ ಕಾರ್ಮಿಕರಲ್ಲಿ ತಿಳಿವಳಿಕೆ ಮೂಡಿಸಿ ಬದಲಾವಣೆಗೆ ಅವರು ಹೊಂದಿಕೊಳ್ಳುವ ಅಗತ್ಯದ ಬಗ್ಗೆ ಅರಿವು ಮೂಡಿಸಬೇಕು. ಈ ಪರಿವರ್ತನೆಗಳನ್ನು ಸುಲಲಿತಗೊಳಿಸಲು ಅಗತ್ಯಕ್ಕೆ ತಕ್ಕಂತೆ ಸಲಹಾ ಸೇವೆಗಳನ್ನು ಯೋಜಿಸಲಾಗುವುದು. ರಾಜ್ಯದ ಎಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಬಲಗೊಳಿಸಲಾಗುವುದು. ದುರ್ಬಲ ಹಾಗೂ ಅಲ್ಪಸಂಖ್ಯಾತರ ಯುವ ಸಮುದಾಯವನ್ನು ಆಕರ್ಷಿಸುವ ಉದ್ದೇಶದಿಂದ ನಾಲ್ಕು ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಸಮಾಜದ ದುರ್ಬಲ ವರ್ಗಗಳನ್ನೇ ಗುರಿಯಾಗಿಸಿಕೊಂಡು 16 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 22 ಹೊಸ ಕೋರ್ಸ್‌ಗಳನ್ನು ಆರಂಭಿಸಲಾಗುವುದು.

ಆಹಾರ ಮತ್ತು ನಾಗರಿಕ ಸರಬರಾಜು

101. ಬಡವರು ಮತ್ತು ದುರ್ಬಲರಿಗೆ ಆಹಾರ ಭದ್ರತೆಯನ್ನು ಒದಗಿಸುವುದಕ್ಕೆ ನನ್ನ ಸರ್ಕಾರ ಬದ್ಧವಾಗಿದೆ. 2001-02ನೇ ಸಾಲಿಗೆ ಆಹಾರ ಸಹಾಯಧನವಾಗಿ 300 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿಶೇಷ ಹಳದಿ ಪಡಿತರ ಚೀಟಿಯನ್ನು ನೀಡಲು ನನ್ನ ಸರ್ಕಾರ ಒಪ್ಪಿದೆ. ಈ ಹಳದಿ ಪಡಿತರ ಚೀಟಿದಾರರಿಗೆ ಅಕ್ಕಿಯನ್ನು ಕೆ.ಜಿ.ಗೆ 3.50 ರೂ. ಹಾಗೂ ಗೋಧಿಯನ್ನು 2.75 ರೂ. ದರದಲ್ಲಿ ಸರಬರಾಜು

ಮಾಡಲಾಗುವುದು. ಇದಕ್ಕೆ ಅಗತ್ಯವಾದ ಹೆಚ್ಚುವರಿ ಸಹಾಯಧನವನ್ನು ಸರ್ಕಾರ ಭರಿಸಲಿದೆ. 1997-98ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಡೆಸಿದ ಆರ್ಥಿಕ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಒಟ್ಟು 20.35 ಲಕ್ಷ ಕುಟುಂಬಗಳು ಬಡತನ ರೇಖೆಗಿಂತ ಕೆಳಮಟ್ಟದಲ್ಲಿವೆ. ಈ ಕುಟುಂಬಗಳಿಗೆ ಹಳದಿ ಕಾರ್ಡು ವಿತರಿಸಲು ಕ್ರಮ ಆರಂಭಿಸಲಾಗಿದೆ. ಮೊದಲ ಹಂತದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಳದಿ ಕಾರ್ಡ್ ವಿತರಣೆ ಕಾರ್ಯ ಮುಗಿದಿದೆ. 8.22 ಲಕ್ಷ ಅನರ್ಹ ಹಸಿರು ಪಡಿತರ ಚೀಟಿದಾರರನ್ನು ತೆಗೆದುಹಾಕುವ ಆದೇಶವನ್ನು ನಾವು ಸಂಪೂರ್ಣವಾಗಿ ಜಾರಿಗೊಳಿಸುತ್ತೇವೆ. ಈ ವರ್ಷ 10 ಲಕ್ಷ ಅನರ್ಹ ಹಸಿರು ಪಡಿತರ ಚೀಟಿದಾರರನ್ನು ತೆಗೆದುಹಾಕಲಾಗುವುದು.

102. ನಾಗರೀಕ ಸರಬರಾಜು ವ್ಯವಸ್ಥೆಯನ್ನು ಹೆಚ್ಚು ಅರ್ಥಪೂರ್ಣವಾಗಿಸಲು ಹಾಗೂ ಅರ್ಹರನ್ನು ತಲುಪಲು ನನ್ನ ಸರ್ಕಾರವು ಸಾರ್ವಜನಿಕ ವಿತರಣಾ ಯೋಜನೆ 1992ರ ಕಾಯ್ದೆಗೆ ತಿದ್ದುಪಡಿ ತರಲು ಉದ್ದೇಶಿಸಿದೆ.

103. ಕಳೆದ ವರ್ಷ ನಾನು ಆರಂಭಿಸುವ 'ಜಾಮ್‌ನ್ಯಾಪ್' ಎಂಬ ಹೊಸ ಯೋಜನೆಯಡಿಯಲ್ಲಿ ಸಾಮಾನ್ಯ ಜನರ ದಿನವಹಿ ಅಗತ್ಯದ ಅನೇಕ ವಸ್ತುಗಳನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ 'ಕಾಮ್‌ನ್ಯಾಪ್' ಕೇಂದ್ರಗಳ ಮೂಲಕ ಮಾರಲಾಗುತ್ತಿದೆ. ಮುಂದಿನ ವರ್ಷಗಳಲ್ಲಿ ರಾಜ್ಯಾದ್ಯಂತ 1500 ಕಾಮ್‌ನ್ಯಾಪ್ ಕೇಂದ್ರಗಳನ್ನು ತೆರೆಯಲು ಯೋಜಿಸಲಾಗಿದೆ.

ರಸ್ತೆಗಳು

104. ಎಲ್ಲಾ ಗ್ರಾಮಗಳಿಗೂ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಹಾಗೂ ರೈತರ ಹೊಲಗದ್ದೆಗಳಿಗೆ ಸಂಪರ್ಕ ರಸ್ತೆ ನಿರ್ಮಿಸಲು ನನ್ನ ಸರ್ಕಾರ ಹೆಚ್ಚಿನ ಮಹತ್ವ ನೀಡಿದೆ. ಅದಕ್ಕಾಗಿ "ನಮ್ಮ ಹೊಲ, ನಮ್ಮ ರಸ್ತೆ" ಎಂಬ ಹೊಸ ಯೋಜನೆಯೊಂದನ್ನು ಆರಂಭಿಸುತ್ತಿದ್ದೇನೆ. ರಾಜ್ಯದ ಅಭಿವೃದ್ಧಿ ಮೂಲಕೇಂದ್ರಗಳಾದ ಹೊಲಗಳಿಗೆ ಹೋಗುವ ರಸ್ತೆಗಳ ಸುಧಾರಣೆಗೆ ಇದು ನಾಂದಿ ಹಾಡುತ್ತದೆ. ಈ ಯೋಜನೆಗೆ ಶೇ. 60 ರಷ್ಟು ನಿಧಿಯನ್ನು ಸರ್ಕಾರ ಒದಗಿಸುತ್ತದೆ. ಶೇ. 40 ರಷ್ಟನ್ನು ರೈತರು ಒದಗಿಸಬೇಕು.

105. ರಸ್ತೆ ಕಾಮಗಾರಿಗಳಿಗಾಗಿ ರಚಿಸಿದ ಕಾರ್ಯಪಡೆಯು ತನ್ನ ಮಧ್ಯಂತರ ವರದಿ ಸಲ್ಲಿಸಿದೆ. ಕರ್ನಾಟಕ ರಾಜ್ಯ ಹೆದ್ದಾರಿ ಪ್ರಾಧಿಕಾರದ ರಚನೆ ಲೋಕೋಪಯೋಗಿ ಇಲಾಖೆಯ ಕಟ್ಟಡಗಳು ಹಾಗೂ ರಸ್ತೆಶಾಖೆಯನ್ನು ಪ್ರತ್ಯೇಕಿಸುವುದು ಹಾಗೂ ಹೆದ್ದಾರಿ ತಾಂತ್ರಿಕತೆಯನ್ನು ನೋಡಿಕೊಳ್ಳಲು ಸಂಸ್ಥೆಯೊಂದರ ರಚನೆ ಮುಂತಾದವುಗಳನ್ನು ಅದು ಶಿಫಾರಸ್ಸು ಮಾಡಿದೆ. ಈ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗಿದೆ.

106. ರಸ್ತೆ ವಲಯಕ್ಕೆ ನೀಡಲಾಗುವ ಹಣದ ಮೊತ್ತವನ್ನು ಗಮನಾರ್ಹವಾಗಿ ಏರಿಸಲಾಗಿದೆ. 2000-01 ನೇ ಸಾಲಿನಲ್ಲಿ ಈ ವಲಯಕ್ಕೆ ಮೀಸಲಿರಿಸಿದ್ದ 597 ಕೋಟಿ ರೂ.ಗಳನ್ನು 2001-02 ನೇ ಸಾಲಿನಲ್ಲಿ 790 ಕೋಟಿ ರೂ.ಗಳಿಗೆ ಏರಿಸಲಾಗಿದೆ. ಕೇಂದ್ರ ಸರ್ಕಾರವು ಬಿಜಾಪುರ-ಹುಬ್ಬಳ್ಳಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ-218 ಎಂದು ಘೋಷಿಸಿದೆ. ಇದರಿಂದ ರಾಜ್ಯದಲ್ಲಿದ್ದ

ಒಟ್ಟು ರಾಷ್ಟ್ರೀಯ ಹೆದ್ದಾರಿಯ ಉದ್ದ 3537 ಕಿ.ಮೀ.ನಿಂದ 3729 ಕಿ.ಮೀ.ಗೆ ಏರಿದೆ. ರಾಜ್ಯದ 17 ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸಲು ಕೇಂದ್ರ ಸರ್ಕಾರವನ್ನು ನಾನು ಕೋರುತ್ತೇನೆ. ಕರ್ನಾಟಕದಲ್ಲಿರುವ ರಾಷ್ಟ್ರೀಯ ಹೆದ್ದಾರಿ-4 ಮತ್ತು ರಾಷ್ಟ್ರೀಯ ಹೆದ್ದಾರಿ-7 ರಲ್ಲಿರುವ ಒಟ್ಟು 623 ಕಿ.ಮೀ.ಗಳ ರಸ್ತೆಯನ್ನು "ಸುವರ್ಣ ಚತುರ್ಭುಜ" ದಲ್ಲಿ (ಗೋಲ್ಡನ್ ಕ್ವಾಡ್ರಿಲ್ಯಾಟರಲ್) ಸೇರಿಸಿರುವುದು ಗೌರವಾನ್ವಿತ ಸದಸ್ಯರಿಗೆ ಸಂತಸತರಬಹುದು ಜಮ್ಮುವಿನಿಂದ ಕನ್ಯಾಕುಮಾರಿಯವರೆಗಿನ ಉತ್ತರ ದಕ್ಷಿಣ ಕಾರಿಡಾರ್ ಮಾರ್ಗದಲ್ಲಿ ಬೆಂಗಳೂರಿನಿಂದ ಬಾಗೇಪಲ್ಲಿಯುವರೆಗಿನ 105 ಕಿ.ಮೀ. ರಸ್ತೆಯೂ ಕೂಡ ಸೇರಿದೆ.

107. ರಾಜ್ಯದಲ್ಲಿರುವ ಒಟ್ಟು 9829 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ಹುಡ್ಕೋ ಸಾಲ ನೆರವಿನಿಂದ 250 ಕೋಟಿ ರೂ. ವೆಚ್ಚದಲ್ಲಿ ಮೂರು ವರ್ಷಗಳ ಕಾಲ ನಿರ್ವಹಣೆ ಮಾಡಲು ಪ್ರಸ್ತಾಪಿಸಲಾಗಿದೆ. ಹುಡ್ಕೋ ನೆರವಿನಿಂದ 153 ಸೇತುವೆಗಳ ನಿರ್ಮಾಣ ಮತ್ತು 4 ರಾಜ್ಯ ಹೆದ್ದಾರಿಗಳ ಸುಧಾರಣೆಯ ಕಾರ್ಯಕ್ರಮವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಈ ವರ್ಷ ಪೂರ್ಣಗೊಳ್ಳಲಿದೆ.

108. ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ ಯೋಜನೆಯಡಿ 2000 ಕೋಟಿ ರೂ. ವೆಚ್ಚದಲ್ಲಿ 2269 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು. ಜೊತೆಗೆ 21 ಸೇತುವೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು. ಕಾಮಗಾರಿಯು 2001 ರ ಜೂನ್ ತಿಂಗಳಲ್ಲಿ ಆರಂಭವಾಗಲಿದೆ.

109. ನಬಾರ್ಡ್ ನೆರವಿನಿಂದ ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ 2001-02 ನೇ ಸಾಲಿಗೆ 146 ಕೋಟಿ ರೂ.ಗಳನ್ನು ನೀಡಲಾಗಿದೆ. ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಆರಂಭಿಸಿದೆ. ಈ ಯೋಜನೆಯಡಿ ಕರ್ನಾಟಕಕ್ಕೆ 2000 ಕಿ.ಮೀ.ಗಳ ಗ್ರಾಮೀಣ ರಸ್ತೆ ಅಭಿವೃದ್ಧಿಗೆ 96 ಕೋಟಿ ರೂ.ಗಳು ದೊರೆಯಲಿದೆ. ಗ್ರಾಮೀಣ ರಸ್ತೆಗಳ ನಿರ್ವಹಣೆಗೆ ಯೋಜನೇತರ ಬಾಬಿನಲ್ಲಿ ನೀಡಲಾಗುವ ಅನುದಾನವನ್ನು 61 ಕೋಟಿ ರೂ.ಗಳಿಂದ 80 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಎಲ್ಲಾ ಪ್ರಯತ್ನಗಳು ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳನ್ನು ಗಣನೀಯವಾಗಿ ವೃದ್ಧಿಸುತ್ತದೆ.

ಭಾರಿ ಮತ್ತು ಮಧ್ಯಮ ನೀರಾವರಿ

110. ನಾವು 2001-02 ನೇ ವರ್ಷದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ 1,40,000 ಹೆಕ್ಟೇರ್ ಮತ್ತು ಕರ್ನಾಟಕ ನೀರಾವರಿ ನಿಗಮದಡಿ 16,100 ಹೆಕ್ಟೇರ್ ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸಲಿದ್ದೇವೆ. 2000-01 ನೇ ಸಾಲಿನಲ್ಲಿ ಭದ್ರಾ, ತುಂಗಭದ್ರಾ ಎಡದಂಡೆ ಕಾಲುವೆ, ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆ, ತಾರಕ, ಮುಲ್ಲಾಮರಿ ಕೆಳದಂಡೆ ಮತ್ತು ಬೆಣ್ಣೆತೊರೆ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಸ್ತಾಪಿಸಿದ್ದರೂ ವಿಳಂಬವಾಗಿದೆ. ಈ ಯೋಜನೆಗಳನ್ನು 2001 ನೇ ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು. ಕಳಸ ನಾಲಾ ಕವಲು ಯೋಜನೆ, ಗಂಡೋರಿ ನಾಲಾ ಕವಲು ಯೋಜನೆ, ಹಂದಿಗೊಳ ಏತ ನೀರಾವರಿ ಯೋಜನೆಗಳಿಗೆ

ಮಂಜೂರಾತಿ ನೀಡಲಾಗಿದೆ. ಸಿಂಗಟ್ಲೂರು ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಹೆಚ್ಚುವರಿ 40,000 ಎಕರೆಗಳಿಗೆ ನೀರು ಉಣಿಸುವಲ್ಲಿ ಪರಿಷ್ಕೃತ ಯೋಜನೆಗೆ ಮಂಜೂರಾತಿ ನೀಡಲಾಗಿದೆ.

111. ಕಾವೇರಿ ಕಣಿವೆ ಯೋಜನೆಯಡಿ 31 ಏತ ನೀರಾವರಿ ಯೋಜನೆಗಳು 2001-02 ರಲ್ಲಿ ಪೂರ್ಣಗೊಳ್ಳಲಿವೆ.

112. ರಾಜ್ಯದ 2001-02 ನೇ ಸಾಲಿನ ಯೋಜನೆಯಲ್ಲಿ ಶೇ 32 ರಷ್ಟನ್ನು ನೀರಾವರಿಗೆ ನೀಡಲಾಗಿದೆ. ಆದುದರಿಂದ ನೀರಾವರಿ ಯೋಜನೆಗಳಿಗೆ ಮಾರುಕಟ್ಟೆಯಿಂದ ತರುವ ಸಾಲಕ್ಕೆ ಹೆಚ್ಚು ಮರುಪಾವತಿ ಮಾಡುವ ಅಗತ್ಯವಿರುವುದರಿಂದ ಎಲ್ಲಾ ಯೋಜನೆಗಳು ನಿಗದಿತ ಸಮಯಕ್ಕೆ ಸರಿಯಾಗಿ ಪೂರ್ಣಗೊಂಡು ಸಮರ್ಥವಾಗಿ ಬಳಕೆಯಾಗಬೇಕು.

113. ಕ್ಷೇತ್ರ ಕಾಲುವೆಗಳ ನಿರ್ವಹಣೆಯನ್ನು ನೀರು ಬಳಕೆದಾರರ ಸಂಘಕ್ಕೆ ವಹಿಸಲಾಗುವುದು. ಈ ಸಂಘಗಳಿಗೆ ಸದಸ್ಯರಿಂದ ಬಳಕೆದಾರರ ಶುಲ್ಕ ಸಂಗ್ರಹಿಸಲು ಉತ್ತೇಜನ ನೀಡಲಾಗುತ್ತಿದೆ. ಹೀಗೆ ಸಂಗ್ರಹಿಸಿದ ಮೊತ್ತದಿಂದ ಕಾಲುವೆಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚದ ಸ್ವಲ್ಪ ಭಾಗವನ್ನಾದರೂ ಭರಿಸುವಂತೆ ಯೋಜಿಸಲಾಗಿದೆ. ನಾವು ಈಗಾಗಲೇ 864 ನೀರು ಬಳಕೆದಾರರ ಸಹಕಾರ ಸಂಘಗಳನ್ನು ನೋಂದಾಯಿಸಿದ್ದೇವೆ. ಮುಂದಿನ ವರ್ಷದಲ್ಲಿ 1650 ಸಂಘಗಳನ್ನು ನೋಂದಾಯಿಸಲಾಗುವುದು.

114. ನಮ್ಮ ರಾಜ್ಯಾದ್ಯಂತ ಕೆರೆಗಳು ಪುರಾತನ ಕಾಲದಿಂದ ಅಸ್ತಿತ್ವದಲ್ಲಿವೆ. ಇವುಗಳನ್ನು ಪುನರ್ ನಿರ್ಮಿಸಿ ಪುನಶ್ಚೇತನಗೊಳಿಸುವ ಮಹತ್ವಾಕಾಂಕ್ಷೆಯ "ಜಲ ಸಂವರ್ಧನಾ ಯೋಜನೆ" ಯನ್ನು ಕಳೆದ ವರ್ಷ ನಾನು ಜಾರಿಗೊಳಿಸಿದ್ದನ್ನು ಗೌರವಾನ್ವಿತ ಸದಸ್ಯರು ನೆನಪು ಮಾಡಿಕೊಳ್ಳಬಹುದು. ಜಲಸಂವರ್ಧನಾ ಯೋಜನಾ ಸಂಘವನ್ನು ನೋಂದಾಯಿಸಲಾಗಿದೆ. ಯೋಜನೆಯ ಅನುಷ್ಠಾನದಲ್ಲಿ ಈ ಸಂಘವು ಸಮನ್ವಯ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತದೆ. 5000 ಗ್ರಾಮ ಕೆರೆಗಳ ಪುನಶ್ಚೇತನವನ್ನು ಮುಂಬರುವ ಐದು ವರ್ಷಗಳಲ್ಲಿ ಒಟ್ಟಾರೆ 1000 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು. ಜಲಸಂವರ್ಧನಾ ಯೋಜನಾ ಸಂಘವು ಕೆಲವು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಡನೆ ಆಯ್ದ ತಾಲ್ಲೂಕುಗಳಲ್ಲಿ ಸಮುದಾಯ ಸಂಘಟನೆ ಆರಂಭಿಸಿದೆ.

ಮೂಲಭೂತ ಸೌಲಭ್ಯ

115. ಕರ್ನಾಟಕ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮವು (ಐಡಿಇಸಿಕೆ) ಈಗಾಗಲೇ ಕಾರ್ಯನಿರತವಾಗಿದ್ದು ಮೂಲಭೂತ ಸೌಲಭ್ಯ ಕರದ ಮೂಲಕ ಸಂಗ್ರಹಿಸುವ ಹಣವನ್ನು ಬಳಸಿಕೊಂಡು ರಾಜ್ಯಾದ್ಯಂತ ಅನೇಕ ಮೂಲಭೂತ ಸೌಲಭ್ಯ ಯೋಜನೆಯನ್ನು ಕೈಗೆತ್ತಿಕೊಳ್ಳಲಿದೆ. ರಾಜ್ಯ ಸರ್ಕಾರವು ರೈಲ್ವೆ ಇಲಾಖೆಯ ಜೊತೆ ಒಡಂಬಡಿಕೆಯೊಂದನ್ನು ಮಾಡಿಕೊಂಡು ಕರ್ನಾಟಕ ರೈಲು ಮೂಲಭೂತ ಸೌಲಭ್ಯ ಅಭಿವೃದ್ಧಿ ಕಂಪನಿಯನ್ನು

(ಕೆಆರ್ಐಡಿಇ) ರಚಿಸಿದೆ. ಈ ಸಂಸ್ಥೆಯು ಸೋಲಾಪುರ-ಗದಗ, ಹಾಸನ-ಮಂಗಳೂರು ರೈಲ್ವೇ ಲೈನುಗಳ ಗೇಜ್ ಪರಿವರ್ತನೆಯನ್ನು ಕೈಗೆತ್ತಿಕೊಳ್ಳಲಿದೆ. ಹುಬ್ಬಳ್ಳಿ-ಅಂಕೋಲ ವಲಯದಲ್ಲಿ ಹೊಸ ರೈಲು ಹಳಿಗಳನ್ನು ಹಾಕಲಾಗುವುದು ಹಾಗೂ ಗುಂತಕಲ್-ಹೊಸಪೇಟೆ ಜೋಡಿ ರೈಲು ಹಳಿಗಳನ್ನು ನಿರ್ಮಿಸಲಾಗುವುದು. ಆರಂಭದಲ್ಲಿ ನಾನು ಕರ್ನಾಟಕ ರೈಲು ಮೂಲಭೂತ ಸೌಲಭ್ಯ ಅಭಿವೃದ್ಧಿ ಕಂಪನಿಗೆ ರಾಜ್ಯ ಸರ್ಕಾರದಿಂದ 15 ಕೋಟಿ ರೂ.ಗಳ ಈಕ್ವಿಟಿ ಶೇರ್ ಒದಗಿಸುತ್ತಿದ್ದೇನೆ.

116. ಇತ್ತೀಚೆಗೆ ರಚನೆಗೊಂಡ ಜಂಟಿ ಸಹಯೋಗದ ಕಂಪನಿಯು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಈ ಜಂಟಿ ಉದ್ಯಮದಲ್ಲಿ ಪಾಲುದಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಜೂನ್ 30, 2001 ರೊಳಗೆ ಪೂರ್ಣಗೊಳಿಸಲಾಗುವುದು. ಖಾಸಗೀ ಜಮೀನುಗಳನ್ನು ಭೂಸ್ವಾಧೀನ ಕಾರ್ಯಕ್ಕಾಗಿ ಕೆ.ಎಸ್.ಐ.ಐ.ಡಿ.ಸಿ ಸಂಸ್ಥೆಯು ಈಗಾಗಲೇ 150 ಕೋಟಿ ರೂ.ಗಳನ್ನು ಸಾಲವಾಗಿ ಪಡೆದಿದೆ. ರಾಜ್ಯ ಸರ್ಕಾರದ ಆರಂಭಿಕ ಬೆಂಬಲವಾಗಿ ನಾನು 25 ಕೋಟಿ ರೂ.ಗಳನ್ನು ಮೀಸಲಿರಿಸಿದ್ದೇನೆ. ಈ ಯೋಜನೆಯು ಆರಂಭಗೊಂಡ ನಂತರ 30 ತಿಂಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಮೂಲಭೂತ ಸೌಲಭ್ಯ ಕರದ ಒಂದು ಭಾಗವನ್ನು ಬೆಂಗಳೂರು ಕ್ಷಿಪ್ರ ಸಾರಿಗೆ ಸಮೂಹ ಸಂಸ್ಥೆಗೆ (ಬಿಎಂಆರ್‌ಟಿಎಲ್) ವರ್ಗಾಯಿಸುತ್ತಿದ್ದೇವೆ.

117. ಸರ್ಕಾರ ತೆಗೆದುಕೊಂಡ ನಿರ್ಧಾರಕ್ಕೆ ಅನುಗುಣವಾಗಿ ತದಡಿ ಬಂದರು ಯೋಜನೆಯನ್ನು 755 ಕೋಟಿ ರೂ.ಗಳ ವೆಚ್ಚದಲ್ಲಿ ಖಾಸಗಿ ಹೂಡಿಕೆದಾರರಿಂದ ಅಭಿವೃದ್ಧಿ ಪಡಿಸಲಾಗುವುದು. ಈಗಾಗಲೇ ಆಯ್ಕೆ ಪ್ರಕ್ರಿಯೆ ಮುಗಿದಿದ್ದು ಸಮ್ಮತಿ ಪತ್ರವನ್ನು ನೀಡಲಾಗಿದೆ. ನಿರ್ಮಾಣ, ಮಾಲೀಕತ್ವ, ಕಾರ್ಯಾಚರಣೆ, ಪಾಲುಗಾರಿಕೆ ಮತ್ತು ವರ್ಗಾವಣೆ (ಬೂಸ್ಟ್) ಆಧಾರದ ಮೇಲೆ ಬಂದರನ್ನು ಅಭಿವೃದ್ಧಿ ಪಡಿಸಲಾಗುವುದು.

ನಗರಾಭಿವೃದ್ಧಿ

118. ಶರವೇಗದಲ್ಲಿ ಆಗುತ್ತಿರುವ ನಗರೀಕರಣವು ನಾಗರೀಕ ಸೌಲಭ್ಯಗಳಿಗೆ ಹೆಚ್ಚು ಬಂಡವಾಳ ಹೂಡಬೇಕಾದ ಸನ್ನಿವೇಶವನ್ನು ಸೃಷ್ಟಿಸಿದೆ. ಕಂದಾಯ ಸಂಗ್ರಹಣೆಯಲ್ಲಿ ಸ್ಥಗಿತ, ಮೂಲಭೂತ ನಾಗರೀಕ ಸೌಲಭ್ಯ ವಿಸ್ತರಣೆ ಕಾರ್ಯದಲ್ಲಿನ ವೆಚ್ಚ ಹೆಚ್ಚಳ ಹಾಗೂ ಸಾಂಸ್ಥಿಕ ವೆಚ್ಚದಲ್ಲಿ ಏರಿದೆ ಇವೆಲ್ಲವೂ ನಗರ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕ ದುಸ್ಥಿತಿಗೆ ದೂಡಿದೆ. ಈ ಸಂಸ್ಥೆಗಳು ಸರ್ಕಾರದ ಮೇಲಿನ ಅವಲಂಬನೆಯನ್ನು ತಪ್ಪಿಸಲು ಕರ ಹೇರುವ ತಮ್ಮ ಅಧಿಕಾರವನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳು ಮೂಲಭೂತ ನಾಗರೀಕ ಸೌಲಭ್ಯ ; ಹೊಣೆಗಾರಿಕೆ ಕಾರ್ಯಕ್ರಮ ಮತ್ತು ಅತ್ಯಗತ್ಯ ಬಂಡವಾಳ ವೆಚ್ಚಗಳನ್ನು ಜಾರಿಗೊಳಿಸುವ ಬಗ್ಗೆ ಹೆಚ್ಚು ಗಮನ ಹರಿಸಬೇಕು. ಸ್ವಯಂ ಆಸ್ತಿ ತೆರಿಗೆ ಘೋಷಣಾ ಪದ್ಧತಿ ಬೆಂಗಳೂರಿನಲ್ಲಿ ಯಶಸ್ವಿಯಾಗಿದೆ. ಇದನ್ನು ಇತರೇ ನಗರಪಾಲಿಕೆಗಳಿಗೂ ವಿಸ್ತರಿಸಿ ಅವುಗಳ ಸಂಪನ್ಮೂಲವನ್ನು ಸುಧಾರಿಸಿಕೊಳ್ಳಲು ನೆರವು ನೀಡಲಾಗುವುದು.

119. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಸುಧಾರಿಸಲು ನಾವು ಹುಡ್ಕೋ ಸಂಸ್ಥೆಯಿಂದ 100 ಕೋಟಿ ರೂ.ಗಳ ಸಾಲವನ್ನು ಪಡೆಯಲಿದ್ದೇವೆ. ನನ್ನ ಸರ್ಕಾರವು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನೊಡನೆ ಕರ್ನಾಟಕ ಕರಾವಳಿಯ ಹತ್ತು ಪಟ್ಟಣಗಳಲ್ಲಿ ಸಮಗ್ರ ಯೋಜನೆಯನ್ನು ಆರಂಭಿಸಿದೆ. ಈ ಸಮಗ್ರ ಯೋಜನೆಯಲ್ಲಿ ಸಾಂಸ್ಥಿಕ ಬೆಳವಣಿಗೆ, ನೀರು ಸರಬರಾಜು ಪುನಶ್ಚೇತನ ಮತ್ತು ವಿಸ್ತರಣೆ, ನಗರ ಪರಿಸರ ಸುಧಾರಣೆ, ರಸ್ತೆ ಮತ್ತು ಸೇತುವೆ ಸುಧಾರಣೆ ಮತ್ತು ಕರಾವಳಿ ಜೀವ ಪರಿಸರ ನಿರ್ವಹಣೆ ಇವೆಲ್ಲವೂ ಸೇರಿವೆ. ಈ ಯೋಜನೆಯ ಒಟ್ಟು ವೆಚ್ಚ 1100 ಕೋಟಿ ರೂ.ಗಳು.

120. ಬೆಂಗಳೂರು ಈಗ ವಿಶ್ವದ ಪ್ರಧಾನ ನಗರಗಳಲ್ಲಿ ಒಂದೆನಿಸಿದೆ. ಬೆಳೆಯುತ್ತಿರುವ ಈ ಮಹಾನಗರವನ್ನು ಕ್ರಮಬದ್ಧವಾಗಿ ಅಭಿವೃದ್ಧಿಪಡಿಸಲು ಮಹಾನಗರ ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯು ಬೆಂಗಳೂರಿನಲ್ಲಿ ಮೂಲಭೂತ ಸೌಲಭ್ಯಗಳು, ಆಧುನಿಕ ಸಾರಿಗೆ, ರಸ್ತೆ ಸುರಕ್ಷತೆ, ಕೊಳಚೆ ಪ್ರದೇಶಗಳ ಮೇಲ್ದರ್ಜೀಕರಣ, ಸಂಚಾರ ವಿರಳೀಕರಣ ಮತ್ತು ಪರಿಸರ ಸುಧಾರಣೆಗಳ ಮೂಲಕ ಬೆಂಗಳೂರು ನಾಗರೀಕ ಜೀವನ ಮಟ್ಟವನ್ನು ಸುಧಾರಿಸುವ ಉದ್ದೇಶ ಹೊಂದಿದೆ. ಬೆಂಗಳೂರು ಅಭಿವೃದ್ಧಿಯಲ್ಲಿ ಪಾಲುದಾರ ಸಂಸ್ಥೆಗಳು ಬೆಂಗಳೂರು ಕಾರ್ಯಪಡೆಯು ಮಾಡಿದ ಶಿಫಾರಸ್ಸುಗಳನ್ನು ಜಾರಿಗೊಳಿಸುತ್ತಿವೆ. ಅದು ಈಗಾಗಲೇ ಉತ್ತಮ ಫಲ ನೀಡಲಾರಂಭಿಸಿದೆ.

121. ಒಂದು ಮಹಾನಗರವಾಗಿ ಬೆಂಗಳೂರಿಗೆ ಬಂಡವಾಳ ಹೂಡಿಕೆ ಅಗತ್ಯವಿದೆ. ಆದರೆ ಮಹಾನಗರಪಾಲಿಕೆ ಸಾಕಷ್ಟು ಹಣ ಹೂಡಲು ವಿಫಲವಾಗಿದೆ. ಆದುದರಿಂದ ಮಹಾನಗರ ಪಾಲಿಕೆಗೆ ಸಂಪನ್ಮೂಲಗಳನ್ನು ವೃದ್ಧಿಸಲು ಅನುವಾಗುವಂತೆ "ರಾಜಧಾನಿ ಅಭಿವೃದ್ಧಿ ನಿಧಿ" ಸ್ಥಾಪಿಸಲಾಗುತ್ತಿದ್ದು ಆರಂಭದ ಕೊಡುಗೆಯಾಗಿ 50 ಕೋಟಿ ರೂ.ಗಳನ್ನು ನೀಡುತ್ತಿದ್ದೇನೆ. ಬೆಂಗಳೂರು ಮಹಾನಗರ ಪಾಲಿಕೆಯು ತನ್ನ ಆರ್ಥಿಕ ಮತ್ತು ಕಾರ್ಯಾಚರಣೆ ದಕ್ಷತೆಯನ್ನು ಸುಧಾರಿಸಿಕೊಳ್ಳಲು ಮುಂದಿನ ಮಾರ್ಗದರ್ಶನಕ್ಕಾಗಿ ರಾಜ್ಯ ಸರ್ಕಾರದ ಜೊತೆ ಏಪ್ರಿಲ್ 15, 2001 ರೊಳಗಾಗಿ ಒಡಂಬಡಿಕೆ ಮಾಡಿಕೊಳ್ಳುತ್ತಿದೆ. ಈ ಒಡಂಬಡಿಕೆಯು ರಾಷ್ಟ್ರದಲ್ಲಿಯೇ ಪ್ರಥಮವಾಗಿದ್ದು ನಾವು ಇದನ್ನು ಇತರೆ ಐದು ಮಹಾನಗರ ಪಾಲಿಕೆಗಳಿಗೆ ಸಹ ಮುಂಬರುವ ವರ್ಷಗಳಲ್ಲಿ ವಿಸ್ತರಿಸಲಿದ್ದೇವೆ. ರಸ್ತೆಗಳು, ಫ್ಲೈಓವರ್‌ಗಳು, ಸುರಂಗ ಮಾರ್ಗಗಳು ಮತ್ತು ಮೇಲ್‌ರಸ್ತೆಗಳಂತಹ ಮೂಲಭೂತ ಸೌಲಭ್ಯಗಳ ಯೋಜನೆಗಳನ್ನು ಬೆಂಗಳೂರು ನಗರದಲ್ಲಿ ಜಾರಿ ಮಾಡುವ ಕಾರ್ಯವನ್ನು ಕೆ.ಆರ್.ಡಿ.ಸಿ.ಎಲ್.ಗೆ ವಹಿಸಿಕೊಡಲಾಗುವುದು.

122. ಏಡ್ ಆಸ್ಟ್ರೇಲಿಯಾ ನೆರವಿನೊಡನೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಯೋಜನೆಯೊಂದನ್ನು ಸಿದ್ಧಪಡಿಸುತ್ತಿದೆ. ಈ ಯೋಜನೆಯಲ್ಲಿ ಬೆಂಗಳೂರು ಜನರಿಗೆ ನೀರು ಸರಬರಾಜು, ಒಳಚರಂಡಿ ಮತ್ತು ಪರಿಸರ ಸುಧಾರಿಸುವ ಬಗ್ಗೆ ಹೆಚ್ಚು ಗಮನಹರಿಸಲಾಗುವುದು. ಯೋಜನೆಯಡಿ ನೈರ್ಮಲ್ಯ ಸೇವೆಗಳಲ್ಲಿ ವಿಶೇಷವಾಗಿ ನಗರದ ಬಡ ಜನರು ಮತ್ತು ದುರ್ಬಲ ಸಮುದಾಯಗಳಿಗೆ ಹೆಚ್ಚು ಒತ್ತು ನೀಡಲಾಗುವುದು. ಕಾವೇರಿ 4ನೇ ಹಂತವನ್ನು ಮಾರ್ಚ್ 2002ರೊಳಗೆ ಸಂಪೂರ್ಣಗೊಳಿಸಲಾಗುವುದು. ಬೆಂಗಳೂರಿನಲ್ಲಿ

ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸಲು 2001-02ನೇ ವರ್ಷದಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ಸಹಾಯದಿಂದ 43 ಕೋಟಿ ರೂ.ಗಳ ಯೋಜನೆಯನ್ನು ಜಾರಿಗೊಳಿಸಲಾಗುವುದು.

123. ಕಂದಾಯ ಸಂಗ್ರಹಣೆಯ ಕೊರತೆ, ಅಕ್ರಮ ನೀರು ಸಂಪರ್ಕಗಳನ್ನು ಸಕ್ರಮಗೊಳಿಸುವುದು, ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ ಕೊರತೆಯನ್ನು ನೀಗಿಸಿಕೊಳ್ಳಲು ಬೆಂಗಳೂರಿನ ಎರಡು ಪ್ರಾಯೋಗಿಕ ಪ್ರದೇಶಗಳಲ್ಲಿ ಖಾಸಗಿ ಉದ್ದಿಮೆದಾರರ ಜೊತೆ ಪ್ರತ್ಯಾಯೋಜಿತ ನಿರ್ವಹಣಾ ಒಪ್ಪಂದ ಮಾಡಿಕೊಳ್ಳಲಾಗುವುದು. ಈ ಒಪ್ಪಂದದ ಅವಧಿ 5 ವರ್ಷಗಳಾಗಿದ್ದು ಪ್ರತಿ ಪ್ರಾಯೋಗಿಕ ವಲಯದಲ್ಲಿ ಒಂದು ಮಿಲಿಯನ್ ಜನಸಂಖ್ಯೆಯನ್ನು ವ್ಯಾಪಿಸಿಕೊಳ್ಳಲಿದೆ.

124. ಬೆಂಗಳೂರು ನಗರದ ಸಂಚಾರ ಸಮಸ್ಯೆಗಳ ಬಗ್ಗೆ ನಮಗೆ ಆತಂಕ ಇದೆ. ಸಂಚಾರ ವ್ಯವಸ್ಥೆಗೆ ಹೆಚ್ಚುವರಿ ಅನುದಾನ ನೀಡಲು ಬೆಂಗಳೂರು ನಗರದಲ್ಲಿ ಪೋಲಿಸರು ಸಂಗ್ರಹಿಸಿದ ದಂಡಶುಲ್ಕವನ್ನು ಸಂಪೂರ್ಣವಾಗಿ ಬೆಂಗಳೂರು ನಗರದ ಸಂಚಾರ ನಿರ್ವಹಣೆಗೆ ವರ್ಗಾಯಿಸಲಾಗುವುದು. ಇಂತಹ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

ಸಾರಿಗೆ

125. ಬೆಂಗಳೂರಿನ ಐದು ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ನೀಡಲಾಗುತ್ತಿರುವ ಪಿ.ವಿ.ಸಿ. ಕಾರ್ಡ್ ವಾಹನ ಚಾಲನ ಪರವಾನಗಿ ಸೌಲಭ್ಯದ ಯೋಜನೆಯನ್ನು ರಾಜ್ಯದ ಇತರೇ ಕಛೇರಿಗಳಿಗೂ ವಿಸ್ತರಿಸಲಾಗುವುದು. ನಾಗರೀಕರಿಗೆ ಸುಧಾರಿತ ಸಾರಿಗೆ ಸೇವೆಗಳನ್ನು ನೀಡಲು ಹಾಗೂ ಆಡಳಿತ ಕಾರ್ಯ ಸಾಮರ್ಥ್ಯವನ್ನು ವೃದ್ಧಿಸಲು ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ "ನಾಗರೀಕ ಸನ್ನದ್ದು" ಒಂದನ್ನು ಹಂಚಲಾಗಿದೆ. ವಾಯು ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ವಾಹನಗಳಿಂದಾಗುವ ಮಾಲಿನ್ಯವನ್ನು ನಿಯತವಾಗಿ ನಿಯಂತ್ರಿಸಲು ರಾಜ್ಯಾದ್ಯಂತ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುವುದು.

126. ರಾಜ್ಯದಲ್ಲಿ 2001-02ನೇ ಸಾಲಿನಲ್ಲಿ 180 ಕೋಟಿ ರೂ. ವೆಚ್ಚದಲ್ಲಿ 1945 ಹೊಸ ಬಸ್‌ಗಳನ್ನು ಸಾರಿಗೆ ಸಂಸ್ಥೆಗೆ ಸೇರಿಸಲಾಗುವುದು. ಕೆಲವು ವರ್ಷಗಳಿಂದ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನಿಂದ ಬಾಕಿಯಿರುವ ಮೋಟಾರು ವಾಹನ ತೆರಿಗೆಯನ್ನು ಪಾವತಿಸಿರುವುದಿಲ್ಲ. ಆರ್ಥಿಕ ಶಿಸ್ತನ್ನು ಜಾರಿಗೆ ತರಲು ರಾಜ್ಯ ಸಾರಿಗೆ ಸಂಸ್ಥೆಯು ಮೋಟಾರು ವಾಹನ ತೆರಿಗೆ ಬಾಕಿಯನ್ನು ಪಾವತಿಸಬೇಕಿದೆ. ಸರ್ಕಾರದ ನೀತಿಗಳಿಂದಾಗಿ ನೀಡಬೇಕಾದ ಸಹಾಯಧನ ಬಾಬ್ತನ್ನು ಆಯವ್ಯಯ ಸಂಪನ್ಮೂಲದಿಂದ ನೀಡಲಾಗುವುದು.

ಕಂದಾಯ

127. ಕಳೆದ ವರ್ಷ ಈ ಸದನಕ್ಕೆ ನಾನು ಭರವಸೆ ನೀಡಿದ್ದಂತೆ ಕಂಪ್ಯೂಟರೀಕೃತ ಆರ್.ಟಿ.ಸಿ.ಗಳನ್ನು ಈಗ ರಾಜ್ಯದಲ್ಲಿನ 40 ತಾಲ್ಲೂಕುಗಳಲ್ಲಿರುವ ಕಿಯೋಸ್ಕ್‌ಗಳಲ್ಲಿ ಒದಗಿಸಲಾಗುತ್ತಿದೆ. ಇನ್ನು ಕೆಲವೇ ತಿಂಗಳುಗಳಲ್ಲಿ ಉಳಿದ 125 ತಾಲ್ಲೂಕುಗಳಲ್ಲೂ ಸಹ ಈ

ಸೌಲಭ್ಯವನ್ನು ಒದಗಿಸಲಾಗುವುದು. ಇದು ರೈತರನ್ನು ಮತ್ತಷ್ಟು ಬಲಗೊಳಿಸುವ ನಮ್ಮ ಪ್ರಯತ್ನದ ಒಂದು ಭಾಗವಾಗಿದೆ. ಅವರಿಗೆ ಮತ್ತಷ್ಟು ಅನುಕೂಲ ಒದಗಿಸಲು ನಾವು ಸರ್ವೆ ಮತ್ತು ಭೂದಾಖಲೆಗಳ ಇಲಾಖೆಯ ಮೂಲಕ ನೂತನ ಯೋಜನೆಯನ್ನು ಜಾರಿಗೊಳಿಸಲಿದ್ದೇವೆ. ಇದರನ್ವಯ ಖಾಸಗಿ ಸರ್ವೇಯರ್‌ಗಳಿಗೆ ಸೂಕ್ತ ತರಬೇತಿ ನೀಡಿದ ನಂತರ ಸರ್ವೆ ಪರವಾನಗಿ ನೀಡಲಾಗುವುದು.

128. ರಾಜ್ಯದ ಕೆಲವು ಭಾಗಗಳಲ್ಲಿ ಸ್ಮಶಾನಕ್ಕಾಗಿ ಮೀಸಲಿಡಲು ಸರ್ಕಾರಿ ಭೂಮಿಯ ಕೊರತೆಯಿದೆ. ಆ ಸಮಸ್ಯೆ ನಿವಾರಿಸಲು ನಾನು 2001-02ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಮೂರು ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

129. ಬೆಂಗಳೂರು, ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ 12 ಉಪ ನೋಂದಣಾಧಿಕಾರಿ ಕಛೇರಿಗಳನ್ನು ಕಂಪ್ಯೂಟರೀಕರಿಸಲು ಉದ್ದೇಶಿಸಿದ್ದೇನೆ. ನೋಂದಣಿದಾರರ ಡಿಜಿಟಲ್ ಫೋಟೋಗ್ರಫಿ ಮತ್ತು ನೋಂದಣಿ ದಾಖಲೆಗಳ ಮೈಕ್ರೋಫಿಲಂನಂತಹ ಆಧುನಿಕ ಕ್ರಮಗಳನ್ನು ಹೆಚ್ಚುವರಿಯಾಗಿ ಕೈಗೊಳ್ಳಲಾಗುವುದು.

ಕನ್ನಡ ಮತ್ತು ಸಂಸ್ಕೃತಿ

130. ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ನಾವು ಎಷ್ಟು ಗೌರವಿಸಿ ಬೆಳೆಸುತ್ತೇವೆಯೋ ಅಷ್ಟರಮಟ್ಟಿಗೆ ನಾವು ಪ್ರಗತಿಯತ್ತ ದಾಪುಗಾಲು ಹಾಕುತ್ತೇವೆ. ರಾಜ್ಯ ಪತ್ರಾಗಾರ ಇಲಾಖೆಯು ಎಲ್ಲಾ ಐತಿಹಾಸಿಕ ದಾಖಲೆಗಳನ್ನು ಕಂಪ್ಯೂಟರೀಕರಿಸಲು ಅಗತ್ಯ ಕ್ರಮಗಳನ್ನು ಕೈಗೆತ್ತಿಕೊಳ್ಳಲಿದೆ. ಪುರಾತತ್ವ ಮತ್ತು ಸಂಗ್ರಹಾಲಯ ನಿರ್ದೇಶನಾಲಯವು ಬಿಜಾಪುರದಲ್ಲಿ ಒಂದು ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಿದೆ. ಚಾಮರಾಜೇಂದ್ರ ದೃಶ್ಯ ಮತ್ತು ಶ್ರವ್ಯ ಸಂಸ್ಥೆಯು ಶಿಲ್ಪಶಾಸ್ತ್ರ, ಚಿತ್ರಕಲೆ ಮತ್ತು ಗ್ರಾಫಿಕ್ಸ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಆರಂಭಿಸಲಿದೆ.

131. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಲಹೆ ಮಾಡಿದಂತೆ, ಒಂದರಿಂದ ಹತ್ತನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ವೃತ್ತಿ ಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ನಿರ್ದಿಷ್ಟ ಪ್ರಮಾಣದ ಸೀಟುಗಳನ್ನು ನೀಡಲು ಸರ್ಕಾರವು ನಿರ್ಧರಿಸಿದೆ. ಈಗಾಗಲೇ ಪ್ರವೇಶ ಪ್ರಕ್ರಿಯೆಗಳು ಆರಂಭವಾಗಿರುವುದರಿಂದ ಈ ಯೋಜನೆಯನ್ನು 2002-03 ನೇ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಲಾಗುವುದು.

ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನಸೇವೆ

132. ಮಾಹಿತಿ ಹಕ್ಕು ಕಾಯಿದೆಯನ್ನು ಜಾರಿಗೊಳಿಸಲಾಗಿದ್ದು ಮುಂದಿನ 90 ದಿನಗಳಲ್ಲಿ ಕಾಯಿದೆನಿಯಮಗಳನ್ನು ರಚಿಸಲಾಗುವುದು.

133. ನಮ್ಮ ರಾಜ್ಯದ ಭವ್ಯ ಪರಂಪರೆಯನ್ನು ಬಿಂಬಿಸುವ 'ಅವಲೋಕನ' ಎನ್ನುವ ವಿಡಿಯೋ ಸಾಪ್ತಾಹಿಕವನ್ನು ಪ್ರತಿ ವಾರ ಬೆಂಗಳೂರು ದೂರದರ್ಶನದ ಮೂಲಕ ವಾರ್ತಾ ಇಲಾಖೆಯು ಪ್ರಸಾರ ಮಾಡುತ್ತಿದೆ. 'ಕರ್ನಾಟಕ ವಾಹಿನಿ' ಎನ್ನುವ ಕಾರ್ಯಕ್ರಮವನ್ನು ಆರಂಭಿಸಿದ್ದು ಇದರ

400 ಸಂಚಿಕೆಗಳು ಈಗಾಗಲೆ ದೂರದರ್ಶನದ ಮೂಲಕ ಪ್ರಸಾರಗೊಂಡಿವೆ. ಬಿ.ವಿ. ಕಾರಂತ ಮತ್ತು ಎ.ಎನ್. ಮೂರ್ತಿರಾಯರ ಬಗ್ಗೆ ಚಲನಚಿತ್ರ ಮಾಧ್ಯಮದಲ್ಲಿ 35 ಎಂ.ಎಂ.ನ ಎರಡು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗಿದೆ.

134. ಕರ್ನಾಟಕವು ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಅಪಾರ ಅವಕಾಶಗಳನ್ನು ಹೊಂದಿದೆ. 1992ರಲ್ಲಿ ಪ್ರಥಮವಾಗಿ ಪ್ರವಾಸೋದ್ಯಮ ನೀತಿಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ. ಈ ನೀತಿಯಡಿ ಉದ್ಯಮಿಗಳಿಗೆ ಹಲವಾರು ಉತ್ತೇಜನ ಮತ್ತು ರಿಯಾಯಿತಿಗಳನ್ನು ಒದಗಿಸಲಾಗಿದೆ. ಈ ಯೋಜನೆ ಜಾರಿಯ ನಂತರ 553 ಪ್ರವಾಸೋದ್ಯಮ ಯೋಜನೆಗಳು ರಾಜ್ಯದಲ್ಲಿ ಜಾರಿಗೆ ಬಂದಿವೆ. ಇವುಗಳಿಗೆ ಸರ್ಕಾರವು 18 ಕೋಟಿ ರೂ.ಗಳ ಸಹಾಯ ಧನವನ್ನು ನೀಡಿದೆ. ಈ ವರ್ಷ 1752 ಕೋಟಿ ರೂ.ಗಳ ಹೂಡಿಕೆಯ 52 ಹೊಸ ಪ್ರವಾಸೋದ್ಯಮ ಯೋಜನೆಗಳಿಗೆ ಅನುಮತಿ ನೀಡಲಾಗಿದೆ. ನಾವು 20 ವರ್ಷಗಳ ಮುನ್ನೋಟದ ಸಮಗ್ರ ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಈ ಯೋಜನೆಗೆ ಭಾಗಶಃ ಧನಸಹಾಯ ಮಾಡಲು ಭಾರತ ಸರ್ಕಾರವು ಮುಂದೆ ಬಂದಿದೆ. ಈ ಉದ್ಯಮದಲ್ಲಿನ ವಿವಿಧ ಭಾಗೀದಾರರ ನಡುವೆ ಸಂಪರ್ಕ ಕಲ್ಪಿಸಲು ಸೂಕ್ತ ವೇದಿಕೆಯೊಂದರ ಅಗತ್ಯವಿದೆ. ಆದ್ದರಿಂದ ನಾನು ರಾಜ್ಯ ಪ್ರವಾಸೋದ್ಯಮ ಪರಿಷತ್‌ನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಕರ್ನಾಟಕವನ್ನು ಜಾಗತಿಕ ತಾಣವನ್ನಾಗಿ ರೂಪಿಸುವುದು ನಮ್ಮ ಗುರಿಯಾಗಿದೆ.

135. ಯುವ ಸಮೂಹದ ವ್ಯಕ್ತಿತ್ವ ಅಭಿವೃದ್ಧಿಗೊಳಿಸುವ 'ಯುವಚೇತನ' ಎನ್ನುವ ಕಾರ್ಯಕ್ರಮವನ್ನು ಕ್ಯಾಂಪ್‌ಗಳ ಮೂಲಕ ಸಂಘಟಿಸಲಾಗುತ್ತಿದೆ. ಅಪೂರ್ಣಗೊಂಡಿರುವ ಕ್ರೀಡಾಂಗಣಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ಸಾರ್ವಜನಿಕ ಕೊಡುಗೆಗಳನ್ನು ಕೋರಲಾಗುತ್ತಿದೆ. ರಾಜ್ಯದ 100 ಶಾಲೆ ಮತ್ತು ಕಾಲೇಜುಗಳನ್ನು ಆಯ್ಕೆ ಮಾಡಿ ಅಲ್ಲಿ ಕ್ರೀಡಾ ಉತ್ತೇಜನ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ಅರಣ್ಯ ಮತ್ತು ಜೈವಿಕ ವೈವಿಧ್ಯ

136. ಕರ್ನಾಟಕದಲ್ಲಿ 38.9 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವಿದ್ದು ಇದು ರಾಜ್ಯದ ಒಟ್ಟಾರೆ ಭೌಗೋಳಿಕ ಕ್ಷೇತ್ರದ ಶೇಕಡ 20 ಕ್ಕಿಂತ ಹೆಚ್ಚಾಗಿದೆ. ಸಂರಕ್ಷಣೆ, ಅರಣ್ಯೀಕರಣ ಮತ್ತು ವನ್ಯಜೀವಿ ರಕ್ಷಣೆ ಇವು ನಮ್ಮ ಆದ್ಯತೆಗಳಾಗಿ ಮುಂದುವರಿಯಲಿವೆ. ರಾಜ್ಯದ ಯೋಜನಾ ಕಾರ್ಯಕ್ರಮ ಮತ್ತು ವಿದೇಶಿ ನೆರವಿನ ಯೋಜನೆಗಳ ಒಟ್ಟು ವೆಚ್ಚ 2000-01ರಲ್ಲಿ 142 ಕೋಟಿ ರೂ.ಗಳಿದ್ದು ಇದನ್ನು 2001-02 ರಲ್ಲಿ 187 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

137. ರಾಜ್ಯ ಸರ್ಕಾರದ ಪ್ರಯತ್ನಗಳಿಗೆ ಖಾಸಗಿ ವಲಯದವರು ಪೂರಕ ನೆರವು ನೀಡಿದರೆ ರಾಜ್ಯದ ಅರಣ್ಯ ಪ್ರದೇಶವನ್ನು ಶೀಘ್ರವಾಗಿ ವಿಸ್ತರಿಸಬಹುದಾಗಿದೆ. ಈ ನಿಟ್ಟಿನಲ್ಲಿ ಖಾಸಗಿ ವಲಯದವರು ನಮಗೆ ನೆರವು ನೀಡಲು ಮುಂದೆ ಬಂದಿದ್ದಾರೆ ಎಂಬುದನ್ನು ತಿಳಿಯಲು ಮಾನ್ಯ ಸದಸ್ಯರಿಗೆ ಸಂತೋಷವಾಗಬಹುದು. ಗಿಡ ನೆಡುವ ಕಾರ್ಯಕ್ರಮದಲ್ಲಿ ಖಾಸಗಿ ಮತ್ತು ಸಾರ್ವಜನಿಕರ ಸಹಭಾಗಿತ್ವವನ್ನು ಪ್ರೋತ್ಸಾಹಿಸಲು 'ವನ ವಿಕಾಸ ಯೋಜನೆ' ಎನ್ನುವ ನೂತನ

ಕಾರ್ಯಕ್ರಮವನ್ನು ನಾನು ಜಾರಿ ಮಾಡುತ್ತಿದ್ದೇನೆ. ಇದಕ್ಕೆ ಮೂರು ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ನಮ್ಮ ಸಾಂಸ್ಕೃತಿಕ, ಧಾರ್ಮಿಕ ಮತ್ತು ಸ್ವಯಂಸೇವಾ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿವೆ.

138. ಕರ್ನಾಟಕವು ಜೈವಿಕ ವೈವಿಧ್ಯದಲ್ಲಿ ಸಿರಿವಂತ ರಾಜ್ಯ. ನಮ್ಮ ಜೈವಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು ಮತ್ತು ಮಿತವಾಗಿ ಬಳಸಲು ನಾನು 'ಕರ್ನಾಟಕ ಜೈವಿಕ ವೈವಿಧ್ಯ ಮಂಡಳಿ' ಮತ್ತು 'ಗಿಡಮೂಲಿಕಾ ಔಷಧ ಪ್ರಾಧಿಕಾರ'ವನ್ನು ಮುಂದಿನ 90 ದಿನಗಳಲ್ಲಿ ಸ್ಥಾಪಿಸುತ್ತಿದ್ದೇನೆ.

139 ಖಾಸಗಿ ಭೂಮಿಯಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸಲು ಈಗ ನಿರ್ಬಂಧಗಳಿವೆ. ನಾನು ಈ ನಿರ್ಬಂಧಗಳನ್ನು ಪೂರ್ಣವಾಗಿ ಸಡಿಲಗೊಳಿಸಲು ಅರಣ್ಯ ಕಾಯಿದೆಗೆ ಮುಂದಿನ 30 ದಿನಗಳಲ್ಲಿ ಸೂಕ್ತ ತಿದ್ದುಪಡಿಯನ್ನು ತರುತ್ತೇನೆ.

ಶಾಸಕರ ಪ್ರದೇಶಾಭಿವೃದ್ಧಿ ನಿಧಿ

140. ಕಳೆದ ವರ್ಷ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರವು ಗಂಭೀರವಾಗಿ ಪರಿಗಣಿಸುತ್ತಿದೆ ಎಂದು ನಾನು ಘೋಷಣೆ ಮಾಡಿದ್ದೆ. ಈಗ ಈ ನಿಧಿಗಾಗಿ 2001-02 ರಲ್ಲಿ 75 ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದು ಪ್ರತಿ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ತಲಾ 25 ಲಕ್ಷ ರೂ.ಗಳ ನಿಧಿ ಲಭ್ಯವಾಗಲಿದೆ. ಇದು ತಮ್ಮ ಕ್ಷೇತ್ರದ ಅಗತ್ಯಗಳಿಗೆ ಪ್ರತಿಸ್ಪಂದಿಸಲು ಶಾಸಕರುಗಳಿಗೆ ಸಹಾಯವಾಗಲಿದೆ. ನಾವು ವೆಚ್ಚ ಸುಧಾರಣೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದರೆ, ಅನಗತ್ಯ ಸಹಾಯಧನಗಳನ್ನು ನಿವಾರಿಸಿದರೆ ಮತ್ತು ವಿತ್ತೀಯ ಕೊರತೆಯನ್ನು ಯಶಸ್ವಿಯಾಗಿ ತಗ್ಗಿಸಿದರೆ ಮಾತ್ರ ಈ ಮೊತ್ತವನ್ನು ಹಂಚಿಕೆ ಮಾಡಲು ಸಾಧ್ಯ ಎನ್ನುವುದನ್ನು ನಾನು ಇಲ್ಲಿ ಹೇಳಲೇಬೇಕಾಗಿದೆ. ಈ ಸಂಬಂಧ ಸದ್ಯದಲ್ಲೇ ಹೊರಡಿಸಲಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿಯೇ ಈ ನಿಧಿಯನ್ನು ಆದ್ಯತೆಯ ಕ್ಷೇತ್ರಗಳಲ್ಲಿ ಮಾತ್ರ ವೆಚ್ಚ ಮಾಡಬೇಕೆಂದು ನಾನು ಗೌರವಾನ್ವಿತ ಸದಸ್ಯರುಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಕಾನೂನು ಮತ್ತು ಸುವ್ಯವಸ್ಥೆ

141. ಕರ್ನಾಟಕವು ಶಾಂತಿ ಪ್ರಿಯ ರಾಜ್ಯವಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ಸಮಾಧಾನಕರವಾಗಿದ್ದರೂ ಆಗಾಗ್ಗೆ ಕೆಲವು ಗಲಭೆಗಳು ಸಂಭವಿಸಿದವು. ಈ ಗಲಭೆಗಳು ನಮ್ಮ ಸಾಮಾಜಿಕ ಎಳೆಯನ್ನು ನಾಶಮಾಡದಿರುವುದನ್ನು ನೋಡಿದರೆ ಇದು ನಮ್ಮ ಪೊಲೀಸ್ ಪಡೆಯ ಅರ್ಪಣಾ ಮನೋಭಾವ ಮತ್ತು ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ.

142. ನಮ್ಮ ಪೋಲೀಸ್ ಪಡೆಯ ಆಧುನೀಕರಣಕ್ಕಾಗಿ 5 ವರ್ಷಗಳ ಕಾಲಾವಧಿಗೆ ಕೇಂದ್ರ ಸರ್ಕಾರವು 375 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಇದರ ಜೊತೆಗೆ ರಾಜ್ಯದ ಕೊಡುಗೆಯನ್ನು ಸೇರಿಸಿ ಚಾಲನಾ ಶಕ್ತಿ ಸುಧಾರಣೆ, ಪರಿಣಾಮಕಾರಿ ಹಾಗೂ ಆಧುನಿಕ ಆಯುಧಗಳು, ಸುಧಾರಿತ ವಸತಿ ಸೌಲಭ್ಯ, ಅಪರಾಧ ಪತ್ತೆ ಪ್ರಯೋಗಾಲಯಗಳ ಸ್ಥಾಪನೆ

ಮುಂತಾದವುಗಳನ್ನು ಒದಗಿಸಲಾಗುವುದು. ಪೂರ್ಣ ಮಹಿಳೆಯರೇ ಇರುವ 5 ಹೊಸ ಪೋಲಿಸ್ ಠಾಣೆಗಳನ್ನು ಸ್ಥಾಪಿಸಲಾಗುವುದು.

ಆಡಳಿತ ಸುಧಾರಣೆ

143. ಕಳೆದ ಮುಂಗಡ ಪತ್ರದಲ್ಲಿ ನಾನು ಆಡಳಿತ ಯಂತ್ರವನ್ನು ಹೆಚ್ಚು ಜವಾಬ್ದಾರಿಯುತವನ್ನಾಗಿ ಮಾಡುವುದಾಗಿ ಹೇಳಿದ್ದೆ. ನಾವು ರಚಿಸಿದ್ದ ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯನ್ನು ಸಲ್ಲಿಸಿದೆ. ವಿಲೀನಗೊಳಿಸುವ ಮೂಲಕ ಇಲಾಖೆಗಳ ಸಂಖ್ಯೆಯನ್ನು ಕಡಿಮೆ ಮಾಡುವುದು, 5528 ಹುದ್ದೆಗಳನ್ನು ರದ್ದುಮಾಡುವುದು, ಪ್ರತಿಯೊಂದು ಇಲಾಖೆಗೆ ಮಾಹಿತಿ ತಂತ್ರಜ್ಞಾನ ಯೋಜನೆಯನ್ನು ರೂಪಿಸುವುದು, ಏಕ ಕಡತ ಯೋಜನೆಯನ್ನು ಜಾರಿಗೊಳಿಸುವುದು, ವರ್ಗಾವಣೆಗೆ ಕಾಯಿದೆ ರೂಪಿಸುವುದು, ಜಿಲ್ಲಾಡಳಿತವನ್ನು ಪುನರ್‌ಸಂಘಟಿಸುವುದು ಮತ್ತು ಸಚಿವಾಲಯ ಕೈಪಿಡಿಯನ್ನು ಪುನರ್‌ನವೀಕರಿಸುವುದು ಇತ್ಯಾದಿ ಶಿಫಾರಸ್ಸುಗಳನ್ನು ಆಯೋಗವು ಮಾಡಿದೆ. ಆಡಳಿತದಲ್ಲಿ ದಕ್ಷತೆ ಮತ್ತು ವ್ಯವಸ್ಥೆಯನ್ನು ಸದೃಢಗೊಳಿಸಲು ವರದಿಯು ಹೆಚ್ಚು ಒತ್ತು ನೀಡಿದೆ. ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳನ್ನು ಸಚಿವ ಸಂಪುಟ ಉಪಸಮಿತಿಯು ಪರಿಶೀಲಿಸುತ್ತಿದೆ. ಇದು ನೀಡಲಿರುವ ವಿವರವಾದ ಶಿಫಾರಸ್ಸುಗಳನ್ನು ಮುಂದಿನ ಮೂರ್‍ನಾಲ್ಕು ತಿಂಗಳುಗಳಲ್ಲಿ ಜಾರಿಗೊಳಿಸಲಾಗುವುದು.

144. ನಮ್ಮ ಆಡಳಿತಕ್ಕೆ ಹೊಸ ರೂಪವನ್ನು ನೀಡಲು ನಾನು ಜೂನ್ 30, 2001 ರಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುತ್ತಿದ್ದೇನೆ.

- ವಿಭಾಗಾಧಿಕಾರಿಗಳ ಹುದ್ದೆಯೂ ಸೇರಿದಂತೆ ಎಲ್ಲ ವಿಭಾಗೀಯ ಮಟ್ಟದ ಹುದ್ದೆಗಳನ್ನು ರದ್ದುಗೊಳಿಸಲಾಗುವುದು.
- ಹೊಸ ವಾಹನಗಳ ಖರೀದಿಯನ್ನು ಒಂದು ವರ್ಷದವರೆಗೆ ಸ್ಥಗಿತಗೊಳಿಸಲಾಗುವುದು.
- 25 ವರ್ಷ ಸೇವೆಗಿಂತ ಮುಂಚೆಯೇ ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲು ಅನುವಾಗುವಂತೆ ಕೆ.ಸಿ.ಎಸ್.ಆರ್. ನಿಯಮ 285ಕ್ಕೆ ತಿದ್ದುಪಡಿ ತರಲಾಗುವುದು. ಇದರ ಜೊತೆಗೆ ಈ ನಿಯಮವನ್ನು ಪರಿಣಾಮಕಾರಿಯಾಗಿ ಬಳಸಿ ಅದಕ್ಷ ಮತ್ತು ಭ್ರಷ್ಟ ಅಧಿಕಾರಿಗಳನ್ನು ಸೇವೆಯಿಂದ ತೆಗೆದು ಹಾಕಲಾಗುವುದು..
- ಜಿಲ್ಲಾಧಿಕಾರಿಗಳ ಕಛೇರಿಯನ್ನು ಮತ್ತಷ್ಟು ಶಕ್ತಗೊಳಿಸಿ ಜಿಲ್ಲಾ ಮಟ್ಟದಲ್ಲಿರುವ ಎಲ್ಲಾ ನಿಯಂತ್ರಿತ ಇಲಾಖೆಗಳನ್ನು ಜಿಲ್ಲಾಧಿಕಾರಿಗಳ ನೇರ ಆಡಳಿತಕ್ಕೆ ಒಳಪಡಿಸಲಾಗುವುದು.
- ಕಡತಗಳ ವಿಲೇವಾರಿಗೆ ಎಲ್ಲಾ ಹಂತಗಳಲ್ಲೂ ಕಾಲಮಿತಿ ನಿಗದಿಪಡಿಸಲಾಗುವುದು. ಸಚಿವಾಲಯ ಕೈಪಿಡಿಗೆ ತಿದ್ದುಪಡಿ ತರಲಾಗುವುದು ಮತ್ತು ಸಚಿವಾಲಯ ಹಾಗೂ ಕ್ಷೇತ್ರಮಟ್ಟದ ಕಛೇರಿಗಳ ನಡುವೆ ಏಕ ಕಡತ ಪದ್ಧತಿಯನ್ನು ಜಾರಿಗೆ ತರಲಾಗುವುದು.

- ಸಾಂಸ್ಥಿಕ ಹಣಕಾಸು ಇಲಾಖೆಯನ್ನು ಹಣಕಾಸು ಇಲಾಖೆಯ ಜೊತೆಗೆ ವಿಲೀನಗೊಳಿಸಲಾಗುವುದು. ತೆರಿಗೆ ಸಂಗ್ರಹಣೆ ಇಲಾಖೆಗಳು ಈವರೆಗೆ ಸಾಕಷ್ಟು ಬೆಂಬಲ ಪಡೆದಿಲ್ಲ. ಈ ಇಲಾಖೆಗಳಿಗೆ ಹೆಚ್ಚು ಚಾಲನೆ, ಮಾನವ ಶಕ್ತಿ ಮತ್ತು ಉತ್ತಮ ಮಾಹಿತಿ ನಿರ್ವಹಣೆಯ ಅಗತ್ಯ ಇದೆ.

145. ಹಾಲಿ ಇರುವ ಸಾರ್ವತ್ರಿಕ ವರ್ಗಾವಣೆ ಪದ್ಧತಿಯು ನಿಯಮ ಆಧಾರಿತವಾಗಿಲ್ಲ ಮತ್ತು ಆಡಳಿತ ದಕ್ಷತೆಗೆ ಭಂಗ ತರುತ್ತಿದೆ ಎನ್ನುವ ಅಭಿಪ್ರಾಯ ಹಲವು ವಲಯಗಳಲ್ಲಿ ಎದ್ದಿದೆ. 2001-02 ರಲ್ಲಿ ಯಾವುದೇ ಸಾರ್ವತ್ರಿಕ ವರ್ಗಾವಣೆಯನ್ನು ಮಾಡದಿರಲು ನಾನು ನಿರ್ಧರಿಸಿದ್ದೇನೆ. ಈ ಸಂಬಂಧ ನಿಯಮ ಆಧಾರಿತ ಪಾರದರ್ಶಕ ವಿಧಾನಗಳನ್ನು ವಿವರವಾಗಿ ರೂಪಿಸಲಾಗುತ್ತಿದ್ದು ಸದ್ಯದಲ್ಲೇ ನಾನು ಸದನಕ್ಕೆ ಮರಳಿ ಬರಲಿದ್ದೇನೆ.

146. ನಮ್ಮ ದೇಶದಲ್ಲಿ ಸಾಮಾಜಿಕ ಸುರಕ್ಷೆಗೆ ಭವಿಷ್ಯ ನಿಧಿ ಪ್ರಮುಖ ಸಾಧನವಾಗಿದೆ. ಹಾಲಿ ರಾಜ್ಯ ಸರ್ಕಾರಿ ನೌಕರರಲ್ಲಿ ಅಂದಾಜು ಶೇಕಡ 40 ರಷ್ಟು ಮಂದಿ ಈ ಯೋಜನೆಯ ವ್ಯಾಪ್ತಿಯಲ್ಲಿದ್ದಾರೆ. ನಾನು ಈಗ ಎಲ್ಲಾ ಸರ್ಕಾರಿ ಮತ್ತು ರಾಜ್ಯ ಅನುದಾನಿತ ಸಂಸ್ಥೆಗಳಲ್ಲಿನ 'ಡಿ' ಗ್ರೂಪ್ ನೌಕರರನ್ನು ಹೊರತುಪಡಿಸಿ ಇತರರಿಗೆ ಭವಿಷ್ಯನಿಧಿ ಯೋಜನೆಯನ್ನು ಕಡ್ಡಾಯಗೊಳಿಸಲು ಉದ್ದೇಶಿಸಿದ್ದೇನೆ. ವೇತನದ ಕನಿಷ್ಠ ಶೇಕಡ 4 ರಷ್ಟು ಕೊಡುಗೆ ಈ ಯೋಜನೆಗೆ ಕಡ್ಡಾಯವಾಗಿದೆ. ರಾಜ್ಯ ಸರ್ಕಾರಿ ನೌಕರರು ಇದನ್ನು ಸ್ವಾಗತಿಸುತ್ತಾರೆ ಎಂಬ ವಿಶ್ವಾಸ ನನಗಿದೆ.

ಪ್ರಾದೇಶಿಕ ಅಭಿವೃದ್ಧಿ

147. ಖ್ಯಾತ ಆರ್ಥಿಕ ತಜ್ಞರಾದ ಡಾ|| ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸಲು ನೀತಿ ಮತ್ತು ಕಾರ್ಯಕ್ರಮಗಳ ಸಲಹೆ ಮಾಡಲು ಸಮಿತಿಯೊಂದನ್ನು ರಚಿಸಿರುವ ಸಂಗತಿ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಈ ಕೆಳಕಂಡ ಶಿಫಾರಸ್ಸುಗಳನ್ನು ನಾನು ತಕ್ಷಣದಲ್ಲೇ ಒಪ್ಪಿಕೊಂಡಿದ್ದೇನೆಂದು ಘೋಷಿಸುತ್ತೇನೆ.

- ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿರುವ ವೈದ್ಯಕೀಯ ಕಾಲೇಜುಗಳನ್ನು ಪೂರ್ಣವಾಗಿ ಸಜ್ಜುಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ 2001-02ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ನಿಗದಿಗೊಳಿಸಲಾಗಿದೆ.
- ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆಗೆ ಅಗತ್ಯವಾದ ಎಲ್ಲಾ ಪೂರ್ವಭಾವಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು.
- ಗೋದಾಮು ಮತ್ತು ಶೈತ್ಯಾಗಾರಗಳನ್ನು ಬಲಪಡಿಸಲು, ಧಾರವಾಡ ಮತ್ತು ಗುಲ್ಬರ್ಗದಲ್ಲಿ ಖಾಸಗಿ ವಲಯದ ಪಾಲುದಾರಿಕೆಯೊಂದಿಗೆ ಬಹುಧಾನ್ಯ ಕಣಜಗಳನ್ನು ಸ್ಥಾಪಿಸಲಾಗುವುದು.

- ಬೆಳಗಾಂ ಮತ್ತು ಗುಲ್ಬರ್ಗದಲ್ಲಿ ಪ್ರಸ್ತುತ ಇರುವ ಎರಡು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೌಶಲ್ಯ ವೃದ್ಧಿಸುವ ಇಂಜಿನಿಯರಿಂಗ್ ಸಂಸ್ಥೆಗಳನ್ನು ಒಗ್ಗೂಡಿಸಲಾಗುವುದು.

148. ನಬಾರ್ಡ್ ಸಂಸ್ಥೆಯು ತನ್ನ ಜಿಲ್ಲಾ ಗ್ರಾಮೀಣ ಕೈಗಾರಿಕೀಕರಣ ಕಾರ್ಯಕ್ರಮದಡಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಮುಂದಿನ ಎರಡು ವರ್ಷಗಳಲ್ಲಿ 50 ಸಾವಿರ ಉದ್ಯೋಗಗಳನ್ನು ಸೃಜಿಸಲಿದೆ. 2001-02ರಲ್ಲಿ ಮತ್ತೊಂದು ಜಿಲ್ಲೆಯನ್ನು ಕೈಗೆತ್ತಿಕೊಳ್ಳಲಾಗುವುದು. ನಬಾರ್ಡ್ ಸಂಸ್ಥೆಯು ಸಮುದಾಯ ಅಭಿವೃದ್ಧಿ ಯೋಜನೆಯಡಿ ಅಥಣಿಯಲ್ಲಿನ ಕರಕುಶಲ ಕೈಗಾರಿಕೆಗೆ ಸಹಾಯ ಒದಗಿಸಲಿದೆ. ಇದನ್ನು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗೂ ವಿಸ್ತರಿಸಲಾಗುವುದು.

149. ಕಳೆದ ವರ್ಷದ ಮುಂಗಡ ಪತ್ರದಲ್ಲಿ ನಾನು ಮಾಡಿದ್ದ ಭರವಸೆಗಳು ಜಾರಿಯಾಗಿರುವುದನ್ನು ತಿಳಿದು ಮಾನ್ಯ ಸದಸ್ಯರಿಗೆ ಸಂತೋಷವಾಗಬಹುದು. ಕೆ.ಬಿ.ಜೆ.ಎನ್.ಎಲ್. ಕಛೇರಿಯನ್ನು ಆಲಮಟ್ಟಿಗೆ, ಕೆ.ಎನ್.ಎನ್.ಎಲ್. ಕಛೇರಿಯನ್ನು ಧಾರವಾಡಕ್ಕೆ ಮತ್ತು ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾಂಗೆ ಸ್ಥಳಾಂತರಿಸಲಾಗಿದೆ. ಸರ್ಕಾರಿ ಕಛೇರಿಗಳನ್ನು ವಿಕೇಂದ್ರೀಕರಿಸಿ ರಾಜ್ಯದ ಸೂಕ್ತ ಸ್ಥಳಗಳಿಗೆ ಸ್ಥಳಾಂತರಿಸುವ ನಮ್ಮ ಕಾರ್ಯಕ್ರಮ ಮುಂದುವರಿಯುತ್ತದೆ.

150. ಗಡಿಭಾಗದಲ್ಲಿರುವ ಕನ್ನಡಿಗರ ಬಗ್ಗೆ ನಮಗಿರುವ ವಿಶೇಷ ಕಾಳಜಿಯನ್ನು ಜಾರಿಯಲ್ಲಿರುವ ವಿವಿಧ ಕಾರ್ಯಕ್ರಮಗಳಾದ ಶಿಕ್ಷಣ, ಆರೋಗ್ಯ ಮತ್ತು ವಸತಿ ಯೋಜನೆಗಳಲ್ಲಿ ಪ್ರತಿಬಿಂಬಿಸಲಾಗುವುದು.

ಹನ್ನೊಂದನೇ ಹಣಕಾಸು ಆಯೋಗ

151. ಹನ್ನೊಂದನೇ ಹಣಕಾಸು ಆಯೋಗದ ಶಿಫಾರಸ್ಸುಗಳು ನಮಗೆ ತೀವ್ರ ನಿರಾಶೆ ತಂದಿವೆ. ಹತ್ತನೇ ಹಣಕಾಸು ಆಯೋಗದ ಶಿಫಾರಸ್ಸಿನ ರೀತ್ಯ ನಮಗೆ ತೆರಿಗೆ ಪಾಲಿನಲ್ಲಿ ಶೇಕಡ 5.33 ರಷ್ಟು ವರ್ಗಾವಣೆಯಾಗುತ್ತಿತ್ತು. ಆದರೆ ಈಗ ಹನ್ನೊಂದನೇ ಹಣಕಾಸು ಆಯೋಗವು ಶೇಕಡ 4.93 ರಷ್ಟು ಪಾಲು ಹಂಚಿಕೆ ಮಾಡಿದ್ದು ಇದರಿಂದ ಐದು ವರ್ಷಗಳ ಅವಧಿಯಲ್ಲಿ ರಾಜ್ಯವು ಸುಮಾರು 1200 ಕೋಟಿ ರೂ.ಗಳಿಂದ ವಂಚಿತವಾಗಲಿದೆ. ಆರ್ಥಿಕವಾಗಿ ದಕ್ಷ ಮತ್ತು ಶಿಸ್ತುಬದ್ಧವಾಗಿರುವ ಕರ್ನಾಟಕದಂತಹ ರಾಜ್ಯಗಳು ಅನಗತ್ಯವಾಗಿ ಕಡಿತಕ್ಕೊಳಪಟ್ಟಿವೆ.

ವಾರ್ಷಿಕ ಯೋಜನೆ 2001-02

152. ನಾನು 2000-01ರ ವಾರ್ಷಿಕ ಯೋಜನಾ ಗಾತ್ರವನ್ನು 7274 ಕೋಟಿ ರೂ.ಗಳಿಂದ 2001-02 ರಲ್ಲಿ 8588 ಕೋಟಿ ರೂ.ಗಳಿಗೆ ವೃದ್ಧಿಸಲಾಗಿದೆ. ಇದು ಶೇಕಡ 18 ರಷ್ಟು ಏರಿಕೆಯಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ. ನಾನು ಈಗಾಗಲೇ ಹೇಳಿರುವಂತೆ ನನ್ನ ಆದ್ಯತೆಗಳು ನೀರಾವರಿ, ವಿದ್ಯುತ್, ವಸತಿ, ಗ್ರಾಮೀಣಾಭಿವೃದ್ಧಿ, ಸಮಾಜ ಕಲ್ಯಾಣ, ಆರೋಗ್ಯ ಮತ್ತು ಮೂಲ ಸೌಕರ್ಯಗಳಾಗಿವೆ.

153. ಮಾನ್ಯರೆ, ಈ ಮುಂಗಡ ಪತ್ರದ ಒಟ್ಟಾರೆ ಕೇಂದ್ರೀಕೃತ ದೃಷ್ಟಿ ಹೂಡಿಕೆ, ರಸ್ತೆ ಮತ್ತು ನೀರಾವರಿಗಳಂತಹ ಮೂಲಸೌಕರ್ಯಗಳಲ್ಲಿ ; ಕೆರೆ ಪುನರ್ ನಿರ್ಮಾಣ ಮತ್ತು ವಸತಿಯಂತಹ ಕಾರ್ಯಕ್ರಮಗಳಲ್ಲಿ ; ಕೃಷಿ ಸಂಸ್ಕರಣೆ, ಜವಳಿ ಮತ್ತು ಸಿದ್ಧ ಉಡುಪು, ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನಗಳಂತಹ ಕೈಗಾರಿಕೆಗಳಲ್ಲಿ ಹೂಡಿಕೆ ನಮ್ಮ ಆದ್ಯತೆಯಾಗಿದೆ. ಈ ಹೂಡಿಕೆಗಳು ನಮ್ಮ ರಾಜ್ಯದ ಯುವ ಸಮುದಾಯಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಉತ್ಪಾದನಾ ಉದ್ಯೋಗಗಳ ಅವಕಾಶಗಳನ್ನು ಸೃಜಿಸಲಿವೆ.

154. ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ.

155. ಸನ್ಮಾನ್ಯ ಸದಸ್ಯರಿಗೆ ತಿಳಿದಿರುವಂತೆ, ತೆರಿಗೆ ಕಾಯ್ದೆಗಳಿಗೆ ಸುಧಾರಣೆ ಶಿಫಾರಸ್ಸು ಮಾಡಲು ರಾಜ್ಯವು ರಚಿಸಿದ ತೆರಿಗೆ ಸುಧಾರಣಾ ಆಯೋಗವು ತನ್ನ ಮಧ್ಯಕಾಲೀನ ವರದಿ ನೀಡಿರುತ್ತದೆ. ಆ ವರದಿಯಲ್ಲಿ ಮಾರಾಟ ತೆರಿಗೆ, ಅಬಕಾರಿ, ಸಾರಿಗೆ, ನೋಂದಣಿ ಮತ್ತು ಸ್ಟಾಂಪ್ ಶುಲ್ಕಗಳಿಗೆ ಸಂಬಂಧಪಟ್ಟಂತೆ ಕೆಲವು ಸುಧಾರಣೆಗಳನ್ನು ಸಲಹೆ ಮಾಡಿರುತ್ತದೆ. ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ಅನುಷ್ಠಾನದ ಬಗ್ಗೆ ಮಾರ್ಗಸೂಚಿಯನ್ನು ಕೂಡ ಆಯೋಗ ಪ್ರಸ್ತಾಪಿಸಿರುತ್ತದೆ. ಈ ಶಿಫಾರಸ್ಸುಗಳನ್ನು ಪರಿಶೀಲನೆ ಮಾಡಿ ಅವುಗಳಲ್ಲಿ ಕೆಲವನ್ನು ಮುಂದಿನ ಪ್ರಸ್ತಾವನೆಗಳಲ್ಲಿ ಅಳವಡಿಸಿದ್ದೇನೆ.

ವಾಣಿಜ್ಯ ತೆರಿಗೆಗಳು

156. ಸ್ಥಳೀಯ ಪರೋಕ್ಷ ತೆರಿಗೆಗಳಲ್ಲಿ ಸುಧಾರಣೆ ತರಲು ರಾಷ್ಟ್ರ ಮಟ್ಟದಲ್ಲಿ ಪ್ರಯತ್ನಗಳು ನಡೆದಿದೆ. ಎಲ್ಲಾ ರಾಜ್ಯಗಳು ಸುಮಾರು 200 ಕ್ಕೂ ಹೆಚ್ಚಿನ ಸರಕುಗಳ ಮೇಲೆ ಕನಿಷ್ಠ ದರಗಳನ್ನು ನಿಗದಿ ಮಾಡಲು ಮತ್ತು ಅವುಗಳನ್ನು ಅನುಸರಿಸಲು ಹಾಗೂ ಹೊಸ ಕೈಗಾರಿಕೆಗಳಿಗೆ ಮಾರಾಟ ತೆರಿಗೆ ಆಧಾರಿತ ಪ್ರೋತ್ಸಾಹಕಗಳನ್ನು ಕೊನೆಗೊಳಿಸಲು ಕೈಗೊಂಡಿರುವ ಒಪ್ಪಂದಗಳು, ಕಳೆದ ಎರಡು ವರ್ಷಗಳಲ್ಲಿ ತೆರಿಗೆ ವ್ಯವಸ್ಥೆಯ ಸುಧಾರಣೆ ನಿಟ್ಟಿನಲ್ಲಿ ಇಟ್ಟಿರುವ ಎರಡು ಮಹತ್ವದ ಹೆಜ್ಜೆಗಳಾಗಿರುತ್ತವೆ. ರಾಜ್ಯಗಳ ಹಣಕಾಸು ಮಂತ್ರಿಗಳ ಅಧಿಕೃತ ಸಮಿತಿಯು ಕೇಂದ್ರ ಮಾರಾಟ ತೆರಿಗೆ ಕಾಯ್ದೆಯಲ್ಲಿ ಸುಧಾರಣೆಗಳನ್ನು ಮಾಡಲು ಶಿಫಾರಸ್ಸು ಮಾಡಿ ಸೂಕ್ತ ತಿದ್ದುಪಡಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುತ್ತದೆ.

157. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು 2002ನೇ ವರ್ಷದ ಏಪ್ರಿಲ್ ಒಂದನೇ ತಾರೀಖಿನಿಂದ ಅನುಷ್ಠಾನ ಮಾಡಲು ಒಟ್ಟಾಭಿಪ್ರಾಯಕ್ಕೆ ಬಂದಿರುತ್ತವೆ. ಈ ನಿಟ್ಟಿನಲ್ಲಿ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆಗನುಗುಣವಾಗುವಂತೆ ಒಂದು ಪತ್ರವನ್ನು ಪ್ರಕಟಿಸಲಾಗಿದೆ. ಹಾಗೂ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಅನುಷ್ಠಾನಗೊಳಿಸಲು ಅಗತ್ಯವಾದ ತಾಂತ್ರಿಕ ಸಹಾಯವನ್ನು ನೀಡಲು ವಿಶ್ವ ಬ್ಯಾಂಕ್ ಮುಂದೆ ಬಂದಿದೆ. ಈ ಹಿನ್ನೆಲೆಯಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಫಲಪ್ರದವಾಗಿ ಅನುಷ್ಠಾನಗೊಳಿಸುವ ದಿಕ್ಕಿನಲ್ಲಿ ಈಗಿರುವ ತೆರಿಗೆ ಪದ್ಧತಿಯಲ್ಲಿ ಕೆಳಕಂಡ ಸುಧಾರಣೆಗಳನ್ನು ಮಾಡಲು ಪ್ರಸ್ತಾಪಿಸುತ್ತೇನೆ.

ಸ್ವಯಂ ಕರನಿರ್ಧರಣೆ

158. ಸ್ವಯಂ ಕರನಿರ್ಧರಣೆ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ಒಂದು ವಿಶೇಷ ಗುಣವಾಗಿರುತ್ತದೆ. ಆದುದರಿಂದ ಮರು ಮಾರಾಟಗಾರರಿಗೆ ಯಾವುದೇ ವಹಿವಾಟಿನ ಮಿತಿಯಿಲ್ಲದೆ ಹಾಗೂ ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಹಿವಾಟಿರುವ ತಯಾರಕರು ಮತ್ತು ಸಂಸ್ಕರಣಾಕಾರರಿಗೆ ಮಿತವಾದ ಷರತ್ತುಗಳೊಂದಿಗೆ, ಆದರೆ ಕೆಲವು ಸೂಕ್ಷ್ಮ ಸರಕುಗಳ ವ್ಯಾಪಾರಿಗಳು, ಗುತ್ತಿಗೆದಾರರು, ತೈಲ ಕಂಪನಿಗಳು, ರಫ್ತುದಾರರು ಮತ್ತು ತೆರಿಗೆ ವಂಚನೆ ವರದಿಯಾದ ಪ್ರಕರಣಗಳನ್ನು ಹೊರತುಪಡಿಸಿದಂತೆ, ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆ ಕಾಯ್ದೆಗಳಡಿಯಲ್ಲಿ ಸ್ವಯಂ ಕರನಿರ್ಧರಣೆ ಕ್ರಮವನ್ನು ಅನುಷ್ಠಾನಗೊಳಿಸಲು ನಾನು ಪ್ರಸ್ತಾವಿಸುತ್ತೇನೆ, ವಾಣಿಜ್ಯ ತೆರಿಗೆ ಆಯುಕ್ತರು ಸ್ವಯಂ ಕರನಿರ್ಧರಣೆ ಆದ ಪ್ರಕರಣಗಳಲ್ಲಿ ಶೇಕಡ 10 ರಷ್ಟನ್ನು ಕೂಲಂಕುಷ ಕರನಿರ್ಧರಣೆಗೆ ಆದೇಶ ಮಾಡಲು ಅಧಿಕಾರ ಹೊಂದಿರುತ್ತಾರೆ.

ವಾರ್ಷಿಕ ವರದಿಯನ್ವಯ ಒಂದು ಬಾರಿಯ ಕರನಿರ್ಧರಣೆ

159. ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ, ತೆರಿಗೆ ಪಾವತಿಗಳನ್ನು (ಕ್ರೆಡಿಟ್‌ಗಳನ್ನು) ಆಗಿಂದಾಗ್ಗೆ ಪರಿಶೀಲಿಸುವುದು ಮತ್ತು ಅವುಗಳ ತೀವ್ರ ಪರಿಶೋಧನೆಯ ಅಗತ್ಯವಿರುತ್ತದೆ. ಆದುದರಿಂದ ಹೊಸ ವ್ಯವಸ್ಥೆಗೆ, ಬಾಕಿ ಇರುವ ಕರನಿರ್ಧರಣೆಗಳನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲ. ಮುಂದೆ ಹೇಳಿರುವ ಷರತ್ತುಗಳಿಗೆ ಒಳಪಟ್ಟು ಮರು ಮಾರಾಟಗಾರರಿಗೆ ಯಾವುದೇ ವಹಿವಾಟಿನ ಮಿತಿಯಿಲ್ಲದೆ ಮತ್ತು ತಯಾರಕರು / ಸಂಸ್ಕರಣಾಕಾರರಿಗೆ ಇಪ್ಪತ್ತೈದು ಲಕ್ಷ ರೂಪಾಯಿಗಳ ವಹಿವಾಟಿನ ಮಿತಿಯೊಂದಿಗೆ 1999-2000 ವರ್ಷದವರೆಗಿನ ಎಲ್ಲಾ ಕರನಿರ್ಧರಣೆ ವರ್ಷಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಮಾರಾಟ ತೆರಿಗೆ, ಕೇಂದ್ರ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆ ಕಾಯ್ದೆಗಳಡಿಯಲ್ಲಿ ಅವರು ಸಲ್ಲಿಸಿದ ವಾರ್ಷಿಕ ವಹಿವಾಟು ವರದಿಗಳನ್ನು ಒಪ್ಪಿಕೊಳ್ಳುವ ಒಂದು ಬಾರಿಯ ಕರನಿರ್ಧರಣೆ ಯೋಜನೆಯನ್ನು ಘೋಷಿಸಲು ನಾನು ಪ್ರಸ್ತಾವಿಸುತ್ತೇನೆ.

(ಅ) 30.06.2000 ರಂದು ಅಥವಾ ಅದಕ್ಕೆ ಮುಂಚೆ ವಾರ್ಷಿಕ ವಹಿವಾಟಿನ ನಮೂನೆಯನ್ನು ಸಲ್ಲಿಸಿರಬೇಕು.

(ಆ) ಕರನಿರ್ಧರಣೆ ವರ್ಷಕ್ಕೆ ಯಾವುದೇ ತೆರಿಗೆ ವಂಚನೆ ಅಥವಾ ಅಡಗಿಸಿದ ವರದಿ ಇರಬಾರದು.

(ಇ) ಹೊಸ ಕೈಗಾರಿಕೆ ಅಥವಾ ವಿಸ್ತರಣೆ / ಆಧುನೀಕರಣ / ಭಿನ್ನತೀಕರಣ ಕೈಗೊಂಡ ಕೈಗಾರಿಕಾ ಘಟಕವೆಂದು ತೆರಿಗೆ ವಿನಾಯಿತಿಯ ಅಥವಾ ರಿಯಾಯಿತಿ ಕೋರಿರಬಾರದು.

(ಈ) ರಫ್ತು ಅಥವಾ ರಫ್ತಿಗಾಗಿ ಮಾಡಿದ ಮಾರಾಟ ಎಂದು ಯಾವುದೇ ತೆರಿಗೆ ವಿನಾಯಿತಿ ಕೋರಿರಬಾರದು.

(ಉ) ನೋಂದಣಿದಾರರು ಸಿಮೆಂಟ್ (ಎರಡನೇ ಮತ್ತು ನಂತರದ ಮಾರಾಟಗಳನ್ನು ಬಿಟ್ಟು), ಉಕ್ಕು ಮತ್ತು ಕಬ್ಬಿಣ, ಮಾದಕ ಪಾನೀಯಗಳ ಮಾರಾಟಗಾರ ಅಥವಾ ಗುತ್ತಿಗೆದಾರ ಅಥವಾ ಮದ್ಯಸಾರಗಳ ಮಾರಾಟಗಾರ ಆಗಿರಬಾರದು.

ಮೇಲಿನ ಪ್ರಕರಣಗಳಲ್ಲಿ ಒಂಭತ್ತರ ಅಪವರ್ತ್ಯವಾಗಿರುವ (ಮಲ್ಟಿಪಲ್) ಕೊನೆಯ ನಾಲ್ಕು ಅಂಕಿಗಳಿರುವ (ಅಂತಿಮ ಅಂಕಿಯನ್ನು ಹೊರತುಪಡಿಸಿ) ಕರ್ನಾಟಕ ಮಾರಾಟ ತೆರಿಗೆ ನೋಂದಣಿ ಸಂಖ್ಯೆ ಹೊಂದಿರುವ ಪ್ರಕರಣಗಳನ್ನು ಕೂಲಂಕುಷ ಕರನಿರ್ಧಾರಣೆಗೆ ಒಳಪಡಿಸಲು ನಾನು ಪ್ರಸ್ತಾವಿಸುತ್ತೇನೆ.

ಕೈಗಾರಿಕಾ ಕಚ್ಚಾವಸ್ತುಗಳ ಮೇಲಿನ ತೆರಿಗೆ ಸೋಡಿ (ರಿಬೇಟಿಂಗ್)

160. ಕಚ್ಚಾವಸ್ತುಗಳ ಮೇಲೆ ಪಾವತಿ ಮಾಡಿದ ತೆರಿಗೆಯಲ್ಲಿ ಸೋಡಿಯನ್ನು ನೀಡುವ ವ್ಯವಸ್ಥೆ ಮೌಲ್ಯವರ್ಧಿತ ತೆರಿಗೆಯ ಇನ್ನೊಂದು ಪ್ರಮುಖ ಅಂಶವಾಗಿರುತ್ತದೆ. ಪ್ರಸ್ತುತ, ತಯಾರಕರು ಒಂದು ಘೋಷಣಾ ಪತ್ರವನ್ನು ಮಾರಾಟಗಾರರಿಗೆ ನೀಡುವ ಮೂಲಕ ತಮ್ಮ ಕಚ್ಚಾವಸ್ತುಗಳ ಮೇಲೆ ಕಡಿತ ತೆರಿಗೆ ದರಕ್ಕೆ ಅರ್ಹರಾಗಿರುತ್ತಾರೆ. ಈ ಘೋಷಣಾ ಪತ್ರವನ್ನು ರದ್ದುಪಡಿಸಲು ವಾಣಿಜ್ಯ ಮತ್ತು ಕೈಗಾರಿಕೆಗಳು ಕೋರುತ್ತಾ ಬಂದಿವೆ. ಆದುದರಿಂದ ಈ ರಿಯಾಯಿತಿಯನ್ನು ಲೆಕ್ಕಪುಸ್ತಕಗಳ ಆಧಾರಿತ ವ್ಯವಸ್ಥೆಯನ್ನಾಗಿಸಲು ಮತ್ತು ತೆರಿಗೆ ವ್ಯವಸ್ಥೆಯಲ್ಲಿ ಆಸಕ್ತಿ ಹೊಂದಿರುವವರನ್ನು ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ಕಾರ್ಯನಿರ್ವಹಣೆಗೆ ಸಿದ್ಧರಾಗಿಸಲು, ತಯಾರಕರು ಸಾಮಾನ್ಯ ದರದಲ್ಲಿ ಕಚ್ಚಾವಸ್ತುಗಳನ್ನು ಖರೀದಿಸಲು ಮತ್ತು ಘೋಷಿತ ಸರಕುಗಳ ಮೇಲೆ ಶೇಕಡ ಮೂರಕ್ಕಿಂತ ಹಾಗೂ ಇತರೆ ವಸ್ತುಗಳ ಮೇಲೆ ಶೇಕಡ ಎರಡಕ್ಕಿಂತ ಹೆಚ್ಚಿನ ದರದಲ್ಲಿ ನೀಡಿದ ತೆರಿಗೆಗೆ ಸೋಡಿ (ರಿಬೇಟ್) ನೀಡುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ನಾನು ಪ್ರಸ್ತಾವಿಸುತ್ತೇನೆ. ಅಂತಹ ಸೋಡಿಯನ್ನು ತಯಾರಕರು ತಮ್ಮ ಉತ್ಪನ್ನಗಳ ಮೇಲೆ ಪಾವತಿಸಬೇಕಾದ ಕರ್ನಾಟಕ ಮಾರಾಟ ತೆರಿಗೆ ಅಥವಾ ಕೇಂದ್ರ ಮಾರಾಟ ತೆರಿಗೆಗೆ ಹೊಂದಾಣಿಕೆ ಮಾಡುವ ಮೂಲಕ ಪಡೆಯಬಹುದು ಅಥವಾ ಪ್ರವೇಶ ತೆರಿಗೆಗೆ ಹೊಂದಾಣಿಕೆಯಿಂದ ಅಥವಾ ಕರನಿರ್ಧಾರಣೆ ಅಧಿಕಾರಿಯಿಂದ ಮರುಪಾವತಿ ಮೂಲಕ ಪಡೆಯಬಹುದು.

ರಫ್ತು ಅಭಿಮುಖ ಘಟಕಗಳು / ರಫ್ತು ಸಂಸ್ಥೆಗಳು :

161. ರಫ್ತು ಅಭಿಮುಖ ಘಟಕಗಳು ತಾವು ರಫ್ತು ಮಾಡಿದ ಸರಕುಗಳ ತಯಾರಿಕೆಗೆ ಉಪಯೋಗಿಸಲಾದ ಕಚ್ಚಾವಸ್ತುಗಳು ಮತ್ತು ಬಿಡಿಭಾಗಗಳ ಮೇಲೆ ಪಾವತಿ ಮಾಡಿದ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆ ಮರುಪಾವತಿ ಪಡೆಯುವ ರಿಯಾಯಿತಿಯನ್ನು ಕಳೆದ ವರ್ಷ ನೀಡಲಾಗಿತ್ತು. ರಫ್ತುಗಾರರಿಗೆ ಈ ರೀತಿ ನೀಡಿದ ರಿಯಾಯಿತಿಯಿಂದ ಬಹಳ ಅನುಕೂಲವಾಗಿದ್ದು,

ನಾನು ಈ ರಿಯಾಯಿತಿಯನ್ನು ಮುಂದುವರೆಸಲು ಮತ್ತು ರಾಜ್ಯದಿಂದ ರಫ್ತುಗಳನ್ನು ಸ್ಪರ್ಧಾತ್ಮಕವಾಗಿರುವಂತೆ ಮಾಡಲು ಇದರ ಜೊತೆಗೆ ತಾವೇ ನೇರವಾಗಿ ರಫ್ತು ಮಾಡಲು ಸಾಧ್ಯವಿಲ್ಲದಿರುವ ತಾಯಾರಕರು ರಾಜ್ಯದಲ್ಲಿನ ಇತರೆ ರಫ್ತುದಾರರಿಗೆ ಮಾರಾಟ ಮಾಡಿದ ಸರಕುಗಳ ತಯಾರಿಕೆಯಲ್ಲಿ ಉಪಯೋಗಿಸಿದ ಕಚ್ಚಾವಸ್ತುಗಳು ಮತ್ತು ಬಿಡಿಭಾಗಗಳ ಮೇಲೆ ಪಾವತಿ ಮಾಡಿದ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆಗಳನ್ನು ಅಂತಹ ತಯಾರಕರಿಗೆ ಮರುಪಾವತಿ ಮಾಡುವ ರಿಯಾಯಿತಿಯನ್ನು ನೀಡಲು ನಾನು ಪ್ರಸ್ತಾವಿಸುತ್ತೇನೆ.

ಕರಸಮಾಧಾನ ಯೋಜನೆ

162. ಕಳೆದ ವರ್ಷ ಮಾರಾಟ ತೆರಿಗೆ, ಪ್ರವೇಶ ತೆರಿಗೆ ಮತ್ತು ಕೃಷಿವರಮಾನ ತೆರಿಗೆಗಳ ಬಾಕಿಯನ್ನು ವಸೂಲಿ ಮಾಡಲು ಘೋಷಿಸಿದ ಕರಸಮಾಧಾನ ಯೋಜನೆಯ ಸೌಲಭ್ಯವನ್ನು ಇದುವರೆವಿಗೂ ಪಡೆಯದಿರುವ ವ್ಯಾಪಾರಿಗಳ ಸಲುವಾಗಿ ಅದನ್ನು ಮಾರ್ಪಾಡು ಮಾಡಲಾಗುತ್ತದೆ. ಅದರಂತೆ ನಾನು ಮುಂದೆ ಹೇಳಿದ ಯೋಜನೆಯನ್ನು ಪ್ರಸ್ತಾವಿಸುತ್ತೇನೆ.

(i) 31.03.2000 ವರೆಗಿನ ಸಾಲುಗಳ ತೆರಿಗೆ ಬಾಕಿಗೆ ಸಂಬಂಧಪಟ್ಟಂತೆ,

(ಅ) ದಿನಾಂಕ 30.04.2001 ರೊಳಗೆ ಬಾಕಿ ಇರುವ ತೆರಿಗೆಯ ಪೂರ್ಣ ಮೊತ್ತ ಹಾಗೂ ಅದರ ಮೇಲಿನ ಬಡ್ಡಿ ಮತ್ತು ದಂಡಗಳ ಶೇಕಡ 20 ರಷ್ಟರ ಮೊತ್ತವನ್ನು ಪಾವತಿ ಮಾಡಿದಲ್ಲಿ, ತೆರಿಗೆ ಬಾಕಿಯ ಮೇಲೆ ಪಾವತಿ ಮಾಡಬೇಕಾದ ಅಥವಾ ವಿಧಿಸಬಹುದಾದ ಉಳಿದ ಶೇಕಡ 80 ರಷ್ಟರ ಬಡ್ಡಿ ಮತ್ತು ದಂಡಗಳನ್ನು ಮನ್ನಾ ಮಾಡಲಾಗುವುದು.

(ಆ) ದಿನಾಂಕ 31.07.2001 ರೊಳಗೆ ಬಾಕಿ ಇರುವ ತೆರಿಗೆಯ ಪೂರ್ಣ ಮೊತ್ತ ಹಾಗೂ ಅದರ ಮೇಲಿನ ಬಡ್ಡಿ ಮತ್ತು ದಂಡಗಳ ಶೇಕಡ 50 ರಷ್ಟರ ಮೊತ್ತವನ್ನು ಪಾವತಿ ಮಾಡಿದಲ್ಲಿ, ತೆರಿಗೆ ಬಾಕಿಯ ಮೇಲೆ ಪಾವತಿ ಮಾಡಬೇಕಾದ ಅಥವಾ ವಿಧಿಸಬಹುದಾದ ಉಳಿದ ಶೇಕಡ 50 ರಷ್ಟರ ಬಡ್ಡಿ ಮತ್ತು ದಂಡಗಳನ್ನು ಮನ್ನಾ ಮಾಡಲಾಗುವುದು.

(ii) 2000-2001ನೇ ಸಾಲಿನ ತೆರಿಗೆ ಬಾಕಿಗೆ ಸಂಬಂಧಪಟ್ಟಂತೆ,

(ಅ) ದಿನಾಂಕ 30.04.2001 ರೊಳಗೆ ಬಾಕಿ ಇರುವ ತೆರಿಗೆಯ ಪೂರ್ಣ ಮೊತ್ತ ಹಾಗೂ ಅದರ ಮೇಲಿನ ಬಡ್ಡಿ ಮತ್ತು ದಂಡಗಳ ಶೇಕಡ 25 ರಷ್ಟರ ಮೊತ್ತವನ್ನು ಪಾವತಿ ಮಾಡಿದಲ್ಲಿ, ತೆರಿಗೆ ಬಾಕಿಯ ಮೇಲೆ ಪಾವತಿ ಮಾಡಬೇಕಾದ ಅಥವಾ ವಿಧಿಸಬಹುದಾದ ಉಳಿದ ಶೇಕಡ 75 ರಷ್ಟರ ಬಡ್ಡಿ ಮತ್ತು ದಂಡಗಳನ್ನು ಮನ್ನಾ ಮಾಡಲಾಗುವುದು.

ಆಡಳಿತಾತ್ಮಕ ಸುಧಾರಣೆ

163. ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ಅನುಷ್ಠಾನಕ್ಕೆ ಇಲಾಖೆಯನ್ನು ಸಿದ್ಧಪಡಿಸುವ ಶುಲುವಾಗಿ,

(ಅ) ಬೆಂಗಳೂರಿನಲ್ಲಿ ಮತ್ತೊಂದು ಗುಪ್ತವಾರ್ತೆ ವಿಭಾಗವನ್ನು ರಚಿಸಲು,

(ಆ) ಬೆಂಗಳೂರಿನಲ್ಲಿ ವಿಲಾಸ ತೆರಿಗೆ ಮತ್ತು ಮನರಂಜನಾ ತೆರಿಗೆಗಳ ಜಾರಿ ಉಸ್ತುವಾರಿ ಮಾಡಲು ಒಂದು ಹೊಸದಾದ ವಿಭಾಗ ರಚಿಸಲು,

(ಇ) ರಫ್ತುಗಾರರು ಮತ್ತು ಸಣ್ಣ ಕೈಗಾರಿಕಾ ಘಟಕಗಳ ಪ್ರಕರಣಗಳನ್ನು ನಿರ್ವಹಿಸಲು ಒಂದು ಹೊಸದಾದ ವಿಭಾಗವನ್ನು ಬೆಂಗಳೂರಿನಲ್ಲಿ ರಚಿಸಲು,

ನಾನು ಪ್ರಸ್ತಾವಿಸುತ್ತೇನೆ.

ಗಣಕೀಕೃತ ಸಂಯುಕ್ತ ತನಿಖಾಠಾಣೆಗಳು :

164. ತೆರಿಗೆ ವಂಚನೆಯನ್ನು ಪತ್ತೆಹಚ್ಚಲು ಮತ್ತು ಹತ್ತಿಕ್ಕಲು ಹಾಗೂ ಸರಕು ಸಾಗಾಣಿಕೆ ಬಗ್ಗೆ ಮಾಹಿತಿಯನ್ನು ನೀಡುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಲು ನಿರ್ಮಿತವಾದ ಮಾರಾಟ ತೆರಿಗೆ ತನಿಖಾ ಠಾಣೆಗಳಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ಸ್ಥಿತಿ ತೃಪ್ತಿಕರವಾಗಿರುವುದಿಲ್ಲ. ಇದಲ್ಲದೆ ಹಲವಾರು ಇಲಾಖೆಗಳು ತಮ್ಮದೇ ಸ್ವತಂತ್ರ ತನಿಖಾಠಾಣೆಗಳನ್ನು ಹೊಂದಿದ್ದು ಅವುಗಳು ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿರುತ್ತದೆ. ಆದುದರಿಂದ ಸರಕು ವಾಹನಗಳ ಪುನರಾವರ್ತಿತ ನಿಲುಗಡೆ ತಪ್ಪಿಸಲು ರಾಜ್ಯದ ಗಡಿಗಳಲ್ಲಿರುವ ವಾಣಿಜ್ಯ ತೆರಿಗೆ, ಅಬಕಾರಿ ಮತ್ತು ಸಾರಿಗೆ ಇಲಾಖೆಗಳ ತನಿಖಾಠಾಣೆಗಳನ್ನು ಸಂಯುಕ್ತಗೊಳಿಸಲು ಮತ್ತು ಒಂದೇ ಸೂರಿನಡಿಯಲ್ಲಿ ಅವು ಕಾರ್ಯನಿರ್ವಹಣೆ ಮಾಡುವ ಕ್ರಮ ಕೈಗೊಳ್ಳಲು ನಾನು ಪ್ರಸ್ತಾಪಿಸುತ್ತೇನೆ. ಇದಲ್ಲದೇ ಈ ತನಿಖಾಠಾಣೆಗಳನ್ನು ಗಣಕೀಕರಿಸುವ ಮೂಲಕ ಅವುಗಳ ಮೂಲಭೂತ ಸೌಲಭ್ಯಗಳನ್ನು ಸುಧಾರಣೆ ಮಾಡಲು ಕೂಡ ನಾನು ಪ್ರಸ್ತಾವಿಸುತ್ತೇನೆ.

ಮಾರಾಟ ತೆರಿಗೆ

ಪರಿಹಾರ ಮತ್ತು ರಿಯಾಯಿತಿಗಳು

ಕೃಷಿ ವಲಯಕ್ಕೆ ಪರಿಹಾರ ಮತ್ತು ರಿಯಾತಿಗಳು

165. ಪ್ರಸಕ್ತ ಸಾಲಿನಲ್ಲಿ ಕೃಷಿ ಉತ್ಪನ್ನಗಳ ತೀವ್ರ ಬೆಲೆ ಇಳಿತದಿಂದಾಗಿ ಕೃಷಿ ವಲಯಕ್ಕೆ ಮತ್ತು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಸಂಕಷ್ಟ ಉಂಟಾಗಿರುವುದನ್ನು ಗಮನದಲ್ಲಿಟ್ಟುಕೊಂಡು, ಕೆಲವು ಆಯ್ದ ಸರಕುಗಳ ಮೇಲೆ ತೆರಿಗೆ ಪರಿಹಾರ ನೀಡಲು ನಾನು ಪ್ರಸ್ತಾವಿಸುತ್ತೇನೆ.

(ಅ) ತೆಂಗಿನ ಕಾಯಿ, ಕೊಬ್ಬರಿ, ಕಡಲೆಕಾಯಿ, ಕಡಲೆಕಾಯಿ ಬೀಜ, ಕುಸುಬೆ ಬೀಜ, ಸೂರ್ಯಕಾಂತಿ ಬೀಜ ಮತ್ತು ಎಲ್ಲಾ ತರಹದ ಎಣ್ಣೆ ಬೀಜಗಳ ಸ್ಥಳೀಯ ಮತ್ತು ಅಂತರ ರಾಜ್ಯ ಮಾರಾಟದ ಮೇಲಿನ ತೆರಿಗೆ ದರವನ್ನು ಶೇಕಡ 4 ರಿಂದ ಶೇಕಡ 2 ಕ್ಕೆ ಇಳಿಸಲು,

(ಆ) ಕಬ್ಬಿನ ಮೇಲಿನ ಖರೀದಿ ತೆರಿಗೆಯಲ್ಲಿ ಪ್ರತಿ ಟನ್ನಿಗೆ 10 ರೂಪಾಯಿಗಳ ಮತ್ತು ಸೆಸ್‌ನಲ್ಲಿ ಪ್ರತಿ ಟನ್ನಿಗೆ 5 ರೂಪಾಯಿಗಳನ್ನು ಇಳಿಸಲು,

(ಇ) ಅಡಿಕೆಯ ಎರಡನೇ ಹಂತದ ಮಾರಾಟದ ಮೇಲಿನ ವಹಿವಾಟು ತೆರಿಗೆಯನ್ನು ವಿನಾಯಿತಿಸಲು,

(ಈ) ಕೃಷಿ ತ್ರೆಷರ್‌ಗಳ ಮತ್ತು ಶಾಫ್ ಕಟ್ಟರುಗಳ ಮೇಲಿನ ತೆರಿಗೆ ದರವನ್ನು ಶೇಕಡ 10 ರಿಂದ ಶೇಕಡ 4 ಕ್ಕೆ ಇಳಿಸಲು,

(ಉ) ಮೆಕ್ಕೆಜೋಳದ ಹೈಬ್ರಿಡ್ ಮತ್ತು ಜರ್ಮ್ಸ್‌ಗಳ ಅಂತರರಾಜ್ಯ ಮಾರಾಟ ಮೇಲಿನ ತೆರಿಗೆ ದರವನ್ನು ಶೇಕಡ 4 ರಿಂದ ಶೇಕಡ 2ಕ್ಕೆ ಇಳಿಸಲು,

(ಊ) ಸೀಗೆಕಾಯಿ ಮೇಲಿನ ತೆರಿಗೆ ದರವನ್ನು ಶೇಕಡ 10 ರಿಂದ ಶೇಕಡ 4 ಕ್ಕೆ ಇಳಿಸಲು,

ನಾನು ಪ್ರಸ್ತಾವಿಸುತ್ತೇನೆ.

165-ಎ. ನಮ್ಮ ರೈತರ ಮತ್ತು ಸ್ಥಳೀಯ ಸಕ್ಕರೆ ಕೈಗಾರಿಕೆಗಳ ಹಿತದೃಷ್ಟಿಯನ್ನು ಕಾಪಾಡಲು ಹೊರ ರಾಜ್ಯಗಳಿಂದ ಆಮದಾದ ಸಕ್ಕರೆ ಮೇಲಿನ ತೆರಿಗೆಯನ್ನು ಶೇಕಡ 12 ಕ್ಕೆ ಏರಿಸಲು ನಾನು ಪ್ರಸ್ತಾವಿಸುತ್ತೇನೆ.

ಸಣ್ಣ ಕೈಗಾರಿಕೆಗಳಿಗೆ ಪರಿಹಾರ ಮತ್ತು ರಿಯಾಯಿತಿಗಳು :

166. ಪ್ರಸಕ್ತ ಆರ್ಥಿಕ ವ್ಯವಸ್ಥೆಯ ಸುಧಾರಣಾ ಕ್ರಮಗಳಿಂದಾಗಿ ಸಣ್ಣ ಕೈಗಾರಿಕಾ ವಲಯ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದು, ಅದರಿಂದ ಹೊರಬರಲು ಅದಕ್ಕೆ ನಮ್ಮ ಬೆಂಬಲದ ಅವಶ್ಯಕತೆಯಿದೆ. ಆದುದರಿಂದ ಅವುಗಳಿಗೆ ಪರಿಹಾರ ಕ್ರಮವಾಗಿ,

(ಅ) ವಹಿವಾಟು ತೆರಿಗೆ ವಿನಾಯಿತಿಗೆ ಸಣ್ಣ ಕೈಗಾರಿಕೆಗಳಿಗೆ ನಿಗದಿಮಾಡಿರುವ ಪ್ರಸಕ್ತ 10 ಲಕ್ಷ ರೂಪಾಯಿಗಳ ಮಿತಿಯನ್ನು 25 ಲಕ್ಷ ರೂಪಾಯಿಗಳಿಗೆ ಏರಿಸಲು,

(ಆ) ದಿನಾಂಕ 31.05.2001 ರೊಳಗೆ 31.03.2000 ವರೆಗಿನ ಸಾಲುಗಳ ತೆರಿಗೆ ಬಾಕಿಗೆ ಸಂಬಂಧಪಟ್ಟಂತೆ, ಬಾಕಿ ಇರುವ ತೆರಿಗೆಯ ಪೂರ್ಣ ಮೊತ್ತ ಹಾಗೂ ಅದರ ಮೇಲಿನ ಬಡ್ಡಿ ಮತ್ತು ದಂಡಗಳ ಶೇಕಡ 10ರಷ್ಟರ ಮೊತ್ತವನ್ನು ಪಾವತಿ ಮಾಡಿದಲ್ಲಿ, ತೆರಿಗೆ ಬಾಕಿಯ ಮೇಲೆ ಪಾವತಿ ಮಾಡಬೇಕಾದ ಯಾ ವಿಧಿಸಬಹುದಾದ ಉಳಿದ ಶೇಕಡ 90 ರಷ್ಟರ ಬಡ್ಡಿ ಮತ್ತು ದಂಡಗಳನ್ನು ಮನ್ನಾ ಮಾಡಲು ನಾನು ಪ್ರಸ್ತಾವಿಸುತ್ತೇನೆ.

167. ರಾಜಸ್ವದ ಸಂಗ್ರಹಣೆಯನ್ನು ಹೆಚ್ಚಿಸುವುದು ನಮ್ಮ ಗುರಿಯಾಗಿದ್ದರೂ ಅವಶ್ಯವಿದ್ದಲ್ಲಿ ಸೂಕ್ತ ತೆರಿಗೆ ಪರಿಹಾರ ಮತ್ತು ರಿಯಾಯಿತಿಗಳನ್ನು ನೀಡುವ ಮೂಲಕ ವಾಣಿಜ್ಯ ಮತ್ತು ಕೈಗಾರಿಕೆಯ ವೃದ್ಧಿಗೆ ನಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ವಾಣಿಜ್ಯ ಮತ್ತು ಕೈಗಾರಿಕೆ ಸಂಘಗಳು ಹಲವಾರು ತೆರಿಗೆ ಇಳಿತ ಮತ್ತು ವಿನಾಯಿತಿಗಳನ್ನು ಕೋರಿರುತ್ತವೆ. ನಾನು ಮುಂದೆ ಹೇಳಿದ ಪರಿಹಾರ ಮತ್ತು ರಿಯಾಯಿತಿಗಳನ್ನು ನೀಡಲು ಪ್ರಸ್ತಾವಿಸುತ್ತೇನೆ.

ವಿನಾಯಿತಿ

168. (ಅ) ಪರಿಹಾರ ಸೌಹಾರ್ದ ವಸ್ತುಗಳಾದ ಕೈಯಿಂದ ಮಾಡಿದ ಕಾಗದ ಮತ್ತು ಅದರ ಉತ್ಪನ್ನಗಳ ಬಳಕೆಯನ್ನು ಉತ್ತೇಜಿಸಲು ಅವುಗಳ ಮೇಲಿನ ತೆರಿಗೆಯನ್ನು,

(ಆ) ರಾಜ್ಯದಲ್ಲಿ ಇನ್ನೂ ಹೆಚ್ಚಿನ ಆಭರಣ ತಯಾರಿಕಾ ಘಟಕಗಳ ಸ್ಥಾಪನೆಯನ್ನು ಉತ್ತೇಜಿಸಲು ಆಮದು ರಫ್ತು ಕಾರ್ಯನೀತಿಯಡಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅಧಿಕೃತವಾಗಿ ನಾಮನಿರ್ದೇಶನಗೊಂಡ ಎಲ್ಲಾ ಸಂಸ್ಥೆಗಳು ಆಭರಣಗಳ ರಫ್ತುಗಾರರಿಗೆ ಮಾರಾಟ ಮಾಡುವ ಚಿನ್ನದ ಗಟ್ಟಿಗಳ ಮೇಲಿನ ತೆರಿಗೆಯನ್ನು,

(ಇ) ದುಬಾರಿ ಔಷಧಿಗಳ ಮೇಲೆ ಜೀವಿಸಿರುವ ರೋಗಿಗಳಿಗೆ ಪರಿಹಾರ ಕ್ರಮವಾಗಿ ಏಡ್ಸ್ ಮತ್ತು ಕ್ಯಾನ್ಸರ್ ರೋಗಗಳ ಚಿಕಿತ್ಸೆಯಲ್ಲಿ ಉಪಯೋಗಿಸುವ ಔಷಧಿಗಳ ಮೇಲಿನ ತೆರಿಗೆಯನ್ನು,

(ಈ) ತೆರಿಗೆ ಬಾಧ್ಯತೆ ಅನಿಶ್ಚಿತತೆಯಿಂದಾಗಿ ತೆರಿಗೆ ಪಾವತಿ ಮಾಡದಿರುವ ವ್ಯಾಪಾರಿ ವೃಂದಕ್ಕೆ ಪರಿಹಾರ ಕ್ರಮವಾಗಿ 01.04.1986 ರಿಂದ 31.03.1994 ರವರೆಗಿನ ಅವಧಿಯಲ್ಲಿ ರಾಗಿ ಹಿಟ್ಟಿನ ಮೇಲಿನ ತೆರಿಗೆಯನ್ನು,

(ಉ) 2000-2001ನೇ ಸಾಲಿಗೆ ಕಂಪ್ಯೂಟರ್ ಸಾಫ್ಟ್‌ವೇರ್‌ನ ಲೀಸಿಂಗ್ ವಹಿವಾಟಿನ ಮೇಲಿನ ತೆರಿಗೆಯನ್ನು,

(ಊ) ಅರ್ತ್ ಮೂವಿಂಗ್ ಮೆಷಿನರಿಗಳ ಮೇಲಿನ ವಹಿವಾಟು ತೆರಿಗೆಯನ್ನು, ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ತೆರಿಗೆ ಇಳಿತ

169. (ಅ) ಎಲ್ಲಾ ವಿಧವಾದ ದೂರವಾಣಿ ಸಲಕರಣೆಗಳ ಮತ್ತು ಬಿಡಿ ಭಾಗಗಳ ಮೇಲಿನ ತೆರಿಗೆಯನ್ನು ಶೇಕಡ 12 ರಿಂದ 4 ಕ್ಕೆ ಇಳಿಸಲು,

(ಆ) ಸ್ಥಳೀಯ ಪ್ಲೈವುಡ್ ಮತ್ತು ಬ್ಲಾಕ್ ಬೋರ್ಡ್ ತಯಾರಕರು ಖರೀದಿಸುವ ಮರಮುಟ್ಟುಗಳನ್ನು ಹೊರತುಪಡಿಸಿ ಇತರೆ ಕಟ್ಟಿಗೆಗಳ ಮೇಲಿನ ತೆರಿಗೆಯನ್ನು ಶೇಕಡ 10 ರಿಂದ 4 ಕ್ಕೆ ಇಳಿಸಲು,

(ಇ) 15 ಲಕ್ಷ ರೂಪಾಯಿಗಳ ವರೆಗಿನ ವಾರ್ಷಿಕ ವಹಿವಾಟಿರುವ ಬೇಕರಿಗಳು ತಯಾರಿಸುವ ಬಿಸ್ಕತ್ತು, ಕೇಕುಗಳು ಮತ್ತು ಇತರೆ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಶೇಕಡ 4 ಕ್ಕೆ ಇಳಿಸಲು,

(ಈ) ಎಲ್.ಪಿ.ಜಿ / ಸಿ.ಎನ್.ಜಿ ಆಟೋಮೊಬೈಲ್ ಕನ್ವರ್ಷನ್ ಕಿಟ್‌ಗಳ ಮೇಲಿನ ತೆರಿಗೆಯನ್ನು ಶೇಕಡ 4 ಕ್ಕೆ ಇಳಿಸಲು,

ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಕ್ರಮಗಳು :

170. ನೆರೆ ರಾಜ್ಯಗಳಿಗೆ ಹೋಲಿಸಿದಲ್ಲಿ ನಮ್ಮ ರಾಜ್ಯದಲ್ಲಿ ಕೆಲವು ಸರಕುಗಳ / ವಹಿವಾಟುಗಳ ಮೇಲಿನ ಹೆಚ್ಚಿನ ತೆರಿಗೆಯಿಂದಾಗಿ ವ್ಯಾಪಾರ ಪಲ್ಲಟವಾಗುತ್ತದೆ ಮತ್ತು ರಾಜ್ಯದ ಸಗಟು ಗ್ರಾಹಕರು ಕಡಿಮೆ ದರದ ಕೇಂದ್ರ ಮಾರಾಟ ತೆರಿಗೆಯೊಂದಿಗೆ ಅಂತರರಾಜ್ಯ ಖರೀದಿಯ ಮೂಲಕ ತಮ್ಮ ಅವಶ್ಯಕತೆಗಳನ್ನು ನೀಗಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಸಗಟು ಖರೀದಿದಾರರನ್ನು ನಮ್ಮ ಸ್ಥಳೀಯ ಮಾರುಕಟ್ಟೆಗೆ ಆಕರ್ಷಿಸಲು,

(ಅ) ಭಾರತೀಯ ರೈಲ್ವೆಗೆ ಮಾರಾಟ ಮಾಡುವ ಡೀಸೆಲ್ ಮೇಲಿನ ತೆರಿಗೆಯನ್ನು ಶೇಕಡ 8 ರಿಂದ 4 ಕ್ಕೆ ಇಳಿಸಲು ಮತ್ತು ಶೇಕಡ 4ರ ಪ್ರವೇಶ ತೆರಿಗೆಯನ್ನು ಮುಂದುವರಿಸಲು,

(ಆ) ಮಂಗಳೂರು ಬಂದರಿಗೆ ಬಂದು ವಿದೇಶಗಳಿಗೆ ಹೋಗುವ ಹಡಗುಗಳು ತಮಗೆ ಬೇಕಾದ ಫರ್ನೇಸ್ ಆಯಿಲ್ ನಮ್ಮಲ್ಲಿಗೆ ಖರೀದಿಸುವಂತೆ ಮಾಡಲು ಅದರ ಮೇಲಿನ ತೆರಿಗೆಯನ್ನು ವಿನಾಯಿತಿಸಲು ಹಾಗೂ ಶೇಕಡ 4 ರ ಪ್ರವೇಶ ತೆರಿಗೆಯಿಂದ ಅಧಿಕ ಆದಾಯವನ್ನು ಪಡೆಯಲು,

(ಇ) ರಾಜ್ಯದಿಂದ ತೆರಿಗೆ ಮುಕ್ತ ಸರಕು ವರ್ಗಾವಣೆ ಬದಲಾಗಿ ತೆರಿಗೆಯುಕ್ತ ಅಂತರರಾಜ್ಯ ಮಾರಾಟವನ್ನು ಉತ್ತೇಜಿಸುವ ಸಲುವಾಗಿ, ಕಲರ್ ಟಿವಿಗಳ, ಗ್ಯಾಸ್ ಟೇಬಲ್‌ಗಳ, ಕುಕಿಂಗ್ ರೇಂಜ್‌ಗಳ ಮತ್ತು ಡಿವಿಡಿ ಪ್ಲೇಯರ್‌ಗಳ ಸಿ ನಮೂನೆ ವಿರುದ್ಧದ ಅಂತರರಾಜ್ಯ ಮಾರಾಟದ ಮೇಲಿನ ತೆರಿಗೆಯನ್ನು ಶೇಕಡ 4 ರಿಂದ ಶೇಕಡ 2 ಕ್ಕೆ ಇಳಿಸಲು,

ನಾನು ಪ್ರಸ್ತಾವಿಸುತ್ತೇನೆ.

171. ಪ್ರಸಕ್ತ ಲಾಟರಿ ಟಿಕೆಟ್ಟುಗಳ ಮೇಲೆ ವಹಿವಾಟಿನ ಆಧಾರದಲ್ಲಿ ವಿಧಿಸಲಾಗುತ್ತಿರುವ ತೆರಿಗೆ ವ್ಯವಸ್ಥೆಗೆ ಹೋಲಿಸಿದಲ್ಲಿ, ಜಾರಿ ಮಾಡಲು ಸರಳ ಮತ್ತು ಸುಲಭವಿರುವ ತೆರಿಗೆ ರಾಜಿ ಸೌಲಭ್ಯವನ್ನು ಲಾಟರಿ ಟಿಕೆಟ್ ವ್ಯಾಪಾರಿಗಳಿಗೆ ನಾನು ನೀಡಲು ಪ್ರಸ್ತಾವಿಸುತ್ತೇನೆ. ರಾಜಿ ಸೌಲಭ್ಯದ ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.

172. (ಅ) ಸ್ಟಾರ್ ಹೋಟೆಲ್‌ಗಳು ತಮ್ಮ ಆವರಣದ ಹೊರಗೆ ಮಾರಾಟ ಮಾಡುವ ಆಹಾರ ವಸ್ತುಗಳಿಗೆ ಸಂಬಂಧಿಸಿದ,

(ಆ) ಪ್ರಸ್ತುತ ನಿಗದಿ ಮಾಡಿರುವ ಉಪಸಾಧನಗಳನ್ನು ಹೊಂದಿರುವ ಕಂಪ್ಯೂಟರ್‌ಗಳಿಗೆ ಸಂಬಂಧಿಸಿದ,

(ಇ) ಹೊರದೇಶದಿಂದ ಆಮದಾದ ಸಕ್ಕರೆ, ಬಟ್ಟೆ ತಂಬಾಕು ಮತ್ತು ತಂಬಾಕು ಪದಾರ್ಥಗಳಿಗೆ ಸಂಬಂಧಿಸಿದ,

(ಈ) ಚಿನ್ನ ಮತ್ತು ಬೆಳ್ಳಿ ಅಲ್ಲದೆ ಇತರೆ ಘನ ಲೋಹಗಳಿಂದ ಮಾಡಿದ ಆಭರಣಗಳಿಗೆ ಸಂಬಂಧಿಸಿದ,

ನಮೂದುಗಳನ್ನು ಈಗಿರುವ ಅನಿಶ್ಚಿತತೆಯನ್ನು ನಿರ್ಮೂಲನ ಮಾಡುವ ಸಲುವಾಗಿ ತಿದ್ದುಪಡಿ ಮಾಡಲು ನಾನು ಪ್ರಸ್ತಾವಿಸುತ್ತೇನೆ,

173. ವಹಿವಾಟಿನ ಮಿತಿಯನ್ನು ರದ್ದುಪಡಿಸಿ ಸ್ಟಾರ್ ಹೋಟೆಲ್‌ಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಹೋಟೆಲುಗಳಿಗೆ ಶೇಕಡ 4 ರ ಸಮಾನ ದರದ ರಾಜಿ ತೆರಿಗೆ ಸೌಲಭ್ಯವನ್ನು ನೀಡಲು ನಾನು ಪ್ರಸ್ತಾವಿಸುತ್ತೇನೆ. ಆದರೆ ತಮ್ಮ ಹೋಟೆಲುಗಳ ಆವರಣದಲ್ಲಿ ತಾವೇ ಅಥವಾ ಇತರರ ಮೂಲಕ ಮದ್ಯಪಾನೀಯ ಸರಬರಾಜು ಮಾಡುವ ಹೋಟೆಲುದಾರರು ತೆರಿಗೆ ರಾಜಿ ಸೌಲಭ್ಯಕ್ಕೆ ಅರ್ಹರಾಗಿರುವುದಿಲ್ಲ.

ತೆರಿಗೆ ಕಾಯ್ದೆಯಲ್ಲಿ ಪರಿಷ್ಕರಣೆ

174. (ಅ) ಮುಂಗಡ ತೆರಿಗೆ ಮತ್ತು ವಿಧಿಸಿದ ತೆರಿಗೆ ಪಾವತಿ ಮಾಡುವಲ್ಲಿ ಆಗುವ ವಿಳಂಬ ಮತ್ತು ತೆರಿಗೆ ವಂಚನೆ ಬಗ್ಗೆ ಇರುವ ಬಡ್ಡಿ ಮತ್ತು ದಂಡದ ಉಪಬಂಧಗಳನ್ನು ತಿದ್ದುಪಡಿ ಮಾಡಲು,

(ಆ) ತೆರಿಗೆ ಬಾಕಿ ಬಗ್ಗೆ ಪಾವತಿ ಮಾಡಲಾದ ಭಾಗಶಃ ಪಾವತಿಯನ್ನು ಬಡ್ಡಿಗೆ ಮೊದಲು ಹೊಂದಿಸಲು,

(ಇ) ಸರಕು ಸಾಗಣೆದಾರರು ನೋಂದಣಿ ಪಡೆಯಲು ಹಾಗೂ ತಾವು ಸಾಗಾಟ ಮಾಡಿದ ಸರಕುಗಳ ವಿವರಗಳನ್ನು ಸಲ್ಲಿಸುವಂತೆ ಮಾಡಲು,

(ಈ) ಸಾಗಣೆದಾರರ ಗೋಡೌನ್‌ಗಳ ಉಸ್ತುವಾರಿದಾರರು ಅಸಹಕಾರ ನೀಡಿದಾಗ ಅವುಗಳನ್ನು ತೆರೆಯುವಂತೆ ಮಾಡುವ ಮತ್ತು ಬೀಗಮುದ್ರೆ ಹಾಕುವ ಅಧಿಕಾರವನ್ನು ಅಧಿಕಾರಿಗಳಿಗೆ ನೀಡಲು,

(ಉ) ಸರಕು ಸಾಗಣೆಯಲ್ಲಿ ತೆರಿಗೆ ವಂಚಿಸಲು ಪ್ರಯತ್ನ ಮಾಡಿದ ಪ್ರಕರಣಗಳಲ್ಲಿ ವಿಧಿಸುವ ದಂಡಗಳನ್ನು ಏರಿಸಲು,

(ಊ) ಸಣ್ಣ ವ್ಯಾಪಾರಿಗಳ ಮನವಿಗಳ ಶೀಘ್ರ ವಿಲೇವಾರಿಗೆ ಉಪ ಆಯುಕ್ತರು (ಮನವಿಗಳು) ಇವರ ಹುದ್ದೆಗಳನ್ನು ಪುನಃ ಜಾರಿಗೆ ತಲು,

(ಋ) ಕಂಪನಿಗಳಿಗೆ ಪ್ರತ್ಯೇಕ ನೋಂದಣಿ ಮತ್ತು ಕರನಿರ್ಧರಣೆ ಸೌಲಭ್ಯವನ್ನು ಹಿಂತೆಗೆದುಕೊಳ್ಳಲು,

(ೠ) ಪ್ರಥಮ ಮನವಿ ಅಧಿಕಾರಿಗಳ ಮತ್ತು ಪುನರೀಕ್ಷಣಾ ಅಧಿಕಾರಿಗಳ ರಿಮಾಂಡ್ ಅಧಿಕಾರವನ್ನು ಹಿಂತೆಗೆದುಕೊಳ್ಳಲು ಹಾಗೂ ತಡೆಯಾಜ್ಞೆ ನೀಡಿದ ಮನವಿಗಳ ವಿಲೇವಾರಿಗೆ 4 ತಿಂಗಳ ಸಮಯ ನಿಗದಿ ಮಾಡಲು,

(ಎ) ಉಪರ ಆಯುಕ್ತರು ಮತ್ತು ಆಯುಕ್ತರ ಪುನರೀಕ್ಷಣಾ ಅಧಿಕಾರದಲ್ಲಿರುವ ಅನಿಶ್ಚತೆಯನ್ನು ಹೋಗಲಾಡಿಸಲು ಸಂಬಂಧಪಟ್ಟ ಉಪಬಂಧಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಹಾಗೂ ಆಯುಕ್ತರು ಪುನರೀಕ್ಷಣಾ ವ್ಯವಹರಣೆ ವಿಲೇವಾರಿಗೆ ಇರುವ ಕಾಲಮಿತಿಯನ್ನು ತೆಗೆದುಹಾಕಲು,

(ಏ) ಕಾಫೀ ಸಿಪ್ಪೆಸುಲಿಯುವ ಘಟಕಗಳಿಗೆ ನೋಂದಣಿಯನ್ನು ಕಡ್ಡಾಯ ಮಾಡಲು,

(ಐ) 10 ಲಕ್ಷಗಳಿಗಿಂತ ಹೆಚ್ಚಿಗೆ ಬಾಕಿ ಇರುವ ಬಾಕಿದಾರರ ಪ್ರಕರಣಗಳಲ್ಲಿ ಸಾಧಾರಣಾ ಕಾರವಾಸವನ್ನು ಕಡ್ಡಾಯ ಮಾಡಲು,

(ಒ) ನಿಯಮಗಳಲ್ಲಿ ವಾಣಿಜ್ಯ ಆವರಣಗಳ ಶೋಧನೆ ಮತ್ತು ಅನುಮಾನಾಸ್ಪದ ಲೆಕ್ಕಪುಸ್ತಕಗಳ ಅಭಿಗ್ರಹಣಾ ಕ್ರಮಗಳಲ್ಲಿ ಸಮಾನತೆಯನ್ನು ನಿಯಮಗಳಲ್ಲಿ ನಿಗದಿ ಮಾಡಲು,

(ಓ) ಒಂದು ಆವರಣಕ್ಕೆ ಒಂದೇ ನೋಂದಣಿ ನೀಡುವಂತೆ ನಿರ್ಬಂಧ ಹಾಕಲು ಅವಕಾಶವಾಗುವಂತೆ ಸಂಬಂಧಪಟ್ಟ ನಿಯಮಗಳನ್ನು ತಿದ್ದುಪಡಿ ಮಾಡಲು,

(ಔ) ಗುತ್ತಿಗೆದಾರರು ತೆರಿಗೆ ರಾಜಿ ಸೌಲಭ್ಯ ಪಡೆಯಲು ನೀಡಬೇಕಾದ ಅರ್ಜಿಯ ಸಮಯವನ್ನು 120 ದಿನಗಳಿಗೆ ಏರಿಸಲು,

(ಅಂ) ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆಗಳ ಬಗ್ಗೆ ಒಂದೇ ಸಂಯುಕ್ತ ಮಾಸಿಕ ಪಟ್ಟಿ ಮತ್ತು ವಾರ್ಷಿಕ ನಮೂನೆಗಳನ್ನು ಸಲ್ಲಿಸುವ ಸೌಲಭ್ಯ ನೀಡಲು,

ನಾನು ಪ್ರಸ್ತಾವಿಸುತ್ತೇನೆ.

ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು :

ತೆರಿಗೆ ದರಗಳಲ್ಲಿ ಏರಿಕೆ

175. ನಮ್ಮ ಸರ್ಕಾರವು ಕೈಗೊಳ್ಳಲಿರುವ ಹಲವಾರು ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯವಾದ ಹೆಚ್ಚುವರಿ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಂಡು ಹಾಗೂ

ನಮ್ಮ ನೆರೆ ರಾಜ್ಯಗಳಲ್ಲಿ ಜಾರಿಯಲ್ಲಿರುವ ತೆರಿಗೆ ದರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನಾನು ಕೆಲವು ವಸ್ತುಗಳ ಮೇಲಿನ ತೆರಿಗೆ ದರಗಳನ್ನು ಹೆಚ್ಚಿಸಲು ಪ್ರಸ್ತಾವಿಸುತ್ತೇನೆ. ಅಂತಹ ವಸ್ತುಗಳ ಮತ್ತು ತೆರಿಗೆ ದರಗಳ ವಿವರಗಳನ್ನು ಅನುಬಂಧ 3 ರಲ್ಲಿ ಒದಗಿಸಲಾಗಿದೆ.

176. ಪ್ರಸಕ್ತ ತೆರಿಗೆ ವಿನಾಯಿತಿ ಹೊಂದಿರುವ ಕೆಲವು ವಸ್ತುಗಳ ಮತ್ತು ವಹಿವಾಟುಗಳ ಮೇಲೆ ಕೂಡ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ. ಅಂತಹ ವಸ್ತುಗಳ ಮತ್ತು ವಹಿವಾಟುಗಳ ಹಾಗೂ ತೆರಿಗೆ ದರಗಳ ವಿವರಗಳನ್ನು ಅನುಬಂಧ 4 ರಲ್ಲಿ ಒದಗಿಸಲಾಗಿದೆ.

ಅಧಿಸೂಚನೆಗಳ ಪುನರ್ವಿಮರ್ಶೆ :

177. ಹಲವಾರು ವಸ್ತುಗಳು ಮತ್ತು ವಹಿವಾಟುಗಳ ಮೇಲೆ, ಅಂದಿನ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಅಧಿಸೂಚನೆಗಳ ಮೂಲಕ ಹಲವಾರು ತೆರಿಗೆ ಮತ್ತು ವಹಿವಾಟು ತೆರಿಗೆ ರಿಯಾಯಿತಿ ಹಾಗೂ ವಿನಾಯಿತಿಗಳನ್ನು ನೀಡಲಾಗಿದೆ. ಹಾಲಿ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಪುನರ್ವಿಮರ್ಶಿಸಿ, ಅಗತ್ಯವಾದ ರಿಯಾಯಿತಿ ಮತ್ತು ವಿನಾಯಿತಿಗಳನ್ನು ಮುಂದುವರೆಸಲು ಮತ್ತು ಮಿಕ್ಕವುಗಳನ್ನು ಹಿಂತೆಗೆದುಕೊಳ್ಳಲು ನಾನು ಪ್ರಸ್ತಾವಿಸುತ್ತೇನೆ. ಮುಂದುವರೆದು ತೆರಿಗೆ ದರಗಳನ್ನು ಪಾರದರ್ಶಕವಾಗಿರುವಂತೆ ಮಾಡಲು ಅಧಿಸೂಚನೆಗಳಲ್ಲಿರುವ ಬಹುತೇಕ ತೆರಿಗೆ ಕಡಿತಗಳನ್ನು ತೆರಿಗೆ ಅನುಸೂಚಿಯಲ್ಲಿಯೇ ಅಳವಡಿಸಲಾಗುವುದು.

ಪ್ರವೇಶ ತೆರಿಗೆ :

ರಿಯಾಯಿತಿ

178. ಸಕ್ಕರೆ ಮೇಲಿನ ತೆರಿಗೆಯನ್ನು ಶೇಕಡ 2 ರಿಂದ ಶೇಕಡ 1 ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಕ್ರಮಗಳು

179. ಗುಟ್ಕಾ ಮೇಲಿನ ತೆರಿಗೆಯ ಬಗ್ಗೆ ಇರುವ ಕೆಲವು ಶಂಕೆಗಳನ್ನು ದೂರ ಮಾಡಲು ಸಂಬಂಧಪಟ್ಟ ಉಪಬಂಧಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

180. (ಅ) ಬಾಕಿ ತೆರಿಗೆಯನ್ನು ಕಂತುಗಳಲ್ಲಿ ಪಾವತಿ ಮಾಡುವ ಸೌಲಭ್ಯ ನೀಡಲು ಈಗಿರುವ ಆಯುಕ್ತರ ಅಧಿಕಾರಕ್ಕೆ ಸಂಬಂಧಪಟ್ಟಂತೆ ನಿಗದಿಮಾಡಿರುವ ಮೊತ್ತ ಮತ್ತು ಸಮಯವನ್ನು ಹೆಚ್ಚಿಸಲು,

(ಆ) ತೆರಿಗೆ ವಿನಾಯಿತಿ ಹೊಂದಿದ ವಸ್ತುಗಳನ್ನು ತಯಾರಿಸಲು ಉಪಯೋಗಿಸಿದ ಕಚ್ಚಾವಸ್ತುಗಳ ಮೇಲಿನ ತೆರಿಗೆ ಬಾಧ್ಯತೆಯ ಅನಿಶ್ಚತೆಯನ್ನು ತೆಗೆದುಹಾಕಲು ಸಂಬಂಧಪಟ್ಟ ನಮೂದನ್ನು ತಿದ್ದುಪಡಿ ಮಾಡಲು,

ನಾನು ಪ್ರಸ್ತಾವಿಸುತ್ತೇನೆ.

ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು :

181. (ಅ) ಕಚ್ಚಾವಸ್ತುಗಳನ್ನಾಗಿ ಉಪಯೋಗಿಸುವ ಬಟ್ಟೆಗಳನ್ನು ಹೊರತುಪಡಿಸಿ ಮಿಕ್ಕ ಬಟ್ಟೆಗಳ ಮೇಲಿನ ತೆರಿಗೆಯನ್ನು ಶೇಕಡ 1 ರಿಂದ ಶೇಕಡ 2 ಕ್ಕೆ ಏರಿಸಲು,

(ಆ) ಬೀಡಿಗಳ ಮೇಲೆ ಶೇಕಡ 2ರ ತೆರಿಗೆ ವಿಧಿಸಲು,

(ಇ) ಇತರೆ ಪ್ಯಾಕಿಂಗ್ ವಸ್ತುಗಳಿಗೆ ಬಾಧ್ಯವಿರುವ ಶೇಕಡ 2 ರ ತೆರಿಗೆಯನ್ನು ಮಿಕ್ಕ ಸಾಮ್ಯ ಪ್ಯಾಕಿಂಗ್ ವಸ್ತುಗಳ ಮೇಲೆ ವಿಧಿಸಲು,

ನಾನು ಪ್ರಸ್ತಾವಿಸುತ್ತೇನೆ.

ವಿಲಾಸ ತೆರಿಗೆ

ಸುಧಾರಣಾ ಕ್ರಮಗಳು

182. (ಅ) ವಿಲಾಸ ತೆರಿಗೆ ಅಧಿಕಾರಿಗಳನ್ನು ಮತ್ತು ಅವರ ಅಧಿಕಾರ ವ್ಯಾಪ್ತಿಯನ್ನು ನಿರೂಪಿಸಲು ಸಂಬಂಧಪಟ್ಟ ಉಪಬಂಧಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು,

(ಆ) ಆಡಳಿತವನ್ನು ಮತ್ತು ತೆರಿಗೆ ವಸೂಲಿಯನ್ನು ಬಲಪಡಿಸಲು ಕಲ್ಯಾಣ ಮಂಟಪಗಳು ತಾವು ಸಾಮಾನ್ಯವಾಗಿ ವಸೂಲಿ ಮಾಡುವ ಶುಲ್ಕಗಳನ್ನು ಘೋಷಿಸಲು, ಅವರ ಲೆಕ್ಕಪುಸ್ತಕಗಳ ಶೋಧನೆ, ಇತ್ಯಾದಿಗಳನ್ನು ನಿಗದಿಮಾಡಲು,

ನಾನು ಪ್ರಸ್ತಾವಿಸುತ್ತೇನೆ.

183. ಗುಟ್ಕಾ ಮೇಲಿನ ತೆರಿಗೆಯ ಬಗ್ಗೆ ಇರುವ ಕೆಲವು ಶಂಕೆಗಳನ್ನು ದೂರ ಮಾಡಲು ಸಂಬಂಧಪಟ್ಟ ಉಪಬಂಧಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು :

184. (ಅ) ರೇಷ್ಮೆ ಬಟ್ಟೆಗಳ ಮೇಲೆ ಶೇಕಡ 2 ರ ತೆರಿಗೆ ವಿಧಿಸಲು,

(ಆ) ಹೊರ ದೇಶಗಳಿಂದ ಆಮದಾದ ಎಲೆಕ್ಟ್ರಾನಿಕ್ ವಸ್ತುಗಳ ಮೇಲೆ ಶೇಕಡ 12 ರ ತೆರಿಗೆ ವಿಧಿಸಲು ಹಾಗೂ ಅದನ್ನು ಆ ವಸ್ತುಗಳ ಮೇಲೆ ತೆರಬೇಕಾದ ಮಾರಾಟ ತೆರಿಗೆಗೆ ಹೊಂದಿಸಿಕೊಳ್ಳುವ (ಸೆಟ್‌ಆಫ್) ವ್ಯವಸ್ಥೆ ಅಳವಡಿಸಲು, ನಾನು ಪ್ರಸ್ತಾವಿಸುತ್ತೇನೆ.

ಮನರಂಜನಾ ತೆರಿಗೆ

185. ಪ್ರಸ್ತುತ ಕನ್ನಡ, ಕೊಡವ, ತುಳು ಮತ್ತು ಬಂಜಾರ ಚಲನ ಚಿತ್ರಗಳ ಮೇಲೆ ಯಾವುದೇ ತೆರಿಗೆ ವಿಧಿಸಲಾಗುತ್ತಿಲ್ಲ ಮತ್ತು ಇತರೆ ಚಲನ ಚಿತ್ರಗಳ ಮೇಲೆ ಶೇಕಡ 80 ರ ತೆರಿಗೆ ವಿಧಿಸಲಾಗುತ್ತಿದೆ. ತೆರಿಗೆ ವಿನಾಯಿತಿಯನ್ನು ನೀಡಿದಲ್ಲಿ ಅದರಿಂದ ಕಡಿಮೆಯಾಗುವ

ಪ್ರವೇಶ ಶುಲ್ಕಗಳ ಕಾರಣ ಚಿತ್ರವೀಕ್ಷಕರು ಕನ್ನಡ ಚಲನ ಚಿತ್ರಗಳಿಗೆ ಪ್ರೋತ್ಸಾಹ ನೀಡುವರೆನ್ನುವ ಆಶಯ ಹೊಂದಲಾಗಿತ್ತು. ಆದರೆ ಕೆಲವು ಚಲನ ಚಿತ್ರ ಮಂದಿರಗಳು ತೆರಿಗೆ ವಿನಾಯಿತಿಯ ಲಾಭವನ್ನು ವೀಕ್ಷಕರಿಗೆ ನೀಡದಿರುವುದನ್ನು ಗಮನಿಸಿ ನಾನು ಕಳವಳಗೊಂಡಿದ್ದೇನೆ. ಕೆಲವು ಪ್ರಕರಣಗಳಲ್ಲಿ ಕನ್ನಡೇತರ ಚಲನ ಚಿತ್ರಗಳ ಪ್ರದರ್ಶನದ ಮೇಲೆ ತೆರಬೇಕಾದ ತೆರಿಗೆಯನ್ನು ಕೂಡ ಕನ್ನಡ ಚಲನಚಿತ್ರಗಳೆಂದಾಗಿ ಘೋಷಿಸಿ ವಂಚಿಸುತ್ತಿರುವುದನ್ನು ಗಮನಿಸಲಾಗಿದೆ. ಇದರಲ್ಲಿ ಗಣನೀಯ ಬದಲಾವಣೆ ಕಂಡುಬರದೆ ಇದ್ದಲ್ಲಿ ಈ ರೀತಿಯ ತೆರಿಗೆ ವಿನಾಯಿತಿಯನ್ನು ಮುಂದುವರಿಸಿಕೊಂಡು ಹೋಗಬೇಕೆ ಎನ್ನುವ ಬಗ್ಗೆ ಚರ್ಚೆ ಪ್ರಾರಂಭಿಸಲು ನಾನು ಉದ್ದೇಶಿಸಿದ್ದೇನೆ.

ರಿಯಾಯಿತಿ

186. ಮಾನ್ಯತೆ ಪಡೆದ ಕ್ರೀಡೆಗಳು 1997 ರಿಂದ ತೆರಿಗೆಗೆ ಒಳಪಟ್ಟಿವೆ. ಕ್ರೀಡೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 1.4.2000 ದ ರಿಂದಲೇ ಪ್ರತಿ ಪ್ರಕರಣದ ಆಧಾರದ ಮೇಲೆ ಶೇಕಡ 100 ರ ತೆರಿಗೆ ವಿನಾಯಿತಿ ನೀಡುವ ಅಧಿಕಾರವನ್ನು ಸರ್ಕಾರಕ್ಕೆ ನೀಡಲು ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಕ್ರಮಗಳು :

187. (ಅ) ಪ್ರಾಯೋಜಿತ ಯೋಜನೆಗಳು ಇತ್ಯಾದಿಗಳ ಮೂಲಕ ಮನರಂಜನೆಗಳ ಮೇಲೆ ತೆರಿಗೆ ಸೋರಿಕೆಯನ್ನು ತಡೆಯಲು ಸೂಕ್ತ ತಿದ್ದುಪಡಿ ಮಾಡಲು,

(ಆ) ದಂಡು ಪ್ರದೇಶಗಳಲ್ಲಿರುವ ಚಲನ ಚಿತ್ರ ಮಂದಿರಗಳು ನೆರೆಯ ಪ್ರದೇಶಗಳಲ್ಲಿರುವ ಚಲನ ಚಿತ್ರ ಮಂದಿರಗಳಿಗೆ ನೀಡುತ್ತಿರುವ ಅನುಚಿತ ಸ್ಪರ್ಧೆಯನ್ನು ಹೋಗಲಾಡಿಸಲು,

(ಇ) ಚಲನ ಚಿತ್ರ ವಿತರಕರು ನೋಂದಣಿ ಪಡೆದು, ತಾವು ಪ್ರದರ್ಶನಕ್ಕೆ ನೀಡಿದ ಚಲನ ಚಿತ್ರಗಳ ವಿವರಗಳನ್ನು ನಿಯತವಾಗಿ ಸಲ್ಲಿಸುವಂತೆ ಮಾಡಲು,

(ಈ) ಮನರಂಜನೆ ತೆರಿಗೆ ಕಾಯ್ದೆಯಡಿಯಲ್ಲಿ ನಿಗದಿ ಮಾಡಲಾದ ದಂಡ ಮತ್ತು ರಾಜಿ ಮೊತ್ತಗಳನ್ನು 5000 ರೂಪಾಯಿಗಳಿಗೆ ಹಾಗೂ 10,000 ರೂಪಾಯಿಗಳಿಗೆ ಏರಿಸಲು,

(ಉ) ಮನರಂಜನೆ ಮೇಲಿನ ತೆರಿಗೆಯ ವಂಚನೆಯನ್ನು ತಡೆಯಲು ಆವರಣಗಳ ಮಾಲೀಕರು ತಮ್ಮ ಆವರಣಗಳಲ್ಲಿ ನಡೆದ ಮನರಂಜನೆಗಳ ವಿವರಣೆಗಳನ್ನು ಒದಗಿಸಲು ಮತ್ತು ಮನರಂಜನೆ ತೆರಿಗೆ ಬಾಕಿ ಬಗ್ಗೆ ಅವರನ್ನು ಜಂಟಿಯಾಗಿ ಜವಾಬ್ದಾರರನ್ನಾಗಿ ಮಾಡಲು,

ನಾನು ಪ್ರಸ್ತಾವಿಸುತ್ತೇನೆ.

ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು :

188. (ಅ). ವೀಡಿಯೋ ಪಾರ್ಲರ್‌ಗಳು ತೆರಬೇಕಾದ ಮಾಸಿಕ ರಾಜಿ ಮೊತ್ತವನ್ನು 2500 ರೂಪಾಯಿಗಳಿಂದ 5000 ರೂಪಾಯಿಗಳಿಗೆ ಏರಿಸಲು,

(ಆ) ಕೇಬಲ್ ಟೀವಿ ನಡೆಸುವವರು ತೆರಬೇಕಾದ ರಾಜಿ ಮೊತ್ತಗಳನ್ನು ಅನುಬಂಧ 5 ರಲ್ಲಿ ತೋರಿಸಿರುವ ಮೊತ್ತಗಳಿಗೆ ಏರಿಸಲು,

ನಾನು ಪ್ರಸ್ತಾವಿಸುತ್ತೇನೆ.

ವೃತ್ತಿ ತೆರಿಗೆ :

189. (ಅ). ರಾಜ್ಯದ ರಕ್ಷಣಾ ಸೇವೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಯೋಧ ಉದ್ಯೋಗಿಗಳಿಗೆ ನೀಡಿದ ತೆರಿಗೆ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲು,

(ಆ) ಸಂಬಳ ಪಡೆಯುವ ಉದ್ಯೋಗಿಗಳ ಬಗ್ಗೆ ಇರುವ ಸ್ಲಾಬ್‌ಗಳ ಸಂಖ್ಯೆಗಳನ್ನು ಆರರಿಂದ ಐದಕ್ಕೆ ಇಳಿಸಲು ಪ್ರಸಕ್ತ ಕೊನೆಯ ಎರಡು ತೆರಿಗೆ ಸ್ಲಾಬ್‌ಗಳನ್ನು ಒಂದು ಮಾಡಿ, ಮಾಸಿಕ 15 ಸಾವಿರ ಮತ್ತು ಅದಕ್ಕೂ ಹೆಚ್ಚಿನ ಸಂಬಳ ಪಡೆಯುವ ಉದ್ಯೋಗಿಗಳಿಗೆ ಪ್ರತಿ ತಿಂಗಳು 200 ರೂಪಾಯಿಗಳ ತೆರಿಗೆ ವಿಧಿಸಲು,

(ಇ) ಅನುಬಂಧ 6 ರಲ್ಲಿ ತೋರಿಸಿರುವ ಕೆಲವು ಹೊಸ ಉದ್ಯೋಗಿಗಳಿಗೆ ಪ್ರಸ್ತಾವಿಸಿದಂತೆ ತೆರಿಗೆ ವಿಧಿಸಲು,

ನಾನು ಪ್ರಸ್ತಾವಿಸುತ್ತೇನೆ.

ಕೃಷಿ ವರಮಾನ ತೆರಿಗೆ :

190. ತೆರಿಗೆ ಪಾವತಿಯ ವಿಳಂಬಕ್ಕೆ ತೆರಬೇಕಾದ ಬಡ್ಡಿ ಬಗ್ಗೆ ಇರುವ ಶಂಕೆಯನ್ನು ತೆಗೆದುಹಾಕಲು ಸಂಬಂಧಪಟ್ಟ ಉಪಬಂಧವನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಹಾಗೂ ಪ್ರಸಕ್ತ ಶೇಕಡ ಒಂದೂವರೆ ಮತ್ತು ಶೇಕಡ ಎರಡರ ಬಡ್ಡಿ ದರಗಳ ಬದಲಾಗಿ ಶೇಕಡ ಎರಡರ ಸಮಾನ ಬಡ್ಡಿ ದರವನ್ನು ನಿಗದಿಮಾಡಲು ನಾನು ಪ್ರಸ್ತಾವಿಸುತ್ತೇನೆ.

ತತ್ಸಂಬಂಧ ತಿದ್ದುಪಡಿಗಳು

191. ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ತಿದ್ದುಪಡಿಗಳ ಜೊತೆ ಇತರೆ ಪರಿಷ್ಕರಣಾ ತಿದ್ದುಪಡಿಗಳೊಂದಿಗೆ ಸೂಕ್ತ ವಿಧೇಯಕಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

ಅಬಕಾರಿ

192. 1999-2000 ವರ್ಷದಲ್ಲಿ ಅಬಕಾರಿ ರಾಜಸ್ವದ ಸಂಗ್ರಹವು ರೂ. 1230 ಕೋಟಿಗಳಾಗಿದ್ದು, 1998-99ನೇ ವರ್ಷಕ್ಕಿಂತ ಇದು 215 ಕೋಟಿ ಅಧಿಕವಾಗಿರುತ್ತದೆ. 2000-01ನೇ ವರ್ಷದಲ್ಲಿ ನಾವು 1500 ಕೋಟಿ ರೂ.ಗಳ ಸಂಗ್ರಹವನ್ನು ದಾಟಲು ನಿರ್ಧಾರ ಮಾಡಿದ್ದೇವೆ. ಇದು ಕಳೆದ ವರ್ಷಕ್ಕಿಂತ ಸುಮಾರು 300 ಕೋಟಿ ರೂ.ಗಳಿಗೂ ಅಧಿಕವಾಗಿರುತ್ತದೆ. ಕಟ್ಟುನಿಟ್ಟಾದ ಆಡಳಿತ ಹಾಗೂ ಅಬಕಾರಿ ಕಾನೂನಿನ ಜಾರಿಯಿಂದ ಇದನ್ನು ಸಾಧಿಸಲು ಸಾಧ್ಯವಾಗಿರುತ್ತದೆ.

193. ನಾವು ಫೆಬ್ರವರಿ 2001 ರಿಂದ ಮದ್ಯದ ಮೇಲೆ ವಿಧಿಸುವ ವಾಣಿಜ್ಯ ತೆರಿಗೆಯನ್ನು ಅಬಕಾರಿ ಶುಲ್ಕದೊಡನೆ ವಿಲೀನಗೊಳಿಸಿದ್ದೇವೆ. ಇದರಿಂದ ಅಧಿಕ ರಾಜಸ್ವವು ಬರುವ ನಿರೀಕ್ಷೆಯಿದೆ. ಆದ ಕಾರಣ ಅಬಕಾರಿ ರಾಜಸ್ವಕ್ಕೆ ಸಂಬಂಧಿಸಿದಂತೆ ಅಧಿಕ ಸಂಪನ್ಮೂಲ ಕ್ರಮಗಳನ್ನು ಸರಳಗೊಳಿಸುವುದಕ್ಕಾಗಿ ಮತ್ತು ಸುವ್ಯವಸ್ಥೆಗೊಳಿಸುವುದಕ್ಕಾಗಿ ಸೀಮಿತಗೊಳಿಸಲಾಗಿದೆ.

194. ಲೈಸೆನ್ಸ್ ಇಲ್ಲದೆ ಡಾಬಾಗಳು, ಹೋಟೆಲ್‌ಗಳು ಮತ್ತು ಇತರ ಮನರಂಜನಾ ಸ್ಥಳಗಳಲ್ಲಿ ಕಾನೂನು ಬಾಹಿರವಾಗಿ ಮದ್ಯವನ್ನು ಮಾರಾಟ ಮಾಡುವುದರಿಂದ ಸಾಮಾಜಿಕ ಉಪದ್ರವ ಹಾಗೂ ಸರ್ಕಾರದ ರಾಜಸ್ವಕ್ಕೆ ನಷ್ಟವಾಗುವುದರಿಂದ, ಅಂತಹ ಲೈಸೆನ್ಸ್ ಇಲ್ಲದ ಸ್ಥಳಗಳಲ್ಲಿ ಮದ್ಯದ ಮಾರಾಟ ಹಾಗೂ ಸೇವನೆಯನ್ನು ಅಬಕಾರಿ ಅಧಿನಿಯಮದ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನಾಗಿ ಪರಿಗಣಿಸಲು ಪ್ರಸ್ತಾವವನ್ನು ಮಂಡಿಸುತ್ತೇನೆ.

195. ಮದ್ಯದ ರಫ್ತನ್ನು ವ್ಯವಸ್ಥೆಗೊಳಿಸುವ ಬಗ್ಗೆ ಹಾಗೂ ಸಮಯಕ್ಕೆ ಸರಿಯಾಗಿ ಅಬಕಾರಿ ಸತ್ಯಾಪನಾ ಪತ್ರಗಳನ್ನು ಪಡೆಯುವುದಕ್ಕಾಗಿ, ಪರ್ಮಿಟ್ಟಿನಲ್ಲಿರುವ ಮದ್ಯಕ್ಕೆ ಸ್ಥಳೀಯವಾಗಿ ವಿಧಿಸುವ ಅಬಕಾರಿ ಶುಲ್ಕದ ಪ್ರಮಾಣಕ್ಕೆ ಅನುಗುಣವಾದ ಬ್ಯಾಂಕ್ ಗ್ಯಾರಂಟಿ ಅಥವಾ ಇತರ ನಗದು ಭದ್ರತೆಯನ್ನು ಸಲ್ಲಿಸಿದ ಪಕ್ಷದಲ್ಲಿ ಮಾತ್ರ ಮದ್ಯವನ್ನು ರಫ್ತು ಮಾಡಲು ಅವಕಾಶವನ್ನು ನೀಡಲಾಗುತ್ತದೆ.

196. ಮದ್ಯದ ಗುಣಮಟ್ಟವನ್ನು ಪರಿಶೀಲಿಸುವುದಕ್ಕಾಗಿ, ಪ್ರತಿಯೊಂದು ಮದ್ಯ ತಯಾರಿಕಾ ಘಟಕದಲ್ಲಿ, ಅರ್ಹತೆಯನ್ನು ಹೊಂದಿದಂತಹ ಸಿಬ್ಬಂದಿಯ ನಿರ್ವಹಣೆಯಲ್ಲಿ ರಾಸಾಯನಿಕ ಪ್ರಯೋಗಾಲಯವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವಿಸುತ್ತೇನೆ. ನಕಲಿ ಹಾಗೂ ಕಲಬೆರಕೆ ಮದ್ಯದ ತಯಾರಿಕೆ ಮತ್ತು ಮಾರಾಟವನ್ನು ತಡೆಗಟ್ಟುವ ಉದ್ದೇಶದಿಂದ, ಜನವರಿ 2002 ರಿಂದ ಮದ್ಯದ ಸೀಸೆಗಳ ಮೇಲೆ 'ಹ್ಯಾಲೋಗ್ರಾಮ್'ನ್ನು ಹಚ್ಚುವುದನ್ನು ಕಡ್ಡಾಯಗೊಳಿಸುವುದಾಗಿ ಪ್ರಸ್ತಾವಿಸುತ್ತೇನೆ.

197. ಸೇಂದಿಯ ಬಗ್ಗೆ ಮರು ಪರಿಶೀಲನೆ ಮಾಡಲಾಗಿದ್ದು, ಹಂತ ಹಂತವಾಗಿ ಸೇಂದಿಯ ಮಾರಾಟವನ್ನು ನಿಲ್ಲಿಸುವ ನಿಟ್ಟಿನಲ್ಲಿ ಮೊದಲ ಹಂತವಾಗಿ ಗುಲ್ಬರ್ಗ ಹಾಗೂ ರಾಯಚೂರು ಜಿಲ್ಲೆಗಳಲ್ಲಿ 2001-02ನೇ ಅಬಕಾರಿ ವರ್ಷದಿಂದ ಸೇಂದಿಯ ಮಾರಾಟವನ್ನು ನಿಲ್ಲಿಸಲು ಪ್ರಸ್ತಾವಿಸುತ್ತೇನೆ.

198. ಇತ್ತೀಚಿನ ದಿನಗಳಲ್ಲಿ ಕಟುವಾದ ಮಾದಕ ಪಾನೀಯಗಳ ಬಳಕೆಯನ್ನು ಪ್ರೋತ್ಸಾಹಿಸುತ್ತಿಲ್ಲ. ಬೀರು ಮತ್ತು ವೈನ್‌ಗಳ ಬಗ್ಗೆ, ನಾನು ಹೊಸ ನೀತಿಯನ್ನು ಪ್ರಸ್ತಾವಿಸುತ್ತಿದ್ದೇನೆ. ಬೀರ್‌ನ ಮಾರಾಟ ಹಾಗೂ ಹಂಚಿಕೆಯನ್ನು ಪ್ರತ್ಯೇಕವಾಗಿ ಮಾಡುವ ಬಗ್ಗೆ ಕೇವಲ ಬೀರ್ ಅನ್ನು ಸಗಟಾಗಿ ಹಾಗೂ ಚಿಲ್ಲರೆಯಾಗಿ ಮಾರಾಟ ಮಾಡುವ ಬಗ್ಗೆ ಈಗ ಪ್ರಸ್ತುತ ಚಾಲ್ತಿಯಲ್ಲಿರುವ ಪದ್ಧತಿಯ ಜೊತೆಗೆ ಸಗಟು ಹಾಗೂ ಚಿಲ್ಲರೆ ಮಾರಾಟದ ಲೈಸೆನ್ಸ್‌ಗಳನ್ನು ನೀಡಲಾಗುವುದು. ಕೇವಲ ಬೀರ್ ಅನ್ನು ಮಾರಾಟ ಮಾಡಲು 30 ಸಗಟು ಲೈಸೆನ್ಸ್‌ಗಳನ್ನು ವಾರ್ಷಿಕ 3 ಲಕ್ಷಗಳ ಲೈಸೆನ್ಸ್ ಶುಲ್ಕವನ್ನು ಪಡೆದು ನೀಡಲಾಗುವುದು. ಸ್ಥಳದಲ್ಲಿ ಕುಡಿಯುವುದಕ್ಕೆ ಅವಕಾಶವಿಲ್ಲದ ಕೇವಲ ಚಿಲ್ಲರೆಯಾಗಿ ಬೀರ್ ಅನ್ನು ಸೀಸೆಗಳಲ್ಲಿ ಮಾತ್ರ ಮಾರಾಟ ಮಾಡಲು 300 ಲೈಸೆನ್ಸುಗಳನ್ನು ನೀಡಲಾಗುವುದು. ಈ ಲೈಸೆನ್ಸುಗಳನ್ನು ಕೇವಲ ಡಿಪಾರ್ಟ್‌ಮೆಂಟಲ್ ಸ್ಟೋರುಗಳು ಮತ್ತು ಕಿರಾಣಿ ಅಂಗಡಿಗಳಿಗೆ, ನಿಯಮಿಸಲ್ಪಟ್ಟ ವಹಿವಾಟನ್ನು ಮತ್ತು ಇತರ ನಿರ್ದಿಷ್ಟ ಗುಣಮಟ್ಟವನ್ನು ಹೊಂದಿದ್ದ ಪಕ್ಷದಲ್ಲಿ ಮಾತ್ರ ನೀಡಲಾಗುವುದು. ಈ ಅಂಗಡಿಗಳಿಗೆ ಬೆಂಗಳೂರು ನಗರಕ್ಕೆ ಒಂದು ಲಕ್ಷ ರೂ.ಗಳು, ಜಿಲ್ಲಾ ಕೇಂದ್ರ ಸ್ಥಳಗಳಿಗೆ 75 ಸಾವಿರ ರೂ.ಗಳು ಹಾಗೂ ಇತರ ಸ್ಥಳಗಳಿಗೆ 50 ಸಾವಿರ ರೂ.ಗಳ ವಾರ್ಷಿಕ ಲೈಸೆನ್ಸ್ ಶುಲ್ಕವನ್ನು ವಿಧಿಸಲಾಗುವುದು. ಬೀರ್‌ನ ಮೇಲೆ ವಿಧಿಸಲಾಗುತ್ತಿರುವ ಲೀಟರ್ ಫೀಯನ್ನು ಸಹ ಮನ್ನಾ ಮಾಡಲು ಪ್ರಸ್ತಾವಿಸುತ್ತೇನೆ.

199. ಅದೇ ರೀತಿ ವೈನಿನ ಬಗ್ಗೆ ಸಹ 50 ಹೊಸ ಲೈಸೆನ್ಸ್‌ಗಳನ್ನು, ಸ್ಥಳದಲ್ಲಿ ಕುಡಿಯುವುದಕ್ಕೆ ಅವಕಾಶವಿಲ್ಲದೆ ಕೇವಲ ಸೀಸೆಗಳಲ್ಲಿ ಮಾರಾಟ ಮಾಡುವುದಕ್ಕಾಗಿ ವಾರ್ಷಿಕ 15 ಸಾವಿರ ರೂ.ಗಳ ಲೈಸೆನ್ಸ್ ಶುಲ್ಕವನ್ನು ಪಡೆದು ನೀಡಲಾಗುವುದು. ಈ ಲೈಸೆನ್ಸ್‌ಗಳನ್ನು ಸಹ, ಕೇವಲ ಡಿಪಾರ್ಟ್‌ಮೆಂಟಲ್ ಸ್ಟೋರುಗಳಿಗೆ ಮತ್ತು ಕಿರಾಣಿ ಅಂಗಡಿಗಳಿಗೆ ನಿಯಮಿಸಲ್ಪಟ್ಟ ಅರ್ಹತೆಯನ್ನು ಹೊಂದಿರುವ ಪಕ್ಷದಲ್ಲಿ ನೀಡಲಾಗುವುದು.

200. ಭಾರತ ಸರ್ಕಾರವು ಮದ್ಯದ ಆಮದು ಮೇಲಿನ ಪರಿಮಾಣ ನಿರ್ಬಂಧವನ್ನು ತೆಗೆದುಹಾಕಿರುವ ಹಿನ್ನೆಲೆಯಲ್ಲಿ, ಹೊರ ದೇಶದಿಂದ ಆಮದು ಮಾಡಲ್ಪಟ್ಟ ಮದ್ಯ ಹಾಗೂ ಸ್ಥಳೀಯವಾಗಿ ತಯಾರಿಸಲ್ಪಟ್ಟ ಮದ್ಯಗಳು ಮಾರುಕಟ್ಟೆಯಲ್ಲಿ ಸಮ ಮಟ್ಟದಲ್ಲಿರುವಂತಹ ಅವಕಾಶವನ್ನು ಕಲ್ಪಿಸುವುದು ಅತ್ಯವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರದ ರಾಜಸ್ವ ಹಾಗೂ ಕಾನೂನಿನ ಜಾರಿಯ ದೃಷ್ಟಿಯಿಂದ, ಹೊರದೇಶಗಳಲ್ಲಿ ತಯಾರಾಗಿ, ರಾಜ್ಯಕ್ಕೆ ಆಮದಾಗುವ ಎಲ್ಲಾ ಮದ್ಯವನ್ನು ಮೆ: ಎಂ.ಎಸ್.ಐ.ಎಲ್. ಕಂಪನಿಗೆ ಡಿಸ್ಟ್ರಿಬ್ಯೂಟರ್ ಲೈಸೆನ್ಸ್‌ನ್ನು ವಾರ್ಷಿಕ 10 ಲಕ್ಷ ರೂ.ಗಳ ಲೈಸೆನ್ಸ್ ಶುಲ್ಕವನ್ನು ವಿಧಿಸಿ ನೀಡಲಾಗುವುದು. ಸಗಟು ಮದ್ಯ ಮಾರಾಟಗಾರರು ಮತ್ತು ಇತರೆ ಚಿಲ್ಲರೆ ಮದ್ಯ ಮಾರಾಟಗಾರರು, ತಾವು ಹೊಂದಿರುವ ಲೈಸೆನ್ಸಿನ ಮೇಲೆ ವಿಧಿಸುವ ಲೈಸೆನ್ಸ್ ಶುಲ್ಕದ ಶೇಕಡ 25 ನ್ನು ಅಧಿಕ ಲೈಸೆನ್ಸು ಶುಲ್ಕವಾಗಿ ನೀಡಿದಲ್ಲಿ ಅಂತಹವರಿಗೆ ವಿದೇಶಿ ಮದ್ಯವನ್ನು ಮಾರಾಟ ಮಾಡಲು ಅವಕಾಶವನ್ನು ನೀಡಲಾಗುವುದು. ವಿದೇಶೀ ಮದ್ಯದ ಲೇಬಲ್ಲುಗಳ ಅನುಮೋದನೆಗಾಗಿ ಒಂದು ಲೇಬಲ್ಲಿಗೆ ವಾರ್ಷಿಕ ಒಂದು ಲಕ್ಷ ರೂ.ಗಳ ಶುಲ್ಕವನ್ನು ವಿಧಿಸಲಾಗುವುದು. ಸದ್ಯದಲ್ಲಿರುವ ಶೇಕಡ 66 ವಿಶೇಷ ಶುಲ್ಕವನ್ನು ಮುಂದುವರಿಸುತ್ತಿದ್ದು, ಕೇಂದ್ರ ಸರ್ಕಾವು ವಿಧಿಸುವ ಕೌಂಟರ್ ವೇಲಿಂಗ್ ಡ್ಯೂಟಿಯನ್ನು ಪರಿಶೀಲಿಸಿದ ನಂತರ,

ಅವಶ್ಯವಿದ್ದಲ್ಲಿ ಇದರಲ್ಲಿ ಬದಲಾವಣೆಯನ್ನು ಮಾಡಲಾಗುವುದು. ಈ ಹಿನ್ನೆಲೆಯಲ್ಲಿ ಕರ್ನಾಟಕ ಅಬಕಾರಿ ಅಧಿನಿಯಮ, 1965ಕ್ಕೆ ತಿದ್ದುಪಡಿಯನ್ನು, ಅವಶ್ಯಕವಿದ್ದಲ್ಲಿ, ತರಲಾಗುವುದು.

201. ಡಿಸ್ಟ್ರಿಬ್ಯೂಟರ್ ಲೈಸೆನ್ಸಿಗೆ (ಮೆ: ಎಂ.ಎಸ್.ಐ.ಎಲ್) ವಿಧಿಸುತ್ತಿರುವ ಲೈಸೆನ್ಸು ಶುಲ್ಕವನ್ನು ಸುವ್ಯವಸ್ಥೆಗೊಳಿಸುವ ದೃಷ್ಟಿಯಿಂದ ಅವರು ಎಷ್ಟೇ ಡಿಸ್ಟಿಲರಿಗಳೊಂದಿಗೆ ವ್ಯವಹಾರ ಮಾಡಲಿ ಅಥವಾ ರಾಜ್ಯದಲ್ಲಿ ಎಷ್ಟೇ ಡಿಪೋಗಳನ್ನು ಸ್ಥಾಪಿಸಲಿ, ಒಟ್ಟಿನಲ್ಲಿ ವಾರ್ಷಿಕ 75 ಲಕ್ಷ ರೂ.ಗಳ ಲೈಸೆನ್ಸು ಶುಲ್ಕವನ್ನು ವಿಧಿಸಲು ಪ್ರಸ್ತಾವಿಸುತ್ತೇನೆ.

202. ಫೆನ್ನಿ ಹಾಗೂ ಭಾರತೀಯ ಮದ್ಯಗಳ ಲೈಸೆನ್ಸು ಶುಲ್ಕ ಮತ್ತು ಅಧಿಕ ಅಬಕಾರಿ ಶುಲ್ಕಗಳ ಮಧ್ಯೆ ಇರುವ ತಾರತಮ್ಯವನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಅನುಬಂಧ VII ನಲ್ಲಿ ತೋರಿಸಿರುವಂತೆ ಲೈಸೆನ್ಸು ಶುಲ್ಕ ಹಾಗೂ ಅಧಿಕ ಅಬಕಾರಿ ಶುಲ್ಕವನ್ನು ಹೆಚ್ಚಿಸಲು ಪ್ರಸ್ತಾವಿಸುತ್ತೇನೆ.

203. ಕ್ಲಬ್ (ವಸತಿ ಸೌಕರ್ಯವಿಲ್ಲದ) (ಸಿವಿಲ್-4) ಗಳ ಮೇಲಿನ ಲೈಸೆನ್ಸು ಶುಲ್ಕವನ್ನು ಸುವ್ಯವಸ್ಥೆಯಗೊಳಿಸುವುದಕ್ಕಾಗಿ, ಲೈಸೆನ್ಸು ಶುಲ್ಕವನ್ನು ಸದ್ಯದಲ್ಲಿರುವ ವಾರ್ಷಿಕ 60 ಸಾವಿರ ರೂ.ಗಳಿಂದ ಒಂದು ಲಕ್ಷ ರೂ.ಗಳಿಗೆ ಏರಿಸಲಾಗಿದೆ. ಅದರಂತೆಯೇ ಐ.ಟಿ.ಡಿ.ಸಿ. ಮತ್ತು ಕೆ.ಎಸ್.ಟಿ.ಡಿ.ಸಿ. ಗಳು ನಡೆಸುವ ಹೋಟೆಲ್‌ಗಳ ಮೇಲಿನ ಲೈಸೆನ್ಸು ಶುಲ್ಕವನ್ನು ವಾರ್ಷಿಕ ಎಂಟು ಸಾವಿರ ರೂ.ಗಳಿಂದ ಇಪ್ಪತ್ನಾಲ್ಕು ಸಾವಿರ ರೂ.ಗಳಿಗೆ ಏರಿಸಲಾಗಿದೆ.

204. ಲೇಬಲ್‌ಗಳ ಅನುಮೋದನಾ ಶುಲ್ಕ, ರಕ್ಷಣಾ ದಳಕ್ಕೆ ಸರಬರಾಜು ಮಾಡುವ ಮದ್ಯದ ಮೇಲೆ ವಿಧಿಸುವ ಅಬಕಾರಿ ಶುಲ್ಕ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ನ ಮೇಲೆ ವಿಧಿಸುವ ಶುಲ್ಕವನ್ನು ಅನುಬಂಧ VII ನಲ್ಲಿ ಇರುವಂತೆ ಹೆಚ್ಚಿಸಲು ಪ್ರಸ್ತಾವಿಸುತ್ತೇನೆ. ನ್ಯೂಟ್ರಲ್ ಸ್ಪಿರಿಟ್ ಅನ್ನು ಅದೇ ಡಿಸ್ಟಿಲರಿಯಲ್ಲಿ ತಯಾರಿಸುವುದಕ್ಕಾಗಿ ನೀಡುವ ಮದ್ಯಸಾರದ ಮೇಲೆ ನೀಡಿಕೆ ಶುಲ್ಕವನ್ನು ವಿಧಿಸುವುದಿಲ್ಲವೆಂದು ಸ್ಪಷ್ಟೀಕರಿಸಲಾಗುತ್ತಿದೆ.

ನೋಂದಣಿ ಮತ್ತು ಮುದ್ರಾಂಕ

205. ನಾನು ಕರ್ನಾಟಕ ಮುದ್ರಾಂಕ ಕಾಯ್ದೆ, 1957ಕ್ಕೆ ಕೆಳಕಂಡ ಬದಲಾವಣೆಗಳನ್ನು ಪ್ರಸ್ತಾವಿಸುತ್ತೇನೆ.

206. ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯ ಸಮಾವೇಶದಲ್ಲಿ ತೀರ್ಮಾನಿಸಿದಂತೆ ಸ್ವೀಕೃತಿ (ಅಕ್ನಾಲೆಡ್ಜ್‌ಮೆಂಟ್ ಆಫ್ ಡೆಟ್) ಪತ್ರದ ಬಾಬ್ತು ಅಡ್ವೊಲೊರೆಮ್ ಆಧಾರದ ಮೇಲೆ ಶೇಕಡ 0.2 ಮುದ್ರಾಂಕ ಶುಲ್ಕ ಇದ್ದು ಇದಕ್ಕೆ ಗರಿಷ್ಠ ಮಿತಿಯಾಗಿ ರೂ.1000/- ಮುದ್ರಾಂಕ ಶುಲ್ಕವನ್ನು ನಿಗದಿಪಡಿಸಲು ಪ್ರಸ್ತಾಪಿಸಲಾಗಿದೆ. ಇದರ ಉದ್ದೇಶ ಸಾಲಗಾರನ ಮೇಲಿನ ತೆರಿಗೆ ಹೊರೆಯನ್ನು ಕಡಿಮೆ ಮಾಡುವುದಾಗಿದೆ.

207. ಡೆವಲಪರ್‌ಗಳಿಗೆ ಅಧಿಕಾರ ಕೊಡುವಂತಹ ಒಪ್ಪಂದ ಪತ್ರಗಳಿಗೆ ಶೇಕಡ 4 ಮುದ್ರಾಂಕ ಶುಲ್ಕವಿದ್ದು ಇದಕ್ಕೆ ರೂ.4 ಲಕ್ಷಗಳ ಗರಿಷ್ಟ ಮಿತಿ ಇದೆ. ಇಂತಹ ಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ಶೇಕಡ 5ಕ್ಕೆ ನಿಗದಿಪಡಿಸಿ ಮೇಲ್ಕಂಡ ಗರಿಷ್ಠ ಮಿತಿಯನ್ನು ಕೈಬಿಡಲು ಉದ್ದೇಶಿಸಲಾಗಿದೆ.

208. ಹಕ್ಕು ಪತ್ರಗಳ ಠೇವಣಾತಿ ಪತ್ರ (ಈಕ್ವಿಟಬಲ್ ಆಧಾರ) ಗಳಿಗೆ ಸಾಲದ ಮೊತ್ತದ ಮೇಲೆ ಶೇಕಡ 1 ರಂತೆ ಮುದ್ರಾಂಕ ಶುಲ್ಕ ಇದ್ದು ಸಾಲದ ವ್ಯವಸ್ಥೆಯನ್ನು ಸರಳಗೊಳಿಸಲು ಹಾಗೂ ಇಂತಹ ಐಚ್ಛಿಕವಾಗಿ ನೋಂದಣಿಯಾಗುವಂತಹ ಪತ್ರಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮೇಲ್ಕಂಡ ಪತ್ರಗಳಿಗೆ ಮುದ್ರಾಂಕ ಶುಲ್ಕಕ್ಕೆ ಗರಿಷ್ಠ ಮಿತಿಯನ್ನು ರೂ.50.000-00ಕ್ಕೆ ನಿಗಧಿಪಡಿಸುವುದರ ಜೊತೆಗೆ ನೋಂದಣಿ ಶುಲ್ಕವನ್ನು ಶೇಕಡ 0.5ಕ್ಕೆ ನಿಗಧಿಪಡಿಸಿ ಇದರ ಗರಿಷ್ಠ ಮಿತಿಯನ್ನು ರೂ.10,000-00 ನಿಗಧಿಪಡಿಸಲು ಉದ್ದೇಶಿಸಲಾಗಿದೆ.

209. ಕಂಪನಿಗಳನ್ನು ನೋಂದಾಯಿಸಲು ಮಾಡಬೇಕಾದ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪತ್ರಗಳಿಗೆ ಪ್ರಸ್ತುತ ಮುದ್ರಾಂಕ ಕಾಯಿದೆಯ ಅನುಚ್ಛೇದ 10 ರಂತೆ ಪ್ರತಿ ರೂ.5 ಲಕ್ಷಕ್ಕೆ ರೂ.1000/- ಮುದ್ರಾಂಕ ಶುಲ್ಕವಿದ್ದು ರಾಜ್ಯದಲ್ಲಿ ಕಂಪನಿಗಳ ನೋಂದಣಾವಣೆಗೆ ಪ್ರೋತ್ಸಾಹ ನೀಡುವ ಉದ್ದೇಶಕ್ಕಾಗಿ ಈ ಶುಲ್ಕವನ್ನು ಪ್ರತಿ ರೂ.10 ಲಕ್ಷಕ್ಕೆ ರೂ.500/- ರಂತೆ ನಿಗದಿಪಡಿಸಿ ಕಡಿಮೆ ಮಾಡಲಾಗಿದೆ.

210. ಕುಟುಂಬದ ಸದಸ್ಯರ ನಡುವೆ ಅಂದರೆ ಗಂಡ, ಹೆಂಡತಿ, ಮಗ, ಮಗಳು, ಸೊಸೆ ಮತ್ತು ಮೊಮ್ಮಕ್ಕಳು ಇತ್ಯಾದಿ, ಇವರುಗಳ ನಡುವೆ ಮಾಡಿಕೊಳ್ಳುವ ದಾನ, ಹಕ್ಕು ಬಿಡುಗಡೆ ಮತ್ತು ವ್ಯವಸ್ಥಾ ಪತ್ರಗಳಿಗೆ ಸ್ಲ್ಯಾಬ್ ಪದ್ಧತಿಯಲ್ಲಿ ಮುದ್ರಾಂಕ ಶುಲ್ಕವನ್ನು ಆಕರಿಸಲಾಗುತ್ತಿದೆ. ಸಾರ್ವಜನಿಕರು ಹೆಚ್ಚಿನ ಶುಲ್ಕದ ಕಾರಣಕ್ಕಾಗಿ ಇಂತಹ ಪತ್ರಗಳ ನೋಂದಣಿಯನ್ನು ಮಾಡಿಕೊಳ್ಳದೆ ತಪ್ಪಿಸುತ್ತಿರುವುದರಿಂದ, ಇಂತಹ ಪತ್ರಗಳಿಗೆ ನಿಗದಿತ ಮುದ್ರಾಂಕ ಶುಲ್ಕ ರೂ.1000/- ಆಕರಣೆ ಮಾಡಲು ಉದ್ದೇಶಿಸಲಾಗಿದೆ.

211. 30 ವರ್ಷಕ್ಕೆ ಮೇಲ್ಪಟ್ಟ ಸ್ಥಿರಾಸ್ತಿಯ ಗೇಣಿ ಪತ್ರಗಳಿಗೆ ಸ್ಥಿರಾಸ್ತಿಯ ಮಾರುಕಟ್ಟೆ ಬೆಲೆಯ ಮೇಲೆ ಅಥವಾ ಪ್ರೀಮಿಯಂ ಇವೆರಡರಲ್ಲಿ ಯಾವುದು ಅಧಿಕವೋ ಅದರ ಮೇಲೆ ಶೇಕಡ 5 ರಂತೆ ಮುದ್ರಾಂಕ ಶುಲ್ಕವನ್ನು ಆಕರಣೆ ಮಾಡಲಾಗುತ್ತಿದೆ. ಆದರೆ ಈ ಅವಕಾಶವನ್ನು ಕ್ರಯಪತ್ರ ಮಾಡುವುದಕ್ಕೆ ಬದಲಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ರಾಜಸ್ವದ ಸೋರಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಇಂತಹ ಗೇಣಿ ಪತ್ರಗಳಿಗೆ ಕ್ರಯಪತ್ರಗಳಿಗೆ ನೀಡಬೇಕಾದ ಮುದ್ರಾಂಕವನ್ನು ವಿಧಿಸಿದೆ.

212. ಮೇಲ್ಕಂಡ ಪ್ರಸ್ತಾವನೆಯ ವಿವರಗಳನ್ನು ಅನುಬಂಧ-VIII ರಲ್ಲಿ ವಿವರಿಸಲಾಗಿದೆ.

213. ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟ ಕಾರ್ಯಕಲಾಪಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಹಕಾರ ಸಂಘಗಳು ಅಥವಾ ಸಹಕಾರ ಸಂಘಗಳಿಗೆ ಬರೆದುಕೊಡುವ ಪತ್ರಗಳಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 38 ರಲ್ಲಿ ನೋಂದಣಿಯಿಂದ ವಿನಾಯಿತಿಯನ್ನು ನೀಡಲಾಗಿದೆ. ಕೆಲವು ಗೃಹ ನಿರ್ಮಾಣ ಸಹಕಾರ ಸಂಘಗಳು ಈ ಕಾಯ್ದೆಯ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಒಬ್ಬ ವ್ಯಕ್ತಿಯು ಇಂತಹ ಸಂಸ್ಥೆಯಿಂದ ಆಸ್ತಿಯನ್ನು ಕ್ರಯಕ್ಕೆ ಪಡೆದಾಗ ಕ್ರಯಕ್ಕೆ ಪಡೆದವನಿಗೆ ಹಕ್ಕು ಪತ್ರಗಳನ್ನು

ಕೊಡದೆ ಅಂತಹ ಸಂಸ್ಥೆಯ ಪಾಲುದಾರನನ್ನಾಗಿ ಮಾಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಅಧಿಕ ಮೊತ್ತದ ರಾಜಸ್ವ ನಷ್ಟ ಉಂಟಾಗುತ್ತಿದೆ. ಆದ್ದರಿಂದ ಸಹಕಾರ ಸಂಘಗಳ ಕಾಯಿದೆ, 1959ರ ಕಲಂ 38ನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಈ ತಿದ್ದುಪಡಿಯಿಂದ ನೋಂದಣಿ ಕಾಯಿದೆ 1908 ಕಲಂ 17 (1) ರಂತೆ ಇಂತಹ ಎಲ್ಲಾ ಪತ್ರಗಳನ್ನು ಕಡ್ಡಾಯವಾಗಿ ನೋಂದಣಿ ಮಾಡುವಂತೆ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ.

214. ಕೆಐಎಡಿಬಿ : ಕೆಎಸ್ಎಸ್ಐಡಿಸಿ : ಕೆಎಸ್ಐಐಡಿಸಿ : ಕೆಎಸ್ಐಡಿಸಿ ಮತ್ತು ಎಪಿಎಂಸಿ ಯಂತಹ ಸಂಸ್ಥೆಗಳು ದಿನಾಂಕ: 29-9-97ಕ್ಕೆ ಪೂರ್ವದಲ್ಲಿ ಬರೆದುಕೊಟ್ಟಿರುವ ದಸ್ತಾವೇಜುಗಳಿಗೆ ಮೌಲ್ಯದ ವ್ಯತ್ಯಾಸಕ್ಕೆ ತಗಲುವ ಮುದ್ರಾಂಕ ಮತ್ತು ನೋಂದಣಿ ಶುಲ್ಕದ ಮಿತಿಯನ್ನು ಶೇಕಡ 80 ರಷ್ಟು ಕಡಿಮೆ ಮಾಡಲು ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆಯು ಅಪಮೌಲ್ಯ ತನಿಖಾಧಿಕಾರಿಗಳ ಹಂತದಲ್ಲಿ ಬಾಕಿ ಇರುವ ಪ್ರಕರಣಗಳಿಗೆ ಅನ್ವಯಿಸುತ್ತದೆ. ಈ ಪ್ರಸ್ತಾವನೆಯನ್ನು ರಾಜ್ಯದ ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಪ್ರಸ್ತಾಪಿಸಿಲಾಗಿದ್ದು ಈ ರಿಯಾಯಿತಿಯನ್ನು ದಿನಾಂಕ: 1-4-2001 ರಿಂದ 30-6-2001 ರವರೆಗೆ ಜಾರಿಗೊಳಿಸಲು ಉದ್ದೇಶಿಸಿದೆ.

215. ಕಳೆದ ಸಾಲಿನ ಆಯವ್ಯಯದಲ್ಲಿ ದಿನಾಂಕ: 1-4-2000 ರಿಂದ 30-6-2000ರ ದವರೆಗೆ 30 ಶೇಕಡ ರಿಯಾಯಿತನಯ್ಯು ಮತ್ತು 1-7-2000 ರಿಂದ 30-9-2000 ರವರೆಗೆ 20 ಶೇಕಡ ರಿಯಾಯಿತಿಯನ್ನೂ 16-8-99 ಕ್ಕಿಂತ ಮುಂಚೆ ನೋಂದಾವಣೆಗೆ ಹಾಜರ್ಪಡಿಸಲ್ಪಟ್ಟು ಸ್ಥಿರಾಸ್ತಿಯ ಅಪಮೌಲ್ಯ ತನಿಖೆಗೆ ಒಳಪಟ್ಟಿರುವ ಪ್ರಕರಣಗಳಿಗೆ ನೀಡಲಾಗಿತ್ತು. ಈ ಉತ್ತೇಜನದಿಂದಾಗಿ ರೂ.105 ಕೋಟಿಗಳ ರಾಜಸ್ವ ಸಂಗ್ರಹವಾಗಿದ್ದು, ಒಳ್ಳೆಯ ಫಲಿತಾಂಶ ನೀಡಿರುವುದರಿಂದ, ಈಗ ಇದೇ ಯೋಜನೆಯನ್ನು 1-4-2001 ರಿಂದ 30-6-2001 ರವರೆಗೆ 30 ಶೇಕಡ ರಿಯಾಯಿತಿಯನ್ನು ಬಾಕಿ ಉಳಿದಿರುವ ಪ್ರಕರಣಗಳಿಗೆ ಅಂದರೆ 16-8-99 ರಂದು ಅಥವಾ ಆದಕ್ಕೆ ಮೊದಲು ಹಾಜರುಪಡಿಸಿದ ದಸ್ತಾವೇಜುಗಳಿಗೆ ಅನ್ವಯಿಸುವಂತೆ ಜಾರಿಗೆ ತರಲು ಉದ್ದೇಶಿಸಲಾಗಿದೆ.

216. ಗೇಣಿ ಮತ್ತು ಕ್ರಯ ಒಪ್ಪಂದ ಕರಾರು, ಹರಾಜು ಕ್ರಯ ಒಪ್ಪಂದದ ಮತ್ತು ನಂತರ ಮಾಡುವ ಕ್ರಯಪತ್ರಗಳಿಗೆ ಹಾಗೂ ಪರಭಾರೆ ದೃಢೀಕರಣ ಪತ್ರಗಳು ಇತ್ಯಾದಿ ಇವುಗಳಿಗೆ ತಗಲುವ ನೋಂದಣಿ ಶುಲ್ಕವನ್ನು ಅನುಬಂಧ-IX ರಲ್ಲಿ ಉದ್ದೇಶಿಸಿರುವಂತೆ ಸರಳಗೊಳಿಸಲಾಗಿದೆ.

217. ರಾಜಸ್ವವನ್ನು ಅಧಿಕ ಪ್ರಮಾಣದಲ್ಲಿ ಪಡೆಯುವ ಹಿನ್ನೆಲೆಯಲ್ಲಿ ಮಾಡುವ ಕಾಯಿದೆಯಲ್ಲಿನ ಬದಲಾವಣೆಗಳನ್ನು ಜಾರಿಗೊಳಿಸಲು ವಾಣಿಜ್ಯ ವಲಯ ಮತ್ತು ನೋಂದಣಿ ಇಲಾಖೆಗಳಲ್ಲಿ ಸಮನ್ವಯವನ್ನು ಇಟ್ಟುಕೊಳ್ಳಲು ಅನುಕೂಲವಾಗುವಂತೆ ಅವುಗಳನ್ನು ಜಾರಿಗೊಳಿಸಲು ಇಲಾಖೆಯಲ್ಲಿ ಜಾರಿ ಮತ್ತು ತನಿಖಾ ದಳವನ್ನು ಬಲಪಡಿಸಲು ಉದ್ದೇಶಿಸಲಾಗಿದೆ.

218. ಗೃಹ ನಿರ್ಮಾಣ ಸಹಕಾರ ಸಂಘಗಳ ವತಿಯಿಂದ ಬರೆದುಕೊಡುವ ಕ್ರಯಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ಕ್ರಯಪತ್ರದಲ್ಲಿ ಪಡೆದಿರುವ ಪ್ರತಿಫಲದ ಮೇಲೆ ಪಡೆಯಲಾಗುತ್ತಿದೆ.

ಇನ್ನು ಮುಂದೆ ಇಂತಹ ಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ಸ್ವತ್ತಿನ ಮಾರುಕಟ್ಟೆ ಬೆಲೆಯ ಮೇಲೆ ಆಕರಿಸಲು ಉದ್ದೇಶಿಸಲಾಗಿದೆ.

219. ಕರ್ನಾಟಕ ಮುದ್ರಾಂಕ (ಸಮಿತಿಗಳ ರಚನೆ ಇತರೆ) ನಿಯಮ 1992ರ ನಿಯಮ 3ರಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಯನ್ನು 3 ವರ್ಷಕ್ಕೆ ಒಂದು ಸಾರಿ ಪರಿಷ್ಕರಣೆ ಮಾಡಲು ಅವಕಾಶವಿದೆ. ಈ ಪರಿಷ್ಕರಣೆಯನ್ನು ಅವಶ್ಯಕತೆ ಕಂಡುಬಂದ ಸಂದರ್ಭದಲ್ಲಿ ಮಾಡಲು ಉದ್ದೇಶಿಸಲಾಗಿದೆ.

220. ಸಾಮಾನ್ಯ ಅಧಿಕಾರ ಪತ್ರಗಳ ನೋಂದಣಿಯ ನೋಂದಣಿ ಕಾಯ್ದೆ ಕಲಂ 17ರ ಪ್ರಕಾರ ಕಡ್ಡಾಯವಾಗಿರುವುದಿಲ್ಲ. ಇಂತಹ ಪತ್ರಗಳ ನೋಂದಣಿಯನ್ನು ಕಡ್ಡಾಯ ಮಾಡಲು ಸೂಕ್ತ ತಿದ್ದುಪಡಿ ತರಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಉದ್ದೇಶಿಲಾಗಿದೆ.

221. ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ ಕಲಂ 3ಬಿ ಯಡಿ ಕರ್ನಾಟಕ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತಕ್ಕಾಗಿ ನಿಧಿಯನ್ನು ಒದಗಿಸಲು ಲಿಖಿತ ಪತ್ರಗಳ ಮೇಲೆ ಆಕರಿಸುವ ಮುದ್ರಾಂಕ ಶುಲ್ಕದ ಮೊತ್ತದ ಮೇಲೆ ಶೇಕಡ 5ರ ದರದಂತೆ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ (ಕರ್ನಾಟಕ) ನಿಯಮಿತ ಮತ್ತು ಬೆಂಗಳೂರು ಸಮೂಹ ತ್ವರಿತ ಸಾಗಣೆ ಪದ್ಧತಿಗಳಿಗೆ ಹೆಚ್ಚುವರಿ ಶುಲ್ಕವನ್ನು 67 : 33 ರಂತೆ ಅನುಪಾತವಾಗಿ ಹಂಚಿಕೆ ಮಾಡಲನುವಾಗುವಂತೆ ಸದರಿ ಕಾಯಿದೆಯನ್ನು ತಿದ್ದುಪಡಿ ಮಾಡಲು ಉದ್ದೇಶಿಸಿದೆ. ವಿವರನ್ನು ಅನುಬಂಧ-X ರಲ್ಲಿ ನೀಡಿದೆ.

222. ರಾಜ್ಯದ ವಸತಿ ಇಲಾಖೆಯು ಇಂದಿರಾ ಅವಾಜ್ ಯೋಜನೆಯನ್ನು ಹೊರತುಪಡಿಸಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಇರುವ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗಾಗಿ ವಸತಿ ಸೌಲಭ್ಯವನ್ನು ಜಾರಿಗೊಳಿಸಲು ರಾಜೀವ್‌ಗಾಂಧಿ ವಸತಿ ನಿಗಮ ಎಂಬ ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಒಂದು ಕಂಪನಿಯನ್ನು ಸ್ಥಾಪಿಸಿದೆ. ಸರ್ಕಾರದ ಬಂಡವಾಳ ಹೂಡುವಿಕೆಯಿಂದ ಮತ್ತು ಹುಡ್ಕೊದಿಂದ ಸಾಲ ಪಡೆಯುವ ಮೂಲಕ ವಸತಿ ಸೌಲಭ್ಯವನ್ನು ಒದಗಿಸಲು ಕಂಪನಿಯು ಉದ್ದೇಶಿಸಿದೆ. ಹುಡ್ಕೊದಿಂದ ಪಡೆಯುವ ಸಾಲಕ್ಕಾಗಿ ಮತ್ತು ನಿಗಮಕ್ಕೆ ಬರೆದುಕೊಡುವ ಆಧಾರ ಪತ್ರಗಳಿಗೆ ಮುದ್ರಾಂಕ ಶುಲ್ಕದ ರಿಯಾಯಿತಿ ನೀಡಲು ಉದ್ದೇಶಿಸಿದೆ. (ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ ಕಲಂ 9 (1) ರಡಿ 2ನೇ ಪರಂತುಕವನ್ನು ಸೇರಿಸಲಾಗಿದೆ) ವಿವರವನ್ನು ಅನುಬಂಧ-X ರಲ್ಲಿ ನೀಡಿದೆ.

223. ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ಅನೇಕ ವರ್ಷಗಳಿಂದ ರಾಜ್ಯಕ್ಕೆ ಅಧಿಕ ರಾಜಸ್ವ ಗಳಿಕೆಯಲ್ಲಿ 3ನೇ ಸ್ಥಾನವನ್ನು ಪಡೆದಿದೆ. ಇಲಾಖೆಯು ಅಧಿಕ ಸಾರ್ವಜನಿಕ ಸಂಪರ್ಕ ಇವುಗಳಿಂದ ಸಾರ್ವಜನಿಕರಲ್ಲಿ ಸ್ನೇಹಭಾವ ಮೂಡಿಸುವಲ್ಲಿ ತನ್ನದೇ ಪಾಲನ್ನು ಹೊಂದಿದ್ದು, ಈ ಬಗ್ಗೆ ಇಲಾಖೆಗೆ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇದೆ. ಆದ್ದರಿಂದ ಸರ್ಕಾರವು ಇಲಾಖೆಯನ್ನು ಸಮರ್ಪಕವಾಗಿ ಬಲಪಡಿಸಲು ಅರ್ಥಪೂರ್ಣವಾದ ವಿಧಾನಗಳನ್ನು ಅನುಸರಿಸಲು ತೀರ್ಮಾನಿಸಿದೆ.

ಮೋಟಾರು ವಾಹನ ತೆರಿಗೆ

224. ಸಾರಿಗೆ ಇಲಾಖೆಯ ಆಡಳಿತದಲ್ಲಿ ಪಾರದರ್ಶಕತೆ, ಹೆಚ್ಚಿನ ಕಾರ್ಯಕ್ಷಮತೆಯೊಂದಿಗೆ ಸಾರ್ವಜನಿಕರ ಕೆಲಸ ಕಾರ್ಯ ಶೀಘ್ರವಾಗಿ ವಿಲೇವಾರಿ ಮಾಡುವ ದೃಷ್ಟಿಯಿಂದ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿ, ಡ್ರೈವಿಂಗ್ ಲೈಸೆನ್ಸ್, ವಾಹನ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ಗಳನ್ನು 'ಸ್ಮಾರ್ಟ್ ಆಪ್ಟಿಕ್ ಕಾರ್ಡ್' ಮೂಲಕ ವಿತರಿಸಲು ಬೂಟ್ ಪದ್ಧತಿಯ ಮೂಲಕ ಯೋಜನೆಯನ್ನು ಸರ್ಕಾರಕ್ಕೆ ಯಾವುದೇ ವೆಚ್ಚವಿಲ್ಲದೆ ಜಾರಿಗೆ ತರಲು ಪ್ರಸ್ತಾಪಿಸುತ್ತೇನೆ.

225. ದ್ವಿಚಕ್ರ ವಾಹನ, ಮೋಟಾರು ಕಾರು, ಜೀಪು, ನೆಲವಿಸ್ತೀರ್ಣ 5 ಚದರ ಮೀಟರ್‌ಗಳಿಗೆ ಮೀರದ ಅಮ್ನಿ ಬಸ್, ಖಾಸಗಿ ಸೇವಾ ವಾಹನ, ಕಂಪೆನಿ ಮಾಲೀಕತ್ವದ ಕಾರು ಮತ್ತು ವಿದೇಶದಿಂದ ಆಮದು ಮಾಡಿದ ಕಾರುಗಳಿಗೆ ನೋಂದಣಿ ಸಮಯದಲ್ಲಿ ವಾಹನದ ಮೌಲ್ಯದ ಮೇಲೆ ಶೇಕಡಾ 7 ರಂತೆ ತೆರಿಗೆ ವಿಧಿಸಲು ನಾನು ಪ್ರಸ್ತಾಪಿಸುತ್ತೇನೆ. ತೆರಿಗೆ ವಿನ್ಯಾಸವನ್ನು ಸಮನ್ವಯಗೊಳಿಸುವ ಮತ್ತು ಒಂದೇ ಸಮನಾದ ತೆರಿಗೆ ನೀತಿಯನ್ನು ಅನುಸರಿಸುವ ಉದ್ದೇಶಕ್ಕಾಗಿ ಈ ಬದಲಾವಣೆಯನ್ನು ತರಲಾಗುತ್ತಿದೆ.

226. ಮೋಟಾರು ವಾಹನ ಅಖಿಲ ಭಾರತ ಪರವಾನಿಗೆ ಸಾರಿಗೆ ಪ್ರವರ್ತಕರ ನಿಯಮದ ಯೋಜನೆಯ ಅಡಿಯಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ಹಿಂತೆಗೆದುಕೊಂಡು ತೆರಿಗೆ ವಿನ್ಯಾಸ ಸಮನ್ವಯ ಹಾಗೂ ಒಂದೇ ಸಮನಾದ ತೆರಿಗೆ ನೀತಿ ಅನುಸರಿಸುವ ಉದ್ದೇಶದಿಂದ ಪ್ರವಾಸಿ ವಾಹನಗಳಿಗೆ ಪ್ರತಿ ಆಸನಕ್ಕೆ ಪ್ರತಿ ತ್ರೈಮಾಸಿಕಕ್ಕೆ ರೂ.1400-00 ರಂತೆ ತೆರಿಗೆ ವಿಧಿಸಲು ಪ್ರಸ್ತಾಪಿಸಲಾಗಿದೆ; ಕ್ಯಾಂಪರ್ಸ್ ವಾಹನಗಳಿಗೆ ಈಗ ವಿಧಿಸುತ್ತಿರುವ ತೆರಿಗೆಯ ಸ್ವರೂಪಕ್ಕೆ ಬದಲಾಗಿ ನೂತನ ತೆರಿಗೆ ಸೂಚಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

227. ಕೊರೆಯುವ ಯಂತ್ರ (ಡ್ರಿಲಿಂಗ್ ರಿಗ್), ಸರಕು ಸಾಗಣೆ ವಾಹನಗಳ ತೆರಿಗೆಯನ್ನು ಹೆಚ್ಚಿಸಲು ಮತ್ತು ವಾಹನದ ನೋಂದಾಯಿತ ತೂಕದ ಹಂತಗಳನ್ನು ಸಮನ್ವಯ ಮಾಡಲು ಉದ್ದೇಶಿಸಲಾಗಿದೆ. ಮಜಲು ವಾಹನಗಳಿಗೆ ತೆರಿಗೆಯನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಲು, ನಗರ ಮತ್ತು ಪಟ್ಟಣಗಳಲ್ಲಿ ಸಂಚರಿಸುವ ಮಜಲು ವಾಹನಗಳಲ್ಲಿ ನಿಂತು ಪ್ರಯಾಣಿಸುವ ಪ್ರಯಾಣಿಕರಿಗೆ ಪ್ರತ್ಯೇಕ ತೆರಿಗೆ ವಿಧಿಸಲು ಪ್ರಸ್ತಾಪಿಸಲಾಗಿದೆ.

228. ಅದೇ ರೀತಿಯಲ್ಲಿ ಹೊರ ರಾಜ್ಯಗಳಿಂದ ಸಂಚರಿಸುವ ವಾಹನಗಳಿಗೆ ತೆರಿಗೆಯನ್ನು ಸೂಕ್ತವಾಗಿ ಮಾರ್ಪಡಿಸಲು ಉದ್ದೇಶಿಸಲಾಗಿದೆ.

229. ಈ ಉದ್ದೇಶಿತ ಬದಲಾವಣೆಯನ್ನು ಅನುಬಂಧ-XI ರಲ್ಲಿ ತೋರಿಸಲಾಗಿದೆ. ಈ ಕ್ರಮಗಳಿಂದ ಸರ್ಕಾರದ ಬೊಕ್ಕಸಕ್ಕೆ 54 ಕೋಟಿ ರೂ. ಹೆಚ್ಚುವರಿ ರಾಜಸ್ವ ನಿರೀಕ್ಷಿಸಬಹುದು.

2000 - 2001 ರ ಪರಿಷ್ಕೃತ ಅಂದಾಜುಗಳು

230. 2000-2001ರ ಆಯವ್ಯಯದಲ್ಲಿ ರೂ.19664.76 ಕೋಟಿ ರೂ.ಗಳ ಒಟ್ಟು ಜಮೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜುಗಳ ರೀತ್ಯ ಈಗ ಒಟ್ಟು ಜಮೆ ರೂ.19,494.76

ಕೋಟಿ ರೂ.ಗಳಾಗಿದೆ. ಆಯವ್ಯಯದಲ್ಲಿ 20061.06 ಕೋಟಿ ರೂ.ಗಳ ಒಟ್ಟು ವೆಚ್ಚವನ್ನು ನಿಗದಿಗೊಳಿಸಲಾಗಿತ್ತು. ಪರಿಷ್ಕೃತ ಅಂದಾಜುಗಳ ರೀತ್ಯಾ ಈಗ ಒಟ್ಟು ವೆಚ್ಚ 19,739.64 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ಲೆಕ್ಕದಲ್ಲಿನ ಹೆಚ್ಚುವರಿಯನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆ ರೂ.242.31 ಕೋಟಿಗಳಾಗಿರುತ್ತದೆ. 2000-2001ರ ಆಯವ್ಯಯ ಪತ್ರದಲ್ಲಿ ರೂ.290.70 ಕೋಟಿ ರೂ.ಗಳ ಕೊರತೆಯನ್ನು ತೋರಿಸಲಾಗಿತ್ತು.

2000 – 2001 ಆಯವ್ಯ ಅಂದಾಜುಗಳು

231. 2001-2002ನೇ ಸಾಲಿನಲ್ಲಿ ರಾಜ್ಯದ ರಾಜಸ್ವ ಆದಾಯವು, ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಅನುಬಂಧ 12 ರಲ್ಲಿ ತೋರಿಸಿರುವಂತೆ ಒಳಗೊಂಡು ಒಟ್ಟು ರೂ.23232.81 ಕೋಟಿಗಳು ಎಂದು ನಿರೀಕ್ಷಿಸಲಾಗಿದೆ. ಇದರಲ್ಲಿ ರಾಜಸ್ವ ಜಮೆ 17328.10 ಕೋಟಿಗಳು ಹಾಗೂ ಬಂಡವಾಳ ಜಮೆ 5904.71 ಕೋಟಿ ರೂ.ಗಳಾಗಿವೆ. ಒಟ್ಟು ವೆಚ್ಚವನ್ನು ರೂ.23276.55 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ರಾಜಸ್ವ ವೆಚ್ಚ 19952.19 ಕೋಟಿ ರೂ.ಗಳು ಮತ್ತು ರೂ.3324.36 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿದೆ.

232. ನನ್ನ ಆಯವ್ಯಯ ಭಾಷಣದಲ್ಲಿ ಈಗಾಗಲೇ ಪ್ರಸ್ತಾಪಿಸಿರುವ ಪ್ರಮುಖ ಆದಾಯ ತೆರಿಗೆ ಆದಾಯಗಳ ಜೊತೆಗೆ ಸರ್ಕಾರವು ಸಣ್ಣ ಉಳಿತಾಯದಿಂದ ರೂ.1200 ಕೋಟಿ ರೂ.ಗಳನ್ನು ಮಾರುಕಟ್ಟೆ ಸಾಲದಿಂದ 738 ಕೋಟಿ ರೂ.ಗಳು, ಒಪ್ಪಂದದ ಸಾಲದ ಮೂಲಕ (ನಿವ್ವಳ) 437.65 ಕೋಟಿಗಳನ್ನು ಮತ್ತು ಕೇಂದ್ರ ಸರ್ಕಾರದಿಂದ ರೂ.2106.09 ಕೋಟಿ ರೂ.ಗಳನ್ನು ಸಾಲವನ್ನು ಪಡೆಯಲು ನಿರೀಕ್ಷಿಸಿದೆ.

233. ಈ ಅಂದಾಜುಗಳ ರೀತ್ಯಾ ಒಟ್ಟಾರೆ -43.74 ಕೋಟಿ ರೂ.ಗಳ ಕೊರತೆಯನ್ನು ಈ ವರ್ಷ ನಿರೀಕ್ಷಿಸಲಾಗಿದೆ. ಆರಂಭ ಶಿಲ್ಕು (-) 242.31 ಕೋಟಿ ರೂ.ಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಮುಕ್ತಾಯ ಶಿಲ್ಕು (-) 286.05 ಕೋಟಿ ರೂ.ಗಳಾಗಿವೆ. ನಾನು ಈ ಕೊರತೆಯನ್ನು ನೀಗಲು ಈ ವರ್ಷದಲ್ಲಿ ಸರ್ಕಾರಿ ವೆಚ್ಚಗಳ ನಿಯಂತ್ರಣ ಮತ್ತು ಹೆಚ್ಚು ತೆರಿಗೆ ಸಂಗ್ರಹಣೆಯಿಂದ ಭರಿಸುವ ಬಗ್ಗೆ ವಿಶ್ವಾಸ ಹೊಂದಿರುತ್ತೇನೆ.

234. ನಾನು ಈ 2001 - 2002ರ ಮುಂಗಡ ಪತ್ರದ ಅಂದಾಜುಗಳನ್ನು ಸದನದ ಪರಿಶೀಲನೆಗೆ ಹಾಗೂ ಅನುಮೋದನೆಗೆ ಮಂಡಿಸುತ್ತೇನೆ. ಈ ಸದನವು ಒಟ್ಟಾರೆ ಆಯವ್ಯಯವನ್ನು ಚರ್ಚಿಸಲಿದೆ. ಅನಂತರ ಸರ್ಕಾರವು ಒಟ್ಟು ಆಯವ್ಯಯಕ್ಕೆ ಲೇಖಾನುದಾನವನ್ನು ಕೋರುತ್ತದೆ. ಈಗ ನಾನು 31-7-2001 ಅಂತ್ಯಗೊಳ್ಳುವ ನಾಲ್ಕು ತಿಂಗಳುಗಳಿಗೆ ಲೇಖಾನುದಾನವನ್ನು ಕೋರುತ್ತೇನೆ.:::

ಜೈ ಹಿಂದ್ - ಜೈ ಕರ್ನಾಟಕ

ಬಜೆಟ್ ವಿಹಂಗಮ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2000-01	ಪರಿಷ್ಕೃತ ಅಂದಾಜು 2000-01	ಬಜೆಟ್ ಅಂದಾಜು 2001-02
	ಪ್ರಾರಂಭ ಶಿಲ್ಕು	-254.40	2.57	-242.31
	ಎ. ರಾಜಸ್ವ ಲೆಕ್ಕ			
I.	ಜಮೆ :			
	ರಾಜ್ಯ ತೆರಿಗೆ	9159.14	9213.78	10851.10
	ಕೇಂದ್ರ ತೆರಿಗೆಯಲ್ಲಿ ಪಾಲು	2568.28	2568.28	3070.86
	ಕೇಂದ್ರ ಸರ್ಕಾರದ ಅನುದಾನಗಳು	1883.86	1796.90	2102.31
	ತೆರಿಗೆಯೇತರ ರಾಜಸ್ವ	1601.37	1332.93	1303.83
	ಒಟ್ಟು-ಎ. I	15212.65	14911.89	17328.10
	ಸಾಮಾಜಿಕ ಸೇವೆ	6378.11	6388.52	6891.23
	ಆರ್ಥಿಕ ಸೇವೆ	4453.57	4400.79	5690.02
	ಸಾಮಾನ್ಯ ಸೇವೆ	5786.10	5787.65	6695.44
	ಸಹಾಯಾನುದಾನ ಮತ್ತು ಅಂಶದಾನ	537.16	509.90	675.50
	ಒಟ್ಟು-ಎ. II	17154.94	17086.86	19952.19
ಎ.	ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	-1942.29	-2174.97	-2624.09

ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2000-01	ಪರಿಷ್ಕೃತ ಅಂದಾಜು 2000-01	ಬಜೆಟ್ ಅಂದಾಜು 2001-02
	ಬಿ. ಬಂಡವಾಳ ಲೆಕ್ಕ			
I.	ಜಮೆ :			
	ಭಾರತ ಸರ್ಕಾರದಿಂದ ಸಾಲ	1227.12	1071.55	2106.69
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	825.18	825.18	738.00
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ (*)	1787.14	1563.04	1637.65
	ಸಾಲಗಳು ಮತ್ತು ಮುಂಗಡಗಳ ವಸೂಲಿ	164.67	163.10	202.37
	ಸಾರ್ವಜನಿಕ ಲೆಕ್ಕ (ನಿವ್ವಳ)	448.00	960.00	1220.00
	ಒಟ್ಟು-ಬಿ. I	4452.11	4582.87	5904.71
II.	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	1974.54	1788.90	2179.05
	ಕೇಂದ್ರ ಸಾಲಗಳ ಮರುಸಂದಾಯ	420.86	419.42	482.54
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	91.18	97.08	136.08
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	419.54	347.38	526.69
	ಒಟ್ಟು-ಬಿ. II	2906.12	2652.78	3324.36
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	1545.99	1930.99	2580.35
ಸಿ.	ವರ್ಷದ ಒಟ್ಟು ಹೆಚ್ಚಳ / ಕೊರತೆ	-396.30	-244.88	-43.74
ಡಿ.	ಮುಕ್ತಾಯ ಶಿಲ್ಕು ಕಳೆದಾಗ	-650.70	-242.31	-286.05
ಇ.	ಎಆರ್‌ಎಮ್	360.00	0.00	0.00
ಎಫ್.	ಒಟ್ಟು ಹೆಚ್ಚುವರಿ / ಕೊರತೆ	-290.70	-242.31	-286.05

(*) ಎಆರ್‌ಎಂ ಬಿಇ 2001-2002ಕ್ಕೆ ಸೇರಿದೆ

ಅನುಬಂಧ - I (ಪ್ಯಾರಾ 152)

2000-2001ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

	ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ.	ಆರ್ಥಿಕ ಸೇವೆಗಳು		
	ಕೃಷಿ ಮತ್ತು ಸಂಬಂಧಪಟ್ಟ ಸೇವೆ	376.07	4.38%
	ಗ್ರಾಮೀಣ ಅಭಿವೃದ್ಧಿ	297.21	3.46%
	ವಿಶೇಷ ಪ್ರದೇಶ ಯೋಜನೆ (ಹೈದರಾಬಾದ್ ಕರ್ನಾಟಕ ಗಡಿ ಪ್ರದೇಶದ ಬೆಳವಣಿಗೆ)	220.00	2.56%
	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	2740.27	31.91%
	ಶಕ್ತಿ ಮೂಲಗಳು	945.15	11.01%
	ಕೈಗಾರಿಕೆ ಮತ್ತು ಖನಿಜಗಳು	277.02	3.23%
	ಸಾರಿಗೆ	791.00	9.21%
	ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	4.07	0.05%
	ಸಾಮಾನ್ಯ ಆರ್ಥಿಕ ಸೇವೆಗಳು	175.17	2.04%
ಬಿ.	ಸಮಾಜ ಸೇವೆಗಳು		
	ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	544.75	6.34%
	ಆರೋಗ್ಯ	268.80	3.13%
	ನೀರು ಸರಬರಾಜು ಮತ್ತು ನೈರ್ಮಲ್ಯ	610.17	7.10%
	ವಸತಿ ಮತ್ತು ನಗರಾಭಿವೃದ್ಧಿ	877.91	10.22%
	ವಾರ್ತಾ ಮತ್ತು ಪ್ರಚಾರ	9.00	0.10%
	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	238.98	2.78%
	ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	127.96	1.49%
	ಕಾರ್ಮಿಕ ಮತ್ತು ಉದ್ಯೋಗ	18.80	0.22%
ಸಿ.	ಸಾಮಾನ್ಯ ಸೇವೆಗಳು	65.95	0.77%
	ಒಟ್ಟು	8588.28	100.00%

ಅನುಬಂಧ - II

(ಪ್ಯಾರ - 171)

ಮಾರಾಟ ತೆರಿಗೆ ಅಡಿಯಲ್ಲಿ ಲಾಟರಿಗಳಿಗೆ ರಾಜಿ ಹಣ ದರಗಳ ವಿವರಗಳು

ಕ್ರಮ ಸಂಖ್ಯೆ	ಲಾಟರಿ ಅವಧಿ	ಪ್ರಸ್ತಾವಿತ ರಾಜಿ ಮೊತ್ತದ ದರ (ಪ್ರತಿ ಡ್ರಾಗೆ ರೂ.ಗಳಲ್ಲಿ)
1	2	3
1.	ಸಾಪ್ತಾಹಿಕ	20,000
2.	ಪಾಕ್ಷಿಕ	60,000
3.	ಮಾಸಿಕ	1,00,000
4.	ವಿಶೇಷ / ಹಬ್ಬಗಳ ಬಂಪರ್ ಡ್ರಾ	4,00,000

ಅನುಬಂಧ - III

(ಪ್ಯಾರಾ 175)

1. ಮಾರಾಟ ತೆರಿಗೆ ದರ ಹೆಚ್ಚಿಸಲು ಪ್ರಸ್ತಾವಿಸಿರುವ ಸರಕುಗಳು

ಕ್ರಮ ಸಂಖ್ಯೆ	ವಸ್ತುಗಳ ವಿವರ	ಹಾಲಿ ಇರುವ ತೆರಿಗೆ ದರ (%)	ಪ್ರಸ್ತಾವಿತ ತೆರಿಗೆ ದರ (%)
1	2	3	4
1.	ಆರ್ಕ್ ಕಾರ್ಬನ್ನುಗಳು	10	12
2.	(i) ಖಾಲಿ ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳು	10	12
	(ii) ಆಡಿಯೋ ಮತ್ತು ವಿಡಿಯೋ ಮುದ್ರಿತ ಕ್ಯಾಸೆಟ್‌ಗಳು	10	12
	(iii) ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳ ಬಿಡಿ ಭಾಗಗಳು ಮತ್ತು ಉಪಸಾಧನಗಳು	10	12
	(iv) ಆಡಿಯೋ ಮತ್ತು ವಿಡಿಯೋ ಮ್ಯಾಗ್ನಟಿಕ್ ಟೇಪುಗಳು.	10	12
	(v) ಆಡಿಯೋ ಮತ್ತು ವಿಡಿಯೋ ಟೇಪ್ ರೆಕಾರ್ಡರುಗಳ ಹೆಡ್ ಕ್ಲೀನರ್‌ಗಳು ಮತ್ತು ವಿಶೇಷವಾಗಿ ಎಲೆಕ್ಟ್ರಾನಿಕ್ ವಸ್ತುಗಳಲ್ಲಿ ಉಪಯೋಗಿಸುವ ಕೀಲೆಣ್ಣೆ	10	12
3.	ಕೇಕುಗಳು ಮತ್ತು ಬಿಸ್ಕತ್ತುಗಳು.	10	12
4.	(i) ಎಲೆಕ್ಟ್ರಿಕಲ್ ಅರ್ತನವೇರ್ ಮತ್ತು ಪೋರ್ಸಲಿನ್ ವೇರ್.	10	12
	(ii) ಎಲೆಕ್ಟ್ರಿಕಲ್ ವಸ್ತುಗಳು, ಸಾಧನಗಳು, ಉಪಕರಣಗಳು ಮತ್ತು ಉಪಸಾಮಗ್ರಿಗಳು (ಮೇಲಿನ (i)ನೇ ಬಾಬಿನ ಆಡಿಯಲ್ಲಿ ಬರುವ ಉಪಸಾಮಗ್ರಿಗಳಿಗೆ ಹೊರತಾದ) ಆದರೆ ಫ್ಯಾನುಗಳು ಮತ್ತು ಟ್ಯೂಬ್‌ಲೈಟುಗಳು ಮತ್ತು ಭಾಗಗಳು ಮತ್ತು ಉಪಸಾಧನಗಳನ್ನು ಒಳಗೊಂಡು	10	12

1	2	3	4
5.	ಫಿಲ್ಮ್‌ಗಳು ಅಂದರೆ		
	(i) ಛಾಯಾಗ್ರಾಹಕ ಫಿಲ್ಮ್‌ಗಳು ಮತ್ತು ಛಾಯಾಗ್ರಾಹಕ ಪೇಪರುಗಳ ಸಹಿತ	4	8
	(ii) ಚಲನ ಚಿತ್ರ ಗ್ರಾಹಕ ಫಿಲ್ಮ್‌ಗಳು	4	8
	(iii) ಎಕ್ಸರೇ ಫಿಲ್ಮ್‌ಗಳು	4	8
6.	ಐಸ್, ಐಸ್ ಫ್ರೂಟ್, ಐಸ್‌ಕ್ಯಾಂಡಿ ಮತ್ತು ಎಲ್ಲಾ ವಿಧದ ಐಸ್ ಕ್ರೀಮುಗಳು.	10	12
7.	ಮೋಟಾರ್ ವಾಹನಗಳ ಭಾಗಗಳು ಮತ್ತು ಉಪಸಾಧನಗಳು, ಎಂದರೆ,- ಸಾಮಾನ್ಯವಾಗಿ ಮೋಟಾರು ವಾಹನಗಳ ಭಾಗಗಳು ಮತ್ತು ಉಪಸಾಧನಗಳಾಗಿ ಬಳಸುವ ವಸ್ತುಗಳು, ಆದರೆ ರಬ್ಬರ್ ಮತ್ತು ಇತರ ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳು, ಬ್ಯಾಟರಿಗಳು ಮತ್ತು ಡೀಸೆಲ್ ಎಂಜಿನ್ ಮತ್ತು ಆದರ ಭಾಗಗಳನ್ನು ಹೊರತುಪಡಿಸಿ.	10	12
8.	ಸನ್‌ಗ್ಲಾಸ್‌ಗಳು, ಗಾಗಲ್‌ಗಳು, ಲೆನ್ಸುಗಳು ಮತ್ತು ಫ್ರೇಮುಗಳು, ಅವುಗಳ ಜೋಡಣೆಗಳು, ಭಾಗಗಳು ಮತ್ತು ಉಪಸಾಧನಗಳು ಸೇರಿ, ಆದರೆ ಕನ್ನಡಕಗಳನ್ನು ಬಿಟ್ಟು	10	12
9.	(i) ಪೇಂಟುಗಳು, ವರ್ಣಗಳು, ವಾರ್ನಿಷ್‌ಗಳು, ಪಿಗ್‌ಮೆಂಟ್‌ಗಳು, ಪಾಲಿಷ್‌ಗಳು, ಇಂಡಿಗೊ, ಎನಾಮೆಲ್, ಪಟ್ಟಿ, ಬೇಲ್ ಆಯಿಲ್, ಬಿಳಿ ಎಕ್ಸ್ಟೆ, ಟರ್ಪೆನ್ ಟೈನ್ (ಎಲ್ಲಾ ಬಗೆಯ) ಥಿನ್ನರ್‌ಗಳು, ಪ್ರೈಮರ್‌ಗಳು	10	12
	(i) ಅಕ್ರಿಲಿಕ್ ಪೇಂಟುಗಳು ಮತ್ತು ಬಣ್ಣಗಳು, ಪ್ಲಾಸ್ಟಿಕ್ ಎಮಲ್ಷನ್ ಪೇಂಟುಗಳು ಮತ್ತು ಎಲ್ಲಾ ಬಗೆಯ ಲ್ಯಾಕ್ವರುಗಳು.	10	12
10.	ಪ್ರತಿಯೊಂದು ಬಗೆಯ ಸ್ಯಾನಿಟರಿ ಜೋಡಣೆಗಳು ಆದರೆ ಕಲ್ಲು, ಸಿಮೆಂಟ್ ಮತ್ತು ಕಬ್ಬಿಣ ಹಾಗೂ ಉಕ್ಕಿನ ಪೈಪುಗಳು ಮತ್ತು ಜೋಡಣೆಗಳನ್ನು ಹೊರತುಪಡಿಸಿ.	10	12

1	2	3	4
11.	ಸೂಟ್ ಕೇಸುಗಳು, ಬ್ರೀಫ್ ಕೇಸುಗಳು, ಅಟ್ಯಾಚ್ ಕೇಸುಗಳು ಮತ್ತು ಡೆಸ್‌ಪ್ಯಾಚ್ ಕೇಸುಗಳು ಚರ್ಮದಿಂದ ಮಾಡಿದವು ಸೇರಿ, ಆದರೆ ಸ್ಟೀಲ್ ಟ್ರಂಕುಗಳನ್ನು ಬಿಟ್ಟು.	10	12
12.	ಬ್ರಾಂಡ್ ಹೆಸರಿನಡಿಯಲ್ಲಿ ಮಾರಾಟ ಮಾಡುವ ಚಹಾ.	10	12
13.	ಟೈಲುಗಳು,-		
	(i) ಮೊಸಾಯಿಕ್ ಟೈಲುಗಳು ಮತ್ತು ಚೂರುಗಳು.	10	12
	(ii) ಸೆರಾಮಿಕ್ ಮತ್ತು ಹೊಳೆಯುವ ನೆಲ ಮತ್ತು ಗೋಡೆಯ ಟೈಲುಗಳು.	10	12
	(iii) ಮೇಲ್ಕಂಡ (i) ಮತ್ತು (ii)ನೇ ಬಾಬುಗಳಲ್ಲಿ ಬಾರದ ಇತರ ಟೈಲುಗಳು.	10	12
	(iv) ಸಿಮೆಂಟನ್ನು ಬಿಟ್ಟು ಸಂದುಗಾರೆ ಪುಡಿ ಮತ್ತು ಮೇಲೆ ನಿರ್ದಿಷ್ಟಪಡಿಸಿದ ಟೈಲುಗಳು ಮತ್ತು ಚೂರುಗಳನ್ನು ಹಾಸಲು ಬಳಸುವ ಸೀತು ಮಿಶ್ರಣ	10	12
14.	ಪ್ರಸಾಧನ ವಸ್ತುಗಳು (ಔಷಧಯುಕ್ತ ಅಥವಾ ಇಲ್ಲದ) ಅಂದರೆ,		
	(i) ಸುಗಂಧ ದ್ರವ್ಯಗಳು, ಯುಡಿಕ್ಯೂಲಾನ್, ಸಾಲಿಡಕ್ಯೂಲಾನ್, ಸೌಂದರ್ಯ ಪೆಟ್ಟಿಗೆಗಳು, ಫೇಸ್‌ಪ್ಯಾಕ್‌ಗಳು, ಕ್ಲೆನ್ಸಿಂಗ್‌ದ್ರವಗಳು, ಮಾಯಿಶ್ಚರೈಸರ್‌ಗಳು, ಮೇಕಪ್ ಸಾಮಗ್ರಿಗಳು, (ಟಾಲ್ಕಂ ಪೌಡರ್ ಹೊರತುಪಡಿಸಿ) ಕಾಂಪ್ಲೆಕ್ಷನ್ ರೂಜ್, ಬ್ಲೀಚಿಂಗ್ ಏಜೆಂಟ್ಸ್, ಹೇರ್‌ಡೈಸ್, ಹೇರ್ ಸ್ಪ್ರೇಯರ್‌ಗಳು, ಹೇರ್ ರಿಮೂವರ್, ಹೇರ್ ಕ್ರೀಂಗಳು, ಲಿಪ್ ಸ್ಟಿಕ್‌ಗಳು, ನೈಲ್ ಪಾಲಿಷ್ಗಳು ಮತ್ತು ವಾರ್ನಿಷ್‌ಗಳು, ಪಾಲಿಷ್ ನಿವಾರಕಗಳು, ಐಲೈನರ್‌ಗಳು, ಆಫ್ಟರ್ ಶೇವ್ ಲೋಶನ್ ಮತ್ತು ದೇಹ ದುರ್ಗಂಧ ನಾಶಕಗಳು	12	15

1	2	3	4
	(ii) ಮೇಲ್ಕಂಡ (i)ನೇ ಬಾಬಿನಲ್ಲಿ ನಿರ್ದಿಷ್ಟಪಡಿಸಿರುವ ಸಾಮಗ್ರಿಗಳನ್ನು ಹೊರತುಪಡಿಸಿ, ಟಾಯಲೆಟ್ ಸೋಪ್‌ಗಳು ಮತ್ತು ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ಇತರ ಪ್ರಸಾಧನ ವಸ್ತುಗಳು	12	15
15.	ಎಲ್ಲಾ ವಿಧವಾದ ಒಣ ಹಣ್ಣುಗಳು.	4	8
16.	ಆಮದಾದ ಸಕ್ಕರೆ, ಎಲ್ಲ ವಿಧವಾದ ಬಟ್ಟೆ ಮತ್ತು ತಂಬಾಕು ಪದಾರ್ಥಗಳು.	4	12
17.	ಪಾನ್ ಮಸಾಲ	10	20
18.	ಬ್ರಾಂಡ್ ಹೆಸರಿನಡಿಯಲ್ಲಿ ಮಾರಾಟ ಮಾಡುವ ಕೊಬ್ಬರಿ ಎಣ್ಣೆ.	4	15
19.	ಇನ್‌ಸ್ಟೆಂಟ್ ಕಾಫಿ	10	12

ಅನುಬಂಧ - IV

(ಪ್ಯಾರಾ 176)

ಹೊಸದಾಗಿ ವಿಧಿಸಲು ಪ್ರಸ್ತಾವಿಸಲಾಗಿರುವ ತೆರಿಗೆ ದರಗಳ ವಿವರಗಳು

ಕ್ರಮ ಸಂಖ್ಯೆ	ವಸ್ತುಗಳ ವಿವರ	ಹಾಲಿ ಇರುವ ತೆರಿಗೆ ದರ (%)	ಪ್ರಸ್ತಾವಿತ ತೆರಿಗೆ ದರ (%)
1	2	3	4
1.	ಕಂಪ್ಯೂಟರ್ ಸಾಫ್ಟ್‌ವೇರ್, ಕಂಪ್ಯೂಟರ್ ಸಾಫ್ಟ್‌ವೇರನ್ನು ಒದಗಿಸುವ ಗುತ್ತಿಗೆ ಕಾಮಗಾರಿ ಮತ್ತು ಲೀಸಿಂಗ್	0	4
2.	ಸರ್ಕಾರ ಮತ್ತು ಅದರಿಂದ ಮಾನ್ಯತೆ ಪಡೆದ ಬೋರ್ಡ್‌ಗಳು, ಕೌನ್ಸಿಲ್‌ಗಳು, ಅಕಾಡೆಮಿಗಳು, ವಿಶ್ವವಿದ್ಯಾನಿಲಯಗಳು ನಿಗದಿಪಡಿಸಿದ ಪಠ್ಯ ಕ್ರಮಕ್ಕನುಗುಣವಾಗಿ ಮುದ್ರಿಸಿದ ಮತ್ತು ಬರೆದ ಶಾಲಾ ಮತ್ತು ಕಾಲೇಜು ಪಠ್ಯ ಪುಸ್ತಕಗಳನ್ನು ಬಿಟ್ಟು ಇತರೆ ಪುಸ್ತಕಗಳು.	0	4
7.	ಶೀಷೆಗಳಲ್ಲಿ, ಟಿನ್‌ಗಳಲ್ಲಿ ಅಥವಾ ಯಾವುದೇ ರೀತಿಯ ಮೊಹರು ಮಾಡಿದ ಧಾರಕಗಳಲ್ಲಿರುವ ಇಂಗಾಲಾಮ್ಲ ಮಿಶ್ರಿತ ಪಾನೀಯಗಳ (ಏರೇಟೆಡ್ ವಾಟರ್) ಎರಡನೇ ಹಂತದ ಮಾರಾಟ.	0	4
3.	ಗೃಹ ಉಪಯೋಗಿ ಅಲ್ಯೂಮಿನಿಯಂ ಪಾತ್ರೆಗಳು	0	2
4.	ಸೀಮೆ ಎಣ್ಣೆ ಸ್ಟೌವ್‌ಗಳು	0	2
5.	ಸಾಂಬ್ರಾಣಿ	0	4
6.	ಬೆತ್ತ ಮತ್ತು ಬಿದಿರಿನ ವಸ್ತುಗಳು	0	8

ಅನುಬಂಧ - V

(ಪ್ಯಾರಾ 188)

ಕೇಬಲ್ ಟಿವಿ ನಡೆಸುವವರಿಗೆ ರಾಜಿ ಹಣ ಹೆಚ್ಚಿಸಲು ಪ್ರಸ್ತಾವಿಸಿರುವ ದರಗಳು

ಕ್ರ. ಸಂ.	ನಡೆಸುವ ಸ್ಥಳ	ಹಾಲಿ ಇರುವ ದರ (ರೂ.ತಿಂಗಳಿಗೆ)	ಪ್ರಸ್ತಾವಿತ ದರ (ರೂ.ತಿಂಗಳಿಗೆ)
1.	ಬೆಂಗಳೂರು ನಗರ ಪಾಲಿಕೆ ಪ್ರದೇಶ	1500	3000
2.	ಬೆಂಗಳೂರು ನಗರಪಾಲಿಕೆ ಬಿಟ್ಟು ಉಳಿದ ನಗರ ಪಾಲಿಕೆಗಳು ಮತ್ತು ದಂಡು ಪ್ರದೇಶ	1000	2000
3.	ಇತರೆ ಸ್ಥಳಗಳು		
	ಎ. 25 ಸಾವಿರಕ್ಕಿಂತ ಜಾಸ್ತಿ ಜನಸಂಖ್ಯೆ ಇರುವ ಸ್ಥಳಗಳು	700	1500
	ಬಿ. 25 ಸಾವಿರ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಸ್ಥಳಗಳು	300	600

ಅನುಬಂಧ - VI

(ಪ್ಯಾರಾ 189)

ವೃತ್ತಿ ತೆರಿಗೆ ವಿಧಿಸಲು ಪ್ರಸ್ತಾವಿಸಿರುವ ಹೊಸ ವೃತ್ತಿಗಳು

ಕ್ರ. ಸಂ.	ವೃತ್ತಿಯ ಹೆಸರು	ಪ್ರಸ್ತಾವಿತ ತೆರಿಗೆ ದರ (ರೂ. ವಾರ್ಷಿಕ)
1.	ಮೊಬೈಲ್ ಟೆಲಿಫೋನ್ ನಡೆಸುವ ವೃತ್ತಿಗರು	2500
2.	ಇಂಟರ್‌ನೆಟ್ ಸೇವೆ, ಇಂಟರ್‌ನೆಟ್ ಕೆಫೆ ಮತ್ತು ಇನ್‌ಫರ್ ಮೇಷನ್ ಕಿಯೋಸ್ಕಸ್ ನಡೆಸುವ ವೃತ್ತಿಗರು	2500
3.	ಇ ಕಾಮರ್ಸ್ ವ್ಯವಹಾರ ನಡೆಸುವ ವೃತ್ತಿಗರು	2500
4.	ಏರ್ ಟ್ಯಾಕ್ಸಿ ಮತ್ತು ಹೆಲಿಕ್ಯಾಪ್ಟರ್ ಸೇವೆಗಳನ್ನು ನೀಡುವ ವೃತ್ತಿಗರು.	2500
5.	ಮನರಂಜನಾ ಕ್ಲಬ್‌ಗಳನ್ನೊಳಗೊಂಡಂತೆ ಎಲ್ಲ ವಿಧವಾದ ಕ್ಲಬ್‌ಗಳನ್ನು ನಡೆಸುವ ವೃತ್ತಿಗರು.	2500
6.	ಜಿಮ್ನಾಯಿಶಂ ನಡೆಸುವ ವೃತ್ತಿಗರು.	2500
7.	ಪೇಜಂಟ್‌ಗಳು, ಫ್ಯಾಷನ್ ಮೇಳಗಳು ಮತ್ತು ಇನ್ನಿತರೆ ಅದೇ ತರಹದ ಮೇಳಗಳನ್ನು ನಡೆಸುವ ವೃತ್ತಿಗರು	2500

ಅನುಬಂಧ - VIII

(ಪ್ಯಾರಾ-202-204)

ಪ್ರಸ್ತುತ ಮತ್ತು ಪ್ರಸ್ತಾವಿತ ಶುಲ್ಕ

ಕ್ರಮ ಸಂಖ್ಯೆ	ವಿವರ	ಪ್ರಸ್ತುತ ಶುಲ್ಕ (ರೂ.ಗಳಲ್ಲಿ)	ಪ್ರಸ್ತಾವಿತ ಶುಲ್ಕ (ರೂ.ಗಳಲ್ಲಿ)
1.	ಫೆನ್ನಿ ಡಿಸ್ಟಿಲರಿ ಲೈಸೆನ್ಸ್ ಶುಲ್ಕ	6,00,000	11,00,000
2.	ಕ್ಲಬ್ ಲೈಸೆನ್ಸ್ ಶುಲ್ಕ (ಸಿಎಲ್-4) (ವಸತಿರಹಿತ ಕ್ಲಬ್‌ಗಳು)	60,000	1,00,000
3.	ಐ.ಟಿ.ಡಿ.ಸಿ. ಅಥವಾ ಕೆ.ಎಸ್.ಟಿ.ಡಿ.ಸಿ. ನಡೆಸುವ ಹೋಟೆಲ್‌ಗಳು (ಸಿಎಲ್-14)	8,000	24,000
4.	ಫೆನ್ನಿ ಮೇಲೆ ವಿಧಿಸುವ ಅಧಿಕ ಅಬಕಾರಿ ಶುಲ್ಕ		
	ಎ. ರೂ.250 ರವರೆಗೆ	20	62
	ಬಿ. ರೂ.251 ರಿಂದ 350 ರ ವರೆಗೆ	23	70
	ಸಿ. ರೂ.351 ರಿಂದ 500 ರ ವರೆಗೆ	27	85
	ಡಿ. ರೂ.501 ರಿಂದ 750 ರ ವರೆಗೆ	34	105
	ಇ. ರೂ.751 ರಿಂದ 1000 ದ ವರೆಗೆ	42	125
	ಎಫ್. ರೂ. 1001 ಮತ್ತು 1000ದ ವರೆಗೆ	43	130
5.	ರಕ್ಷಣಾ ದಳಗಳಿಗೆ ಸರಬರಾಜು ಮಾಡುವ ಮದ್ಯದ ಮೇಲಿನ ಶುಲ್ಕ		
	ಎ. ಸ್ಥಳೀಯ		
	i. ರಮ್ ಹೊರತಾಗಿ	15/- ಬಲ್ಕ್ ಲೀಟರ್‌ಗೆ	20 ಬಲ್ಕ್ ಲೀಟರ್‌ಗೆ
	ii. ರಮ್	14/- ಬಲ್ಕ್ ಲೀಟರ್‌ಗೆ	20 ಬಲ್ಕ್ ಲೀಟರ್‌ಗೆ
	ಬಿ. ರಫ್ತು		
	i. ರಮ್ ಹೊರತಾಗಿ	1/- ಬಲ್ಕ್ ಲೀಟರ್‌ಗೆ	1.50 ಬಲ್ಕ್ ಲೀಟರ್‌ಗೆ
	ii. ರಮ್	0.50/- ಬಲ್ಕ್ ಲೀಟರ್‌ಗೆ	1.50 ಬಲ್ಕ್ ಲೀಟರ್‌ಗೆ
6.	ಲೇಬಲ್ ಅನುಮೋದನಾ ಶುಲ್ಕ		
	i. ಕರ್ನಾಟಕದಲ್ಲಿ ಸೀಸೆಗೆ ತುಂಬುವ ಮದ್ಯ	10,000	25,000
	ii. ಕರ್ನಾಟಕದ ಹೊರಗೆ ಸೀಸೆಗೆ ತುಂಬುವ ಮದ್ಯ	25,000	50,000
7.	ರೆಕ್ಟಿಫೈಡ್ ಸ್ಪಿರಿಟ್ ಮೇಲಿನ ನೀಡಿಕೆ ಶುಲ್ಕ		
	i. ನಿಯಮ 2ಸಿ ಯ ಖಂಡ (ಎ) ಮೇರೆಗೆ ಸ್ವಂತ ಉಪಯೋಗಕ್ಕಾಗಿ ಮತ್ತು ಮಾರಾಟವನ್ನು ಒಳಗೊಂಡಿಲ್ಲದಿದ್ದಲ್ಲಿ	2/- ಬಲ್ಕ್ ಲೀಟರ್‌ಗೆ	3/- ಬಲ್ಕ್ ಲೀಟರ್‌ಗೆ
	ii. ನಿಯಮ 2ಸಿ ಯ ಖಂಡ (ಬಿ)ಯ ಮೇರೆಗೆ ಆಮದು ಮಾಡಿಕೊಂಡಲ್ಲಿ	3/- ಬಲ್ಕ್ ಲೀಟರ್‌ಗೆ	4/- ಬಲ್ಕ್ ಲೀಟರ್‌ಗೆ
	iii. ನಿಯಮ 2ಡಿ ಪ್ರಕಾರ ರಫ್ತು ಮಾಡಿದಲ್ಲಿ	2.75/- ಬಲ್ಕ್ ಲೀಟರ್‌ಗೆ	3.50 ಬಲ್ಕ್ ಲೀಟರ್‌ಗೆ

ಅನುಬಂಧ - VIII (ಪ್ಯಾರ 212)

ಕರ್ನಾಟಕ ಮುದ್ರಾಂಕ ಕಾಯಿದೆ 1957ರ ಅನುಚ್ಛೇದಕ್ಕೆ ಪ್ರಸ್ತಾಪಿಸಿದ ಬದಲಾವಣೆಗಳು

ಕ್ರ. ಸಂ.	ವಿಷಯ	ಅನುಚ್ಛೇದ	ಈಗಿನ ದರ		ಪ್ರಸ್ತಾಪಿತ ಬದಲಾವಣೆ	
			ವಿವರ	ದರ	ವಿವರ	ದರ
1	2	3	4	5	6	7
1.	**ಸ್ವೀಕೃತಿ**	1	ಅ) ರೂ.100 ಕ್ಕಿಂತ ಮೇಲ್ಪಟ್ಟು ರೂ.5000 ಮೀರದಿದ್ದಲ್ಲಿ	ರೂ.2	ಅ) ರೂ.100 ಮೇಲ್ಪಟ್ಟು ರೂ.5000 ಮೀರದಿದ್ದಲ್ಲಿ	ರೂ.2
			ಬ) ರೂ.5000 ಕ್ಕಿಂತ ಮೇಲ್ಪಟ್ಟು	ರೂ.2 + ರೂ.2 ಪ್ರತಿ ರೂ.1000ಕ್ಕೆ ಅಥವಾ ಅದರ ಭಾಗಕ್ಕೆ	ಬ) ರೂ.5000 ಮೇಲ್ಪಟ್ಟು	ರೂ.2 ಗರಿಷ್ಠ ರೂ.1000
2.	**ಒಪ್ಪಂದ** ಅಥವಾ **ಒಪ್ಪಂದದ** ಒಡಂ**ಬಡಿಕೆ**	5 (ಎಫ್)	ಅಭಿವೃದ್ಧಿಕಾರ ಅಥವಾ ಉನ್ನತಿಕಾರ ಯಾವುದೇ ಹೆಸರಿನಿಂದ ಕರೆಯಲ್ಪಡುವನಿಗೆ ಯಾವುದೇ ಸ್ಥಿರಾಸ್ತಿಯಲ್ಲಿ ಕಟ್ಟಡ ಕಟ್ಟಲು ಅಥವಾ ಅಭಿವೃದ್ಧಿ	ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಶೇ.4 ಗರಿಷ್ಠ ಮಿತಿ ರೂ.4 ಲಕ್ಷ	ಅಭಿವೃದ್ಧಿಕಾರ ಅಥವಾ ಉನ್ನತಿಕಾರ ಯಾವುದೇ ಹೆಸರಿನಿಂದ ಕರೆಯಲ್ಪಡುವನಿಗೆ ಯಾವುದೇ ಸ್ಥಿರಾಸ್ತಿಯಲ್ಲಿ ಕಟ್ಟಡ ಕಟ್ಟಲು ಅಥವಾ ಅಭಿವೃದ್ಧಿ	ಆಸ್ತಿಯ ಮಾರು ಕಟ್ಟೆ ಮೌಲ್ಯದ ಮೇಲೆ ಶೇ. 5

1	2	3	4	5	6	7
			ಗೊಳಿಸಲು ಅಥವಾ ಮಾರಾಟ ಅಥವಾ ವರ್ಗಾವಣೆಗೆ (ಯಾವುದೇ ರೀತಿಯಲ್ಲಿ) ಅಧಿಕಾರ ನೀಡಿದ್ದಲ್ಲಿ		ಗೊಳಿಸಲು ಅಥವಾ ಮಾರಾಟ ಅಥವಾ ವರ್ಗಾವಣೆಗೆ (ಯಾವುದೇ ರೀತಿಯಲ್ಲಿ) ಅಧಿಕಾರ ನೀಡಿದ್ದಲ್ಲಿ	
3.	ಹಕ್ಕುಪತ್ರಗಳ ನಿಕ್ಷೇಪ	6	1.ಸಾಲದ ಮೊತ್ತ ರೂ. 500 ಮೀರದಿದ್ದಲ್ಲಿ	ರೂ. 5	1.ಸಾಲದ ಮೊತ್ತ ರೂ. 500 ಮೀರದಿದ್ದಲ್ಲಿ	ರೂ.5
			2.ರೂ.500 ಮೇಲ್ಪಟ್ಟು ಆದರೆ ರೂ.1000 ಮೀರದಿದ್ದಲ್ಲಿ	ರೂ.10 ರೂ.50	2.ರೂ.500 ಮೇಲ್ಪಟ್ಟು ಆದರೆ ರೂ.1000 ಮೀರದಿದ್ದಲ್ಲಿ	ರೂ.10 ರೂ.50
			3.ರೂ.1000 ಮೇಲ್ಪಟ್ಟು ಆದರೆ ರೂ.5000 ಮೀರದಿದ್ದಲ್ಲಿ	ರೂ.100	3.ರೂ.1000 ಮೇಲ್ಪಟ್ಟು ಆದರೆ ರೂ.5000 ಮೀರದಿದ್ದಲ್ಲಿ	ರೂ.100
			4.ರೂ.5000 ಮೇಲ್ಪಟ್ಟು ಆದರೆ ರೂ.10000 ಮೀರದಿದ್ದಲ್ಲಿ	ರೂ.50	4.ರೂ.5000 ಮೇಲ್ಪಟ್ಟು ಆದರೆ ರೂ.10000 ಮೀರದಿದ್ದಲ್ಲಿ	ರೂ.50 ಗರಿಷ್ಠ ರೂ.50,000
			5.ರೂ.10000 ಮೀರಿದಾಗ ಪ್ರತಿ ಹೆಚ್ಚಿನ ರೂ.5000 ಮತ್ತು ಅದರ ಭಾಗಕ್ಕೆ		5.ರೂ.10000 ಮೀರಿದಾಗ ಪ್ರತಿ ಹೆಚ್ಚಿನ ರೂ.5000 ಮತ್ತು ಅದರ ಭಾಗಕ್ಕೆ	

1	2	3	4	5	6	7
4.	ಆರ್ಟಿಕಲ್ಸ್ ಆಫ್ ಅಸೋಸಿಯೇಷನ್	10	ಕಂಪನಿಯ ಶೇರು ಬಂಡವಾಳ ಅಥವಾ ನಾಮ ಮಾತ್ರ ಇರುವ ಶೇರು ಬಂಡವಾಳ ಅಥವಾ ಶೇರು ಬಂಡವಾಳ ಹೆಚ್ಚುವರಿ ಮಾಡಿದ ಸಂದರ್ಭದಲ್ಲಿ	ಒಂದು ಸಾವಿರ ರೂಪಾಯಿ ಪ್ರತಿ ಐದು ಲಕ್ಷ ರೂಪಾಯಿ ಅಥವಾ ಅದರ ಭಾಗಕ್ಕೆ	ಕಂಪನಿಯ ಶೇರು ಬಂಡವಾಳ ಅಥವಾ ನಾಮ ಮಾತ್ರ ಇರುವ ಶೇರು ಬಂಡವಾಳ ಅಥವಾ ಶೇರು ಬಂಡವಾಳ ಹೆಚ್ಚುವರಿ ಮಾಡಿದ ಸಂದರ್ಭದಲ್ಲಿ	ಪ್ರತಿ ಹತ್ತು ಲಕ್ಷ ರೂಪಾಯಿ ಅಥವಾ ಅದರ ಭಾಗಕ್ಕೆ ಐದು ನೂರು ರೂಪಾಯಿ
5.	ಹಸ್ತಾಂತರ	20 (1) (ಮೊದಲನೇ ಪರಂತುಕ	ಒಂದು ವೇಳೆ ಹಸ್ತಾಂತರ ಲಿಖಿತಕ್ಕೆ ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959 (ಕರ್ನಾಟಕ ಕಾಯಿದೆ 11, 1959) ಅಡಿ ನೋಂದಾಯಿತ ಗೃಹ ನಿರ್ಮಾಣ ಸಹಕಾರ ಸಂಘಗಳು ತನ್ನ ಸದಸ್ಯರಿಗೆ ಕಟ್ಟಡ ಅಥವಾ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಬರೆದುಕೊಟ್ಟಿದ್ದಾಗಿದ್ದರೆ, ಹಸ್ತಾಂತರ ಲಿಖಿತಕ್ಕೆ	ಕೃಷಿ ಜಮೀನು, ನಗರಸಭೆ ಮತ್ತು ಬಿ.ಎಂ.ಆರ್.ಡಿ.ಎ. ಸರಹದ್ದಿನಲ್ಲಿ ಕ್ರಮವಾಗಿ 8%, 9% ಮತ್ತು 10% ರಂತೆ	ತೆಗೆದುಹಾಕಿದೆ	ಕೃಷಿ ಜಮೀನು, ನಗರಸಭೆ ಮತ್ತು ಬಿ.ಎಂ.ಆರ್.ಡಿ.ಎ. ಸರಹದ್ದಿನಲ್ಲಿ ಕ್ರಮವಾಗಿ 8%, 9% ಮತ್ತು 10% ರಂತೆ

1	2	3	4	5	6	7
			ಕಾಣಿಸಿರುವ ಮೊತ್ತ ಅಥವಾ ಮೊತ್ತದ ಮೌಲ್ಯದ ಹಣದ ಮೇಲೆ ಮೇಲ್ಕಾಣಿಸಿದ ದರಗಳಲ್ಲಿ ಶುಲ್ಕ ನೀಡಬೇಕಾಗಿದೆ.			
6.	ದಾನಪತ್ರ	28 ಉಪ ಬಂಧ (ಬ)	ದಾನ ಪಡೆಯುವ ವ್ಯಕ್ತಿ ದಾನಿಯ ಕುಟುಂಬದ ಸದಸ್ಯನಾಗಿದ್ದಲ್ಲಿ		ದಾನ ಪಡೆಯುವ ವ್ಯಕ್ತಿ ದಾನಿಯ ಕುಟುಂಬದ ಸದಸ್ಯನಾಗಿದ್ದಲ್ಲಿ	ರೂ.1000
			1. ಮಾರುಕಟ್ಟೆ ಮೌಲ್ಯ ರೂ.50,000ಕ್ಕಿಂತ ಕಡಿಮೆ ಇದ್ದಲ್ಲಿ	ರೂ.500		
			2. ಮಾರುಕಟ್ಟೆ ಮೌಲ್ಯ ರೂ.50,000 ಮೇಲ್ಪಟ್ಟು ಮತ್ತು ರೂ.10 ಲಕ್ಷ ಒಳಗೆ ಇದ್ದರೆ.	ಮೌಲ್ಯದ ಶೇಕಡ 5 ರಷ್ಟು		

1	2	3	4	5	6	7
			3. ಮಾರುಕಟ್ಟೆ ಮೌಲ್ಯ ಹತ್ತು ಲಕ್ಷ ಮೇಲ್ಪಟ್ಟು ಮತ್ತು ರೂ.20 ಲಕ್ಷ ಒಳಗೆ ಇದ್ದರೆ	ಮೌಲ್ಯದ ಶೇಕಡ 3 ರಷ್ಟು		
			4. ಮಾರುಕಟ್ಟೆ ಮೌಲ್ಯ 20 ಲಕ್ಷ ಮೀರಿದರೆ	ಮೌಲ್ಯದ ಶೇಕಡ 5 ರಷ್ಟು		
7.	ಗೇಣಿ	30 (1) (ಅ) (VI)	ಗೇಣಿಯು 30 ವರ್ಷ ಮೀರಿದಲ್ಲಿ ಅಥವಾ ನಿರಂತರವಾಗಿದ್ದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಇಲ್ಲದಿದ್ದಲ್ಲಿ	ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಮಾನಾಂತರದ ಮೊತ್ತದ ಮೇಲೆ 5%	ಗೇಣಿಯು 30 ವರ್ಷ ಮೀರಿದಲ್ಲಿ ಅಥವಾ ನಿರಂತರವಾಗಿದ್ದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಇಲ್ಲದಿದ್ದಲ್ಲಿ	ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಮಾನಾದ ಮೊತ್ತದ ಮೇಲೆ ಹಸ್ತಾಂತರ ದರದಂತೆ
		(1) (ಬ) (ii)	ಗೇಣಿಯು 30 ವರ್ಷ ಮೀರಿದಲ್ಲಿ ಅಥವಾ ನಿರಂತರವಾಗಿದ್ದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಇಲ್ಲದಿದ್ದಲ್ಲಿ	ಗೇಣಿಯಲ್ಲಿ ಒಳಗೊಂಡ ಫೈನ್ ಅಥವಾ ಪ್ರೀಮಿಯಂ ಅಥವಾ ಮುಂಗಡ ಮೊತ್ತ ಅಥವಾ ಮೌಲ್ಯದ ಮೇಲೆ	ಗೇಣಿಯು 30 ವರ್ಷ ಮೀರಿದಲ್ಲಿ ಅಥವಾ ನಿರಂತರವಾಗಿದ್ದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಇಲ್ಲದಿದ್ದಲ್ಲಿ	ಗೇಣಿಯಲ್ಲಿ ಒಳಗೊಂಡ ಫೈನ್ ಅಥವಾ ಪ್ರೀಮಿಯಂ ಅಥವಾ ಮುಂಗಡ ಮೊತ್ತ

1	2	3	4	5	6	7
				ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಯಾವುದು ಹೆಚ್ಚೋ, ಅದರ ಮೇಲೆ 5%		ಅಥವಾ ಮೌಲ್ಯದ ಮೇಲೆ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಯಾವುದು ಹೆಚ್ಚೋ, ಅದರ ಮೇಲೆ ಹಸ್ತಾಂತರ ದರದಂತೆ
		(1) (ಕ) (ii)	ಗೇಣಿಯು 30 ವರ್ಷ ಮೀರಿದಲ್ಲಿ ಅಥವಾ ನಿರಂತರವಾಗಿದ್ದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಇಲ್ಲದಿದ್ದಲ್ಲಿ	ಗೇಣಿಯಲ್ಲಿ ಒಳಗೊಂಡ ಫೈನ್ ಅಥವಾ ಪ್ರೀಮಿಯಂ ಅಥವಾ ಮುಂಗಡ ಮೊತ್ತ ಅಥವಾ ಮೌಲ್ಯದ ಮೇಲೆ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಯಾವುದು ಹೆಚ್ಚೋ, ಅದರ ಮೇಲೆ 5%	ಗೇಣಿಯು 30 ವರ್ಷ ಮೀರಿದಲ್ಲಿ ಅಥವಾ ನಿರಂತರವಾಗಿದ್ದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿ ಇಲ್ಲದಿದ್ದಲ್ಲಿ	ಗೇಣಿಯಲ್ಲಿ ಒಳಗೊಂಡ ಫೈನ್ ಅಥವಾ ಪ್ರೀಮಿಯಂ ಅಥವಾ ಮುಂಗಡ ಮೊತ್ತ ಅಥವಾ ಮೌಲ್ಯದ ಮೇಲೆ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಯಾವುದು ಹೆಚ್ಚೋ, ಅದರ ಮೇಲೆ ಹಸ್ತಾಂತರ ದರದಂತೆ

1	2	3	4	5	6	7
8.	ಹಕ್ಕು ಖುಲಾಸೆ	45 ಉಪ ಬಂಧ (ಬ)	ಹಕ್ಕು ಖುಲಾಸೆಯು ಕುಟುಂಬದ ಸದಸ್ಯರೊಳಗೆ ಆಗುವಲ್ಲಿ		ಹಕ್ಕು ಖುಲಾಸೆಯು ಕುಟುಂಬದ ಸದಸ್ಯರೊಳಗೆ ಆಗುವಲ್ಲಿ	ರೂ.1000
			1. ಮಾರುಕಟ್ಟೆ ಮೌಲ್ಯ ರೂ.50,000 ಕ್ಕಿಂತ ಕಡಿಮೆ ಇದ್ದಲ್ಲಿ	ರೂ. 500		
			2. ಮಾರುಕಟ್ಟೆ ಮೌಲ್ಯ ರೂ.50,000 ಮೇಲ್ಪಟ್ಟು ಮತ್ತು ರೂ. 10ಲಕ್ಷ ಒಳಗೆ ಇದ್ದರೆ	ಮೌಲ್ಯದ ಶೇಕಡ 2 ರಷ್ಟು		
			3. ಮಾರುಕಟ್ಟೆ ಮೌಲ್ಯ ಹತ್ತು ಲಕ್ಷ ಮೇಲ್ಪಟ್ಟು ಮತ್ತು ರೂ.20 ಲಕ್ಷ ಒಳಗೆ ಇದ್ದರೆ	ಮೌಲ್ಯದ ಶೇಕಡ 3 ರಷ್ಟು		
			4. ಮಾರುಕಟ್ಟೆ ಮೌಲ್ಯ 20 ಲಕ್ಷ ಮೀರಿದರೆ	ಮೌಲ್ಯದ ಶೇಕಡ 5 ರಷ್ಟು		

1	2	3	4	5	6	7
9.	ವ್ಯವಸ್ಥಾ ಪತ್ರ	48 (ಅ) (ii)	ವ್ಯವಸ್ಥಾಕರ್ತನು ತನ್ನ ಆಸ್ತಿಯನ್ನು ಕುಟುಂಬದ ಸದಸ್ಯರಿಗೆ ಹಂಚಿಕೆ ಮಾಡುವಲ್ಲಿ		ವ್ಯವಸ್ಥಾಕರ್ತನು ತನ್ನ ಆಸ್ತಿಯನ್ನು ಕುಟುಂಬದ ಸದಸ್ಯರಿಗೆ ಹಂಚಿಕೆ ಮಾಡುವಲ್ಲಿ	ರೂ. 1000
			1. ಮಾರುಕಟ್ಟೆ ಮೌಲ್ಯ ರೂ.50,000 ಕ್ಕಿಂತ ಕಡಿಮೆ ಇದ್ದಲ್ಲಿ	ರೂ. 500		
			2. ಮಾರುಕಟ್ಟೆ ಮೌಲ್ಯ ರೂ.50,000 ಮೇಲ್ಪಟ್ಟು ಮತ್ತು ರೂ. 10ಲಕ್ಷ ಒಳಗೆ ಇದ್ದರೆ	ಮೌಲ್ಯದ ಶೇಕಡ 2 ರಷ್ಟು		
			3. ಮಾರುಕಟ್ಟೆ ಮೌಲ್ಯ ಹತ್ತು ಲಕ್ಷ ಮೇಲ್ಪಟ್ಟು ಮತ್ತು ರೂ.20 ಲಕ್ಷ ಒಳಗೆ ಇದ್ದರೆ	ಮೌಲ್ಯದ ಶೇಕಡ 3 ರಷ್ಟು		
			4. ಮಾರುಕಟ್ಟೆ ಮೌಲ್ಯ 20 ಲಕ್ಷ ಮೀರಿದರೆ	ಮೌಲ್ಯದ ಶೇಕಡ 5 ರಷ್ಟು		

ಅನುಬಂಧ - IX (ಪ್ಯಾರ 216)

ಕರ್ನಾಟಕ ನೋಂದಣಿ ನಿಯಮ 1965 ರ ಫೀ ಕೋಷ್ಟಕಕ್ಕೆ ಪ್ರಸ್ತಾಪಿತ ಪರಿಷ್ಕೃತ ಶುಲ್ಕ

ಕ್ರ.ಸಂ.	ವಿವರ	ಅನುಚ್ಛೇಧ	ಹಾಲಿ ದರ	ಪ್ರಸ್ತಾಪಿತ ದರ
1	2	3	4	5
1.	ಗುತ್ತಿಗೆ ಮತ್ತು ಮಾರಾಟ ಒಪ್ಪಂದ	1 (2)	2% ಆ್ಯಡ್‌ವಾಲೆರಮ್	ಗುತ್ತಿಗೆ ಮತ್ತು ಮಾರಾಟ ಒಪ್ಪಂದದ ಸಮಯದಲ್ಲಿ ಪೂರ್ಣ ನೋಂದಣಿ ಶುಲ್ಕ ಆಕರಣೆ ಮಾಡಿದ್ದಲ್ಲಿ ತದನಂತರ ಕ್ರಯಪತ್ರಕ್ಕೆ ಶುಲ್ಕವನ್ನು ಶೇಕಡ 2 ರಂತೆ ಗರಿಷ್ಠ ಮಿತಿ ರೂ.500 ನಿಗದಿಪಡಿಸಿದೆ.
2.	ಹರಾಜು ಮಾರಾಟ ಒಪ್ಪಂದ	1 (2)	2% ಆ್ಯಡ್‌ವಾಲೆರಮ್	ಹರಾಜು ಮಾರಾಟ ಒಪ್ಪಂದದ ಸಮಯದಲ್ಲಿ ಪೂರ್ಣ ನೋಂದಣಿ ಶುಲ್ಕ ಆಕರಣೆ ಮಾಡಿದ್ದಲ್ಲಿ ತದನಂತರದ ಕ್ರಯಪತ್ರಕ್ಕೆ ಶುಲ್ಕವನ್ನು ಶೇಕಡ 2 ರಂತೆ ಗರಿಷ್ಠ ಮಿತಿ ರೂ.500 ನಿಗದಿಪಡಿಸಿದೆ.
3.	ಅಡಮಾನ (ಹಕ್ಕು ಪತ್ರಗಳ ನಿಕ್ಷೇಪ)	1 (2)	2% ಆ್ಯಡ್‌ವಾಲೆರಮ್	ಶೇಕಡ 0.5 ರಂತೆ ಗರಿಷ್ಠ ರೂ.10,000
4.	ತೆರೆದ ಉಯಿಲಿನ ನೋಂದಣಿ	VI	ರೂ.300	ರೂ.200
5.	ಸೀಲ್ ಆಗಿರುವ ಲಕೋಟೆ ತೆರೆಯಲು ಶುಲ್ಕ	IX	ರೂ.500	ರೂ.100
6.	ಸಾಮಾನ್ಯ ಶೋಧನೆ ಅಥವಾ ತಪಾಸಣೆ ಶುಲ್ಕ	XII (2)	ಮಹಾನಗರ ಉಳಿಕೆ ಪಾಲಿಕೆ, ವ್ಯಾಪ್ತಿ ನಗರಸಭೆ ವ್ಯಾಪ್ತಿ	

ಕ್ರ.ಸಂ.	ವಿವರ	ಅನುಚ್ಛೇಧ	ಹಾಲಿ ದರ	ಪ್ರಸ್ತಾಪಿತ ದರ
	1. ಮೊದಲನೆ ವರ್ಷಕ್ಕೆ		ರೂ.30 ರೂ.10	ರೂ.30
	2. ತದನಂತರ ಪ್ರತಿ ವರ್ಷಕ್ಕೆ		ರೂ.30 ರೂ.10	ರೂ.10
7.	ಅನುಚ್ಛೇದ XXXIIರ ಅಡಿ ಶೋಧ ಅಥವಾ ದಸ್ತಾವೇಜಿನ ಅಥವಾ ದಾಖಲೆಯ ಉದ್ಧೃತ ನಕಲು	XXXII	ರೂ.25	ರೂ.5

ಅನುಬಂಧ - X

(ಪ್ಯಾರ 221 ಮತ್ತು 222)

ಕ್ರಮ ಸಂಖ್ಯೆ	ಐಟಂ ವಿವರ	ಆಕರಣೆಗೆ ಇರುವ ಕಲಂ	ಸದ್ಯದ ಪರಿಸ್ಥಿತಿ	ಉದ್ದೇಶಿಸಿರುವ ಬದಲಾವಣೆ
1	2	3	4	5
1.	ಹೆಚ್ಚಿನ ಶುಲ್ಕ ಆಕರಣೆಗೆ ಒಳಪಡುವ ನಿರ್ದಿಷ್ಟ ಲಿಖಿತಗಳು	3 (ಬಿ)	ಆಕರಣೆ ಮಾಡುವ ಹೆಚ್ಚುವರಿ ಶುಲ್ಕವನ್ನು ಸಂಪೂರ್ಣವಾಗಿ ಕರ್ನಾಟಕ ಮೂಲಭೂತ ಸೌಕರ್ಯ ಮತ್ತು ಹಣಕಾಸು ನಿಗಮಕ್ಕೆ ನೀಡಲಾಗುತ್ತಿದೆ.	ಈ ಹೆಚ್ಚುವರಿ ಶುಲ್ಕವನ್ನು 67:33 ಪ್ರಮಾಣದಲ್ಲಿ ಇನ್‌ಫ್ರಾಸ್ಟ್ರಕ್ಚರಲ್ ಡೆವಲಪ್‌ಮೆಂಟ್ ಮತ್ತು ಫೈನಾನ್ಸ್ ಕಾರ್ಪೊರೇಷನ್ (ಕರ್ನಾಟಕ ಲಿಮಿಟೆಡ್) ಮತ್ತು ಬಿ.ಎಂ.ಆರ್.ಟಿ.ಎಲ್. ಮಧ್ಯೆ ಹಂಚಬಹುದಾಗಿದೆ.
2.	ಶುಲ್ಕವನ್ನು ಕಡಿಮೆ, ಮನ್ನಾ ಅಥವಾ ಸೇರಿಸುವ ಅಧಿಕಾರ	9	ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಅಥವಾ ಕಾರ್ಪೊರೇಷನ್ನಿಗೆ ಬರೆದುಕೊಡುವ ಆಧಾರ ಪತ್ರಗಳಿಗೆ ಮುದ್ರಾಂಕ ಶುಲ್ಕ ವಿನಾಯ್ತಿ ಇರುವುದಿಲ್ಲ.	ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಅಥವಾ ಕಾರ್ಪೊರೇಷನ್ನಿಗೆ ಬರೆದುಕೊಡುವ ಆಧಾರ ಪತ್ರಗಳಿಗೆ ಮುದ್ರಾಂಕ ಶುಲ್ಕ ವಿನಾಯ್ತಿ ನೀಡಲಾಗಿದೆ.

ಅನುಬಂಧ - XI

(ಪ್ಯಾರ 224-229)

ಮೋಟಾರು ವಾಹನ ತೆರಿಗೆ

ಕ್ರ. ಸಂ.	ಐಟಂ ನಂ.	ವಾಹನ ವರ್ಗ	ಹಾಲಿ ಇರುವ ತೆರಿಗೆ ದರ ಪ್ರತಿ ಮೂರು ತಿಂಗಳಿಗೆ ರೂ.ಗಳಲ್ಲಿ	ಕ್ರ ಸಂ.	ಐಟಂ ನಂ.	ಉದ್ದೇಶಿತ ವಾಹನಗಳ ವರ್ಗ	ಉದ್ದೇಶಿತ ತೆರಿಗೆ ದರ ಪ್ರತಿ ಮೂರು ತಿಂಗಳಿಗೆ ರೂ.ಗಳಲ್ಲಿ
1	2	3	4	5	6	7	8
1	3	ಸರಕು ವಾಹನ ಒಳಗೊಂಡ ಸಂಚಾರಿ ಫಲಹಾರ, ಸಂಚಾರಿ ಗ್ರಂಥಾಲಯ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಎಕ್ಸ್‌ರೇ ವ್ಯಾನ್, ನಗದು ವಾಹನ, ಕ್ಯಾಂಪರ್ ವ್ಯಾನ್ (ಕ್ಯಾಂಪರ್ ವ್ಯಾನ್ ಬಾಡಿಗೆಗೆ ಅಥವಾ ಸಂಭಾವನೆಗೆ ಉಪಯೋಗಿಸಿದಾಗ).		1	3	ಸರಕು ವಾಹನ ಒಳಗೊಂಡ ಸಂಚಾರಿ ಫಲಹಾರ, ಸಂಚಾರಿ ಗ್ರಂಥಾಲಯ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಎಕ್ಸ್‌ರೇ ವ್ಯಾನ್, ನಗದು ವಾಹನ,	
		1) ಸಮಗ್ರ ವಾಹನ ಭಾರ				1) ಸಮಗ್ರ ವಾಹನ ಭಾರ	
		ಎ) XXX				ಎ) XXX	
		ಬಿ) 1000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 3000 ಕೆ.ಜಿ. ಮೀರದ ಸಮಗ್ರ ವಾಹನ ಭಾರ	600-00			ಬಿ) 1000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 3000 ಕೆ.ಜಿ. ಮೀರದ ಸಮಗ್ರ ವಾಹನ ಭಾರ	800-00
		ಸಿ) 3000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 5500 ಕೆ.ಜಿ. ಮೀರದ ಸಮಗ್ರ ವಾಹನ ಭಾರ	1000-00			ಸಿ) 3000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 5500 ಕೆ.ಜಿ. ಮೀರದ ಸಮಗ್ರ ವಾಹನ ಭಾರ	1200-00

1	2	3	4	5	6	7	8
		ಡಿ) 5500 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 9000 ಕೆ.ಜಿ. ಮೀರದ ಸಮಗ್ರ ವಾಹನ ಭಾರ	1400-00			ಡಿ) XXX	
		ಇ) 9000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 12000 ಕೆ.ಜಿ. ಮೀರದ ಸಮಗ್ರ ವಾಹನ ಭಾರ	1800-00			ಇ) 9000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 12000 ಕೆ.ಜಿ. ಮೀರದ ಸಮಗ್ರಿ ವಾಹನ ಭಾರ	1800-00
		ಎಫ್) 12000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 15000 ಕೆ.ಜಿ. ಮೀರದ ಸಮಗ್ರಿ ವಾಹನ ಭಾರ	2000-00			ಎಫ್) 12000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ ಆದರೆ 15000 ಕೆ.ಜಿ. ಮೀರದ ಸಮಗ್ರಿ ವಾಹನ ಭಾರ	2200-00
		ಜಿ) 15,000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ	2000-00			ಜಿ) 15,000 ಕೆ.ಜಿ. ಮೀರಿದ ಸಮಗ್ರ ವಾಹನ ಭಾರ	2200-00
		15,000 ಕೆ.ಜಿ. ಸಮಗ್ರ ಭಾರ ಮೀರಿದ ಪ್ರತಿ 250 ಕೆ.ಜಿ.ಗೆ ಅಥವಾ ಅದರ ಭಾಗಾಂಶಕ್ಕೆ ರೂ.				15,000 ಕೆ.ಜಿ. ಸಮಗ್ರ ಭಾರ ಮೀರಿದ ಪ್ರತಿ 250 ಕೆ.ಜಿ.ಗೆ ಅಥವಾ ಅದರ ಭಾಗಾಂಶಕ್ಕೆ ರೂ.	
2	4(2)	ಮೋಟಾರು ವಾಹನ, 12 ಪ್ರಯಾಣಿಕರನ್ನು ಮೀರಿ (ಚಾಲಕ ಮತ್ತು ನಿರ್ವಾಹಕರನ್ನು ಹೊರತು ಪಡಿಸಿ) ಸರ್ಕಾರವು ಸೂಚಿಸಿರುವ ನಗರ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಸಂಚರಿಸುವ ವಾಹನದಲ್ಲಿ ಅನುಮತಿಸಿದ ಪ್ರತಿ ಪ್ರಯಾಣಿಕನಿಗ	275-00	2	4(2)	(ಅ) ಮೋಟಾರು ವಾಹನ, 12 ಪ್ರಯಾಣಿಕರನ್ನು ಮೀರಿ (ಚಾಲಕ ಮತ್ತು ನಿರ್ವಾಹಕರನ್ನು ಹೊರತು ಪಡಿಸಿ) ಸರ್ಕಾರವು ಸೂಚಿಸಿರುವ ನಗರ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಸಂಚರಿಸುವ ವಾಹನದಲ್ಲಿ ಅನುಮತಿಸಿದ ಪ್ರತಿ ಪ್ರಯಾಣಿಕನಿಗೆ	300-00

1	2	3	4	5	6	7	8
						(ಅ)ವಾಹನದಲ್ಲಿ ಕರೆದೊಯ್ಯಲು ಅನುಮತಿಸಲ್ಪಟ್ಟ ಪ್ರತಿ ನಿಂತು ಪ್ರಯಾಣಿಸುವ ಪ್ರಯಾಣಿಕರಿಗೆ	100-00
	4(3)	ಮೋಟಾರು ವಾಹನ, 12ಕ್ಕೂ ಹೆಚ್ಚು ಪ್ರಯಾಣಿಕರನ್ನು (ಚಾಲಕ ಮತ್ತು ನಿರ್ವಾಹಕರನ್ನು ಹೊರತುಪಡಿಸಿ) ಕರೆದೊಯ್ಯಲು ಅನುಮತಿಸಲ್ಪಟ್ಟಿರುವ (ಅ)ವಾಹನದಲ್ಲಿ ಕರೆದೊಯ್ಯಲು ಅನುಮತಿಸಲ್ಪಟ್ಟ ಪ್ರತಿ ಪ್ರಯಾಣಿಕರಿಗೆ	450-00		4(3)	ಮೋಟಾರು ವಾಹನ, 12ಕ್ಕೂ ಹೆಚ್ಚು ಪ್ರಯಾಣಿಕರನ್ನು (ಚಾಲಕ ಮತ್ತು ನಿರ್ವಾಹಕರನ್ನು ಹೊರತುಪಡಿಸಿ) ಕರೆದೊಯ್ಯಲು ಅನುಮತಿಸಲ್ಪಟ್ಟಿರುವ (ಅ)ವಾಹನದಲ್ಲಿ ಕರೆದೊಯ್ಯಲು ಅನುಮತಿಸಲ್ಪಟ್ಟ ಪ್ರತಿ ಪ್ರಯಾಣಿಕರಿಗೆ	475-00
3	6	(ಅ)ವಾಹನದಲ್ಲಿ ಕರೆದೊಯ್ಯಲು ಅನುಮತಿಸಲ್ಪಟ್ಟ ಪ್ರತಿ ನಿಂತು ಪ್ರಯಾಣಿಸುವ ಪ್ರಯಾಣಿಕರಿಗೆ	100-00	3	6	(ಅ)ವಾಹನದಲ್ಲಿ ಕರೆದೊಯ್ಯಲು ಅನುಮತಿಸಲ್ಪಟ್ಟ ಪ್ರತಿ ನಿಂತು ಪ್ರಯಾಣಿಸುವ ಪ್ರಯಾಣಿಕರಿಗೆ	100-00
		ಕೇಂದ್ರ ಮೋಟಾರು ವಾಹನ ನಿಯಮ 1989ರ ನಿಯಮ 128 ರನ್ವಯ ಮತ್ತು ಬಾಡಿಗೆಗೆ ಅಥವಾ ಸಂಭಾವನೆಗೆ 12 ಪ್ರಯಾಣಿಕರನ್ನು ಮೀರಿ ಕರೆದೊಯ್ಯಲು ನಿರ್ಮಿಸಲ್ಪಟ್ಟ ಸುಖಾಸೀನ ಮೋಟಾರು ವಾಹನ (ಲಕ್ಸುರಿ ಬಸ್ಸು)ದ (ಚಾಲಕ, ನಿರ್ವಾಹಕ : ಸಹಾಯಕರನ್ನು ಹೊರತು ಪಡಿಸಿ) ಪ್ರತಿ ಪ್ರಯಾಣಿಕರಿಗೆ	1400-00			ಮೋಟಾರು ವಾಹನ (ಸುಖಾಸೀನ ಬಸ್ಸು) ಬಾಡಿಗೆಗೆ ಅಥವಾ ಸಂಭಾವನೆಗೆ 12 ಜನ ಪ್ರಯಾಣಿಕರನ್ನು ಮೀರಿ ಕರೆದೊಯ್ಯಲು 1989ನೇ ಕೇಂದ್ರ ಮೋಟಾರು ವಾಹನ ನಿಯಮಾವಳಿಯ ನಿಯಮ 128ಕ್ಕೆ ತಕ್ಕಂತೆ ನಿರ್ಮಿಸಿದ ಅಥವಾ ಅಳವಡಿಸಿದ ಅಥವಾ ಕೇಂದ್ರ ಮೋಟಾರು ವಾಹನ (ಅಖಿಲ	

1	2	3	4	5	6	7	8
				4		ಭಾರತ ಪರವಾನಿಗೆ ಪ್ರವಾಸಿ ಸಾಲಿಗೆ ಪ್ರವರ್ತಕರು) ನಿಯಮ 1993:95ರ ಅಡಿಯಲ್ಲಿ ಪರವಾನಿಗೆ ಹೊಂದಿದ ಮೋಟಾರು ವಾಹನದ (ಚಾಲಕ, ನಿರ್ವಾಹಕ : ಸಹಾಯಕನನ್ನು ಹೊರತುಪಡಿಸಿ) ಪ್ರತಿ ಪ್ರಯಾಣಿಕನಿಗೆ	1400-00
4	7	(ಅ) XXX (ಅ) ಕೇಂದ್ರ ಮೋಟಾರು ವಾಹನ (ಅಖಿಲ ಭಾರತ ಪರವಾನಿಗೆ ಪ್ರವಾಸಿ ಸಾಲಿಗೆ ಪ್ರವರ್ತಕರು) ನಿಯಮ 1993 : 95ರ ಅಡಿಯಲ್ಲಿ ಪರವಾನಿಗೆ ಹೊಂದಿದ್ದು ಬಾಡಿಗೆ ಅಥವಾ ಸಂಭಾವನೆಗೆ 12 ಪ್ರಯಾಣಿಕರನ್ನು ಮೀರಿ ಕರೆದೊಯ್ಯಲು ಅನುಮತಿಸಿರುವ ಮೋಟಾರು ವಾಹನದ (ಚಾಲಕ, ನಿರ್ವಾಹಕ: ಸಹಾಯಕನನ್ನು ಹೊರತುಪಡಿಸಿ) ಪ್ರತಿ ಪ್ರಯಾಣಿಕನಿಗೆ	1200-00			ಐಟಂ 7 (ಅ) ಯನ್ನು ಕೈಬಿಡಲಾಗಿದೆ.	
5	7	ಹಾಲಿ ಇರುವುದಿಲ್ಲ		5	7	ಬಾಡಿಗೆಗೆ ಅಥವಾ ಸಂಭಾವನೆಗೆ ಉಪಯೋಗಿಸುವ ಕ್ಯಾಂಪಸ್ ವಾಹನದ ನೆಲ ವಿಸ್ತೀರ್ಣದ ಆಧಾರದ ಮೇಲೆ, ಪ್ರತಿ ಚದರ ಮೀಟರ್‌ಗಳಿಗೆ	2000-00

1	2	3	4	5	6	7	8
6	11	ಕ್ರೇನ್, ಮೊಬೈಲ್ ಕ್ರೇನ್, ಟವರ್ ವ್ಯಾಗನ್, ಟ್ರಿ-ಟ್ರಿಮ್ಮಿಂಗ್ ವೆಹಿಕಲ್, ಫೋರ್ಕ್ ಲಿಫ್ಟ್, ಟ್ರಾಕ್ಟರ್ ಫಿಟ್ಟೆಡ್ ವಿತ್ ಏರ್ ಕಂಪ್ರೆಶರ್ ಅಥವಾ ಜನರೇಟರ್, ಪ್ರತಿ 1000 ಕಿ.ಗ್ರಾ. ತೂಕ ರಹಿತ ಭಾರ ಅಥವಾ ಭಾಗಾಂಶಕ್ಕೆ		6	11	ಕ್ರೇನ್, ಮೊಬೈಲ್ ಕ್ರೇನ್, ಟವರ್ ವ್ಯಾಗನ್, ಟ್ರಿ-ಟ್ರಿಮ್ಮಿಂಗ್ ವೆಹಿಕಲ್, ಫೋರ್ಕ್ ಲಿಫ್ಟ್, ಅಳವಡಿಸಿದ ವಾಹನದ ಏರ್ ಕಂಪ್ರೆಶರ್ ಅಥವಾ ಜನರೇಟರ್, ಪ್ರತಿ 1000 ಕಿ.ಗ್ರಾ. ತೂಕ ರಹಿತ ಭಾರ ಅಥವಾ ಭಾಗಾಂಶಕ್ಕೆ	2000-00
7	13	ಡ್ರಿಲ್ಲಿಂಗ್ ರಿಗ್ ಅಥವಾ ಏರ್‌ಕಂಪ್ರಸರ್ ಜೋಡಿಸಲ್ಪಟ್ಟ ಡ್ರಿಲಿಂಗ್ ರಿಗ್ ಯುನಿಟ್ ಹೊಂದಿರುವ ಸರಕು ವಾಹನಗಳಿಗೆ	750-00	7	13	ಡ್ರಿಲ್ಲಿಂಗ್ ರಿಗ್ ಅಥವಾ ಏರ್‌ಕಂಪ್ರಸರ್ ಜೋಡಿಸಲ್ಪಟ್ಟ ಡ್ರಿಲಿಂಗ್ ರಿಗ್ ಯುನಿಟ್ ಹೊಂದಿರುವ ಸರಕು ವಾಹನಗಳಿಗೆ	3000-00
8	14	ಕಂಪನಿಗಳ ಒಡೆತನದ ಕಾರುಗಳಿಗೆ ತೂಕ ರಹಿತ ಭಾರದ ಮೇಲೆ		8	14	ಐಟಂ 14 ಅನ್ನು ಕೈಬಿಡಲಾಗಿದೆ.	
		(ಅ) 1500 ಕೆ.ಜಿ. ಮೀರದ	1500-00				
		(ಆ) 1500 ಕೆ.ಜಿ. ಮೀರಿದ	1680-00				
		(ಇ) ಟ್ರೈಲರ್‌ಗಳನ್ನು ಎಳೆಯಲು ಬಳಸುವ ವಾಹನಗಳಿಗೆ ಪಾವತಿಸಬೇಕಾಗುವ ಹೆಚ್ಚುವರಿ ತೆರಿಗೆ	50-00				

1	2	3	4	5	6	7	8
9	15	ಕಂಪನಿಯ ಒಡೆತನ ಹೊರತುಪಡಿಸಿ ವ್ಯಕ್ತಿಗಳ ಒಡೆತನದಲ್ಲಿರುವ, 1985 ಅಥವಾ ಅದರ ನಂತರದ ವರ್ಷಗಳಲ್ಲಿ ತಯಾರಿಸಲ್ಪಟ್ಟ ಅಥವಾ ಜೋಡಿಸಲ್ಪಟ್ಟ ವಿದೇಶಿ ಕಾರುಗಳ ತೂಕ ರಹಿತ ಭಾರದ ಮೇಲೆ		9	15	ಐಟಂ 15 ಅನ್ನು ಕೈಬಿಡಲಾಗಿದೆ	
		(ಅ) 1500 ಕೆ.ಜಿ. ಮೀರದ	1500-00				
		(ಆ) 1500 ಕೆ.ಜಿ. ಮೀರಿದ	1680-00				
		(ಇ) ಟ್ರೈಲರ್‌ಗಳನ್ನು ಎಳೆಯಲು ಬಳಸುವ ವಾಹನಗಳಿಗೆ ಪಾವತಿಸಬೇಕಾದ ಹೆಚ್ಚುವರಿ ತೆರಿಗೆ	50-00				
10	16	ಷೆಡ್ಯೂಲ್‌ನಲ್ಲಿ ಮೇಲೆ ಸೂಚಿಸಿರುವಂತೆ ತೆರಿಗೆ ವಿಧಿಸಿರುವ ಪ್ರಕರಣಗಳನ್ನು ಹೊರತುಪಡಿಸಿ, ಕ್ಯಾಂಪರ್ ವ್ಯಾನ್ ಮತ್ತು ಇತರ ಮೋಟಾರು ವಾಹನಗಳ ಖಾಲಿ ತೂಕದ ಮೇಲೆ.		10	16	ಷೆಡ್ಯೂಲ್‌ನಲ್ಲಿ ಮೇಲೆ ಸೂಚಿಸಿರುವಂತೆ ತೆರಿಗೆ ವಿಧಿಸಿರುವ ಪ್ರಕರಣಗಳನ್ನು ಹೊರತು ಪಡಿಸಿ, ಬಾಡಿಗೆಗೆ ಅಥವಾ ಸಂಭಾವನೆ ಉಪಯೋಗಿಸದ ಕ್ಯಾಂಪರ್ ವ್ಯಾನ್ ಮತ್ತು ಇತರ ಮೋಟಾರು ವಾಹನಗಳ ಖಾಲಿ ತೂಕದ ಮೇಲೆ.	

ಭಾಗ-ಎ1 (ಪ್ರಕರಣ 3(1))

ಐಟಂ ಸಂಖ್ಯೆ	ವಾಹನಗಳ ವರ್ಗ	75ಸಿಸಿ ಗಳನ್ನು ಮೀರದ ವಾಹನಗಳು	75ಸಿಸಿ ಮೀರಿದ ಹಾಗೂ 300 ಸಿಸಿ ಗಳನ್ನು ಮೀರದ ವಾಹನಗಳು	300ಸಿಸಿ ಗಳನ್ನು ಮೀರಿದ ಅಥವಾ ಸೈಡ್ ಕಾರು ಅಥವಾ ಟ್ರೈಲರ್‌ಗಳನ್ನು ಹೊಂದಿರುವ ಮೋಟಾರು ಸೈಕಲ್‌ಗಳು	ಐಟಂ ಸಂಖ್ಯೆ	ವಾಹನಗಳ ವರ್ಗ	75ಸಿಸಿ ಗಳನ್ನು ಮೀರದ ವಾಹನಗಳು	75ಸಿಸಿ ಮೀರಿದ ಹಾಗೂ 300 ಸಿಸಿ ಗಳನ್ನು ಮೀರದ ವಾಹನಗಳು	300ಸಿಸಿ ಗಳನ್ನು ಮೀರಿದ ಅಥವಾ ಸೈಡ್ ಕಾರು ಅಥವಾ ಟ್ರೈಲರ್‌ಗಳನ್ನು ಹೊಂದಿರುವ ಮೋಟಾರು ಸೈಕಲ್‌ಗಳು
ಅ)	ಹೊಸ ವಾಹನದ ನೋಂದಾವಣೆಯ ಸಮಯದಲ್ಲಿ	1100-00	2500-00	3500-00	ಅ)	ಹೊಸ ವಾಹನದ ನೋಂದಾವಣೆಯ ಸಮಯದಲ್ಲಿ	1100-00 ಅಥವಾ ಮೌಲ್ಯದ ಶೇಕಡಾ 7 ರಷ್ಟು ಯಾವುದು ಹೆಚ್ಚೋ ಅದು	2500-00 ಅಥವಾ ಮೌಲ್ಯದ ಶೇಕಡಾ 7 ರಷ್ಟು ಯಾವುದು ಹೆಚ್ಚೋ ಅದು	3500-00 ಅಥವಾ ಮೌಲ್ಯದ ಶೇಕಡಾ 7 ರಷ್ಟು ಯಾವುದು ಹೆಚ್ಚೋ ಅದು
	ಬಾಕಿ ಐಟಂಗಳಲ್ಲಿ ಯಾವುದೇ ಬದಲಾವಣೆಯಿಲ್ಲ								

ಟಿಪ್ಪಣಿ ಹೊರತುಪಡಿಸಿ ಬಾಕಿ ಐಟಂಗಳಲ್ಲಿ ಯಾವುದೇ ಬದಲಾವಣೆಯಿಲ್ಲ

ಟಿಪ್ಪಣಿ:

(1) 2001 ಏಪ್ರಿಲ್ ಮೊದಲನೆಯ ದಿನಕ್ಕೆ ಮುಂಚೆ ಜೀವನ ಪರ್ಯಂತ ತೆರಿಗೆ ಮತ್ತು ಫ್ಲೋರ್ ಏರಿಯಾ ತೆರಿಗೆ ಬಾಕಿ ಇರುವಂಥ ವಾಹನಗಳಿಗೆ ತೆರಿಗೆ ಸಂದಾಯ ಮಾಡಿರದಿದ್ದರೆ ಅಂಥ ತೆರಿಗೆಯನ್ನು 2001ರ ಏಪ್ರಿಲ್ ಮೊದಲನೆಯ ದಿನಾಂಕಕ್ಕೆ ಮುಂಚೆ ಇದ್ದ ದರಗಳಲ್ಲಿ ವಸೂಲು ಮಾಡತಕ್ಕದ್ದು.

(2) ಈ ಭಾಗದಲ್ಲಿ ನಿರ್ದಿಷ್ಟಪಡಿಸಿರುವ ದರಗಳು, ಕೇಂದ್ರ ಸರ್ಕಾರದ ನೌಕರರು ಅಥವಾ ರಕ್ಷಣಾ ಸಿಬ್ಬಂದಿಯವರು ಹೊಂದಿರುವ ವಾಹನಗಳಿಗೆ ಅನ್ವಯಿಸತಕ್ಕದ್ದಲ್ಲ.

ಭಾಗ-ಎ5

(3 (1)ನೇ ಪ್ರಕರಣ ನೋಡಿ)

ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳ ಜೀವನ ಪರ್ಯಂತ ತೆರಿಗೆ

ಐಟಂ ಸಂಖ್ಯೆ	ವಾಹನಗಳ ವರ್ಗ	800 ಸಿ.ಸಿ. ಗಳನ್ನು ಮೀರದ ಮೋಟಾರು ಕಾರುಗಳು ಮತ್ತು ಜೀಪುಗಳು	800 ಸಿ.ಸಿ. ಮೀರಿದ ಆದರೆ 1500 ಸಿ.ಸಿ. ಮೀರದ ಮೋಟಾರು ಕಾರುಗಳು ಮತ್ತು ಜೀಪುಗಳು	1500 ಸಿ.ಸಿ. ಗಳಿಗೆ ಮೀರಿದ ಅಥವಾ ಟ್ರೈಲರ್ ಜೋಡಿಸಿದ ಮೋಟಾರು ಕಾರು ಮತ್ತು ಜೀಪು	ಮೋಟಾರು ಕಾರುಗಳು ಮತ್ತು ಜೀಪುಗಳ ಬೆಲೆಯು 6 ಲಕ್ಷ ರೂ. ಮೀರಿದ್ದಲ್ಲಿ	4 ಚದರ ಮೀಟರುಗಳು ನೆಲ ವಿಸ್ತೀರ್ಣವನ್ನು ಹೊಂದಿರುವ ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	4 ಚ.ಮೀ. ಗಳನ್ನು ಮೀರಿದ ಮತ್ತು 5ಚ.ಮೀ. ಗಳನ್ನು ಮೀರದ ನೆಲ ವಿಸ್ತೀರ್ಣವನ್ನು ಹೊಂದಿರುವ ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು
1	2	3	4	5	6	7	8
1.	ಹೊಸ ವಾಹನ ನೋಂದಾವಣೆಯ ಸಮಯದಲ್ಲಿ	12000	18000	24000	45000	30000	36000

ಬಾಕಿ ಐಟಂಗಳಲ್ಲಿ ಯಾವುದೇ ಬದಲಾವಣೆಯಿಲ್ಲ

ಭಾಗ-ಎ5 (3 (1)ನೇ ಪ್ರಕರಣ ನೋಡಿ)

ಪ್ರಸ್ತಾವಿತ ದರ-ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳ ಜೀವನ ಪರ್ಯಂತ ತೆರಿಗೆ

ಐಟಂ ಸಂಖ್ಯೆ	ವಾಹನಗಳ ವರ್ಗ	800 ಸಿ.ಸಿ. ಗಳನ್ನು ಮೀರದ ಮೋಟಾರು ಕಾರುಗಳು ಮತ್ತು ಜೀಪುಗಳು	800 ಸಿ.ಸಿ. ಮೀರಿದ ಆದರೆ 1500 ಸಿ.ಸಿ. ಮೀರದ ಮೋಟಾರು ಕಾರುಗಳು ಮತ್ತು ಜೀಪುಗಳು	1500 ಸಿ.ಸಿ. ಗಳಿಗೆ ಮೀರಿದ ಅಥವಾ ಟ್ರೈಲರ್ ಜೋಡಿಸಿದ ಮೋಟಾರು ಕಾರು ಮತ್ತು ಜೀಪು	ಮೋಟಾರು ಕಾರುಗಳು ಮತ್ತು ಜೀಪುಗಳ ಬೆಲೆಯು 6 ಲಕ್ಷ ರೂ. ಮೀರಿದ್ದಲ್ಲಿ	4 ಚದರ ಮೀಟರುಗಳ ನೆಲ ವಿಸ್ತೀರ್ಣವನ್ನು ಹೊಂದಿರುವ ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	4 ಚ.ಮೀ. ಗಳನ್ನು ಮೀರಿದ ಮತ್ತು 5ಚ.ಮೀ. ಗಳನ್ನು ಮೀರದ ನೆಲ ವಿಸ್ತೀರ್ಣವನ್ನು ಹೊಂದಿರುವ ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು
1	2	3	4	5	6	7	8
1.	ಹೊಸ ವಾಹನ ನೋಂದಾವಣೆಯ ಸಮಯದಲ್ಲಿ	12000 ಅಥವಾ ಮೌಲ್ಯದ ಶೇಕಡ 7ರಷ್ಟು ಯಾವುದು ಹೆಚ್ಚೋ, ಅದು	18000 ಅಥವಾ ಮೌಲ್ಯದ ಶೇಕಡ 7ರಷ್ಟು ಯಾವುದು ಹೆಚ್ಚೋ, ಅದು	24000 ಅಥವಾ ಮೌಲ್ಯದ ಶೇಕಡ 7ರಷ್ಟು ಯಾವುದು ಹೆಚ್ಚೋ, ಅದು	45000 ಅಥವಾ ಮೌಲ್ಯದ ಶೇಕಡ 7ರಷ್ಟು ಯಾವುದು ಹೆಚ್ಚೋ, ಅದು	30000 ಅಥವಾ ಮೌಲ್ಯದ ಶೇಕಡ 7ರಷ್ಟು ಯಾವುದು ಹೆಚ್ಚೋ, ಅದು	36000 ಅಥವಾ ಮೌಲ್ಯದ ಶೇಕಡ 7ರಷ್ಟು ಯಾವುದು ಹೆಚ್ಚೋ, ಅದು

ಟಿಪ್ಪಣಿ:

(1) 2001ರ ಏಪ್ರಿಲ್ ಮೊದಲನೆಯ ದಿನಕ್ಕೆ ಮುಂಚೆ ಜೀವನ ಪರ್ಯಂತ ತೆರಿಗೆ ಮತ್ತು ನೆಲ ವಿಸ್ತೀರ್ಣ ತೆರಿಗೆ ಬಾಕಿ ಇರುವಂಥ ವಾಹನಗಳಿಗೆ ತೆರಿಗೆ ಸಂದಾಯ ಮಾಡಿರದಿದ್ದರೆ ಅಂಥ ತೆರಿಗೆಯನ್ನು 2001ರ ಏಪ್ರಿಲ್ ಮೊದಲನೆಯ ದಿನಾಂಕಕ್ಕೆ ಮುಂಚೆ ಇದ್ದ ದರಗಳಲ್ಲಿ ವಸೂಲು ಮಾಡತಕ್ಕದ್ದು.

(2) ಈ ಭಾಗದಲ್ಲಿ ನಿರ್ದಿಷ್ಟಪಡಿಸಿರುವ ದರಗಳು, ಕೇಂದ್ರ ಸರ್ಕಾರದ ನೌಕರರು ಅಥವಾ ರಕ್ಷಣಾ ಸಿಬ್ಬಂದಿಯವರು ಹೊಂದಿರುವ ವಾಹನಗಳಿಗೆ ಅನ್ವಯಿಸತಕ್ಕದ್ದಲ್ಲ.

ಭಾಗ - ಬಿ

ಕ್ರ. ಸಂ.	ಪಟಂ ಸಂಖ್ಯೆ	ವಾಹನ ವರ್ಗ	ಈಗಿರುವ ತೆರಿಗೆ ದರ 7 ದಿವಸಗಳಿಗೆ ಮೀರದ ಅವಧಿಗೆ	ಈಗಿರುವ ತೆರಿಗೆ ದರ 7 ದಿವಸಗಳಿಗೆ ಮೀರಿದ 31 ದಿವಸಗಳಿಗೆ ಮೀರದ ಅವಧಿಗೆ	ಕ್ರ. ಸಂ.	ಪಟಂ ಸಂಖ್ಯೆ	ಉದ್ದೇಶಿತ ವಾಹನಗಳ ವರ್ಗ	ಉದ್ದೇಶಿತ ತೆರಿಗೆಯ ದರ 7 ದಿವಸಗಳಿಗೆ ಮೀರಿದ ಅವಧಿಗೆ	ಉದ್ದೇಶಿತ ತೆರಿಗೆಯ ದರ 7 ದಿವಸಗಳಿಗೆ ಮೀರದ 31 ದಿವಸಗಳಿಗೆ ಮೀರದ ಅವಧಿಗೆ
1	2	3	4	5	6	7	8	9	10
1	3	ಸರಕು ವಾಹನ ಒಳಗೊಂಡ ಸಂಚಾರಿ ಫಲಹಾರ, ಸಂಚಾರಿ ಗ್ರಂಥಾಲಯ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಎಕ್ಸ್ರೇ ವ್ಯಾನ್, ನಗದು ವಾಹನ, ಕ್ಯಾಂಪರ್ ವ್ಯಾನ್ (ಕ್ಯಾಂಪರ್ ವ್ಯಾನ್ ಬಾಡಿಗೆಗೆ ಅಥವಾ ಸಂಭಾವನೆಗೆ ಉಪಯೋಗಿಸಿದ್ದಾಗ).			1	3	ಸರಕು ವಾಹನ ಒಳಗೊಂಡ ಸಂಚಾರಿ ಫಲಹಾರ, ಸಂಚಾರಿ ಗ್ರಂಥಾಲಯ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಎಕ್ಸ್ರೇ ವ್ಯಾನ್, ನಗದು ವಾಹನ.		
2	6	ಕೇಂದ್ರ ಮೋಟಾರು ವಾಹನ ನಿಯಮ 1989ರ ನಿಯಮ 128 ರನ್ವಯ ಮತ್ತು ಬಾಡಿಗೆಗೆ ಅಥವಾ ಸಂಭಾವನೆಗೆ 12 ಪ್ರಯಾಣಿಕರನ್ನು ಮೀರಿ ಕರೆದೊಯ್ಯಲೂ ನಿರ್ಮಿಸಲ್ಪಟ್ಟ ಸುಖಾಸೀನ ಮೋಟಾರು ವಾಹನ (ಲಕ್ಷುರಿ ಬಸ್ಸು)ದ (ಚಾಲಕ, ನಿರ್ವಾಹಕ : ಸಹಾಯಕರನ್ನು ಹೊರತು ಪಡಿಸಿ) ಪ್ರತಿ ಪ್ರಯಾಣಿಕರಿಗೆ	200-00	400-00	2	6	ಕೇಂದ್ರ ಮೋಟಾರು ವಾಹನ ನಿಯಮ 1989ರ ನಿಯಮ 128 ರನ್ವಯ ಮತ್ತು ಬಾಡಿಗೆಗೆ ಅಥವಾ ಸಂಭಾವನೆಗೆ 12 ಪ್ರಯಾಣಿಕರನ್ನು ಮೀರಿ ಕರೆದೊಯ್ಯಲು ನಿರ್ಮಿಸಲ್ಪಟ್ಟ ಸುಖಾಸೀನ ಮೋಟಾರು ವಾಹನ (ಲಕ್ಷುರಿ ಬಸ್ಸು)ದ (ಚಾಲಕ, ನಿರ್ವಾಹಕ : ಸಹಾಯಕರನ್ನು ಹೊರತು ಪಡಿಸಿ) ಪ್ರತಿ ಪ್ರಯಾಣಿಕರಿಗೆ	300-00	600-00

1	2	3	4	5	6	7	8	9	10
3	7	ಮೋಟಾರು ವಾಹನ ಬಾಡಿಗೆಗೆ ಅಥವಾ ಸಂಭಾವನೆಗೆ, 1988ನೇ ಮೋಟಾರು ವಾಹನ ಕಾಯ್ದೆಯ ಪ್ರಕರಣ 88 (9)ರ ಅಡಿಯಲ್ಲಿ ರಹದಾರಿಯನ್ನು ಪಡೆದು 12 ಜನ ಪ್ರಯಾಣಿಕರನ್ನು ಮೀರಿ (ಚಾಲಕ, ನಿರ್ವಹಕ : ಸಹಾಯಕರನ್ನು ಹೊರತು ಪಡಿಸಿ) ಕರೆದೊಯ್ಯಲು ಅನುಮತಿಸಿದ, ಪ್ರತಿ ಪ್ರಯಾಣಿಕನಿಗೆ	300-00	600-00	3	7	ಕ್ಯಾಂಪರ್ಸ್ ವಾಹನ : ಸ್ಲೀಪರ್ ಕೋಚ್ ಬಾಡಿಗೆಗೆ ಅಥವಾ ಸಂಭಾವನೆಗೆ ಉಪಯೋಗಿಸಿದಾಗ ನೆಲ ವಿಸ್ತೀರ್ಣದ ಆಧಾರದ ಮೇಲೆ ಪ್ರತಿ ಚದರ ಮೀಟರ್‌ಗಳಿಗೆ	400-00	800-00
4	13	ಡ್ರಿಲ್ಲಿಂಗ್ ರಿಗ್ ಅಥವಾ ಏರ್‌ಕಂಪ್ರಸರ್ ಜೋಡಿಸಲ್ಪಟ್ಟ ಡ್ರಿಲಿಂಗ್ ರಿಗ್ ಯುನಿಟ್ ಹೊಂದಿರುವ ಸರಕು ವಾಹನಗಳಿಗೆ	250-00	500-00	4	13	ಡ್ರಿಲ್ಲಿಂಗ್ ರಿಗ್ ಅಥವಾ ಏರ್‌ಕಂಪ್ರಸರ್ ಜೋಡಿಸಲ್ಪಟ್ಟ ಡ್ರಿಲಿಂಗ್ ರಿಗ್ ಯುನಿಟ್ ಹೊಂದಿರುವ ಸರಕು ವಾಹನಗಳಿಗೆ	500-00	1000-00
5	16	ಷಡ್ಯೂಲ್‌ನಲ್ಲಿ ಮೇಲೆ ಸೂಚಿಸಿರುವಂತೆ ತೆರಿಗೆ ವಿಧಿಸಿರುವ ಪ್ರಕರಣಗಳನ್ನು ಹೊರತುಪಡಿಸಿ, ಕ್ಯಾಂಪರ್ ವ್ಯಾನ್ ಮತ್ತು ಮೋಟಾರು ವಾಹನಗಳ ಖಾಲಿ ತೂಕದ ಮೇಲೆ			5	16	ಷಡ್ಯೂಲ್‌ನಲ್ಲಿ ಮೇಲೆ ಸೂಚಿಸಿರುವಂತೆ ತೆರಿಗೆ ವಿಧಿಸಿರುವ ಪ್ರಕರಣಗಳನ್ನು ಹೊರತುಪಡಿಸಿ, ಬಾಡಿಗೆಗೆ ಅಥವಾ ಸಂಭಾವನೆಗೆ ಉಪಯೋಗಿಸದ ಕ್ಯಾಂಪರ್ ವ್ಯಾನ್ ಮತ್ತು ಮೋಟಾರು ವಾಹನಗಳ ಖಾಲಿ ತೂಕದ ಮೇಲೆ.		

1	2	3	4	5	6	7	8	9	10
6	17	ಕ್ರೇನ್, ಮೊಬೈಲ್ ಕ್ರೇನ್, ಟವರ್ ವ್ಯಾಗನ್, ಟ್ರಿ-ಟ್ರಿಮ್ಮಿಂಗ್ ವೆಹಿಕಲ್, ಫೋರ್ಕ್ ಲಿಫ್ಟ್, ಟ್ರಾಕ್ಟರ್ ಫಿಟ್ಟೆಡ್ ವಿತ್ ಏರ್ ಕಂಪ್ರೆಶರ್ ಅಥವಾ ಜನರೇಟರ್, ಪ್ರತಿ 1000 ಕಿ.ಗ್ರಾಂ. ತೂಕ ರಹಿತ ಭಾರ ಅಥವಾ ಭಾಗಾಂಶಕ್ಕೆ			6	17	ಕ್ರೇನ್, ಮೊಬೈಲ್ ಕ್ರೇನ್, ಟವರ್ ವ್ಯಾಗನ್, ಟ್ರಿ-ಟ್ರಿಮ್ಮಿಂಗ್ ವೆಹಿಕಲ್, ಫೋರ್ಕ್ ಲಿಫ್ಟ್, ಏರ್ ಕಂಪ್ರೆಶರ್ ಅಥವಾ ಜನರೇಟರ್ ಅಳವಡಿಸಿರುವ ವಾಹನ ಪ್ರತಿ 1000 ಕಿ.ಗ್ರಾಂ. ತೂಕ ರಹಿತ ಭಾರ ಅಥವಾ ಭಾಗಾಂಶಕ್ಕೆ		

ವಿವರಣೆ:

8. ತೆರಿಗೆ ಷೆಡ್ಯೂಲ್ ಭಾಗ ಎ5ಕ್ಕೆ ಸಂಬಂಧಿಸಿದಂತೆ ವಾಹನದ ಮೌಲ್ಯ ಅಂದರೆ ಸರ್ಕಾರವು ಕಾಲಕಾಲಕ್ಕೆ ವಿಧಿಸುವ ಎಲ್ಲಾ ತೆರಿಗೆಗಳನ್ನು ಒಳಗೊಂಡ ಮಾರಾಟ ಬೆಲೆ.

ವಿವರಣೆ:

8 ವಾಹನದ ಮೌಲ್ಯಕ್ಕೆ ಸಂಬಂಧಿಸಿದಂತೆ

(ಅ) ಭಾರತದಲ್ಲಿ ತಯಾರಿಸಿದ ವಾಹನ ಅಂದರೆ, ವಾಹನ ತಯಾರಕರು ಅಥವಾ ಮಾರಾಟಗಾರರು ನೀಡಿರುವ ಖರೀದಿ ಪಟ್ಟಿಯಂತೆ ವಾಹನ ಉತ್ಪಾದನಾ ಖರ್ಚು, ಸುಂಕ ಕರ್ನಾಟಕದಲ್ಲಿ ಪಾವತಿಸಬೇಕಾದ ಮಾರಾಟ ತೆರಿಗೆ ಮತ್ತು ಕರ ಅಥವಾ ಸೆಸ್‌ನ್ನು ಒಳಗೊಂಡಂತೆ ಮತ್ತು

(ಆ) ಯಾವುದೇ ಸ್ಥಳದಲ್ಲಿ ಉತ್ಪಾದನೆಯಾಗಿ ಭಾರತ ದೇಶಕ್ಕೆ ಆಮದಾದ ವಾಹನ ಅಂದರೆ 1962ನೇ ಕಸ್ಟಮ್ ಕಾಯಿದೆಯ ಅಡಿಯಲ್ಲಿ ನಿಗದಿಪಡಿಸಿದ ಬೆಲೆ ಮತ್ತು ಪಾವತಿಸಿದ ಕಸ್ಟಮ್ ಕರ ಹಾಗೂ ಪಾವತಿಸಿದ ಹೆಚ್ಚುವರಿ ಕಸ್ಟಮ್ ಕರ ಒಳಗೊಂಡು, ಕಸ್ಟಮ್ ಇಲಾಖೆಯವರು ಪ್ರವೇಶ ಪತ್ರದಲ್ಲಿ ಹಿಂಬರಹ ಮಾಡಿದ ಬೆಲೆ

ಅನುಬಂಧ - XII (ಪ್ಯಾರ 231)

ಅಧಿಕ ಸಂಪನ್ಮೂಲ ಸಂಗ್ರಹಣೆ

ಕ್ರಮಗಳು 2001-2002

(ಕೋಟಿ ರೂಪಾಯಿಗಳಲ್ಲಿ)

ಬಾಬ್ತು			ಅಸಂಸಂ
1. ವಾಣಿಜ್ಯ ತೆರಿಗೆ	...	...	125.00
2. ಅಬಕಾರಿ	...	...	10.00
3. ಮೋಟಾರು ವಾಹನ ತೆರಿಗೆ	...	...	54.00
4. ಸ್ಟಾಂಪುಗಳು ಮತ್ತು ನೋಂದಣಿ	...	...	95.00
	ಒಟ್ಟು	...	284.00